ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 39 ಪುಟ 20 | ಸೆಪ್ಟೆಂಬರ್ 25, 2016 | ರೂ. 10/-

web: www.janashakthi.co.in e-mail : js_weekly@yahoo.com




ಪೊ ಮೊನೆ ಶಾಜಿ

ಕಾವೇರಿ

ಕರ್ನಾಟಕದ ಬವಣೆ



- ಕಾರಣ, ಪರಿಹಾರ ಏನು?
- ಬೆಂಕಿ ಹಚ್ಚಿದವರು ಯಾರು ?



ಜೆ.ಎನ್.ಯು.: ಎಡ ವಿಜಯ



371 ಜೆ ಕಲಮು ಜಾರಿಯ ಸ್ಥಿತಿ

ಸಾಮಾಜಿಕ ಭದ್ರತೆ ಮತ್ತು ಸಂಘ ಕಟ್ಟುವ ಸ್ವಾತಂತ್ರ್ಯಕ್ಕಾಗಿ ಹಾಗೂ ಕಾರ್ಮಿಕ ಹಕ್ಕುಗಳ ದಮನದ ವಿರುದ್ಧ

CITU 13 ರಾಜ್ಯ ಸಮ್ಮೇಳನ

17-19 ಸೆಪ್ಟೆಂಬರ್ 2016 ಕೂಡಲಸಂಗಮ ಬಾಗಲಕೋಟ

ಸಮಾನತೆಗಾಗಿ ಶ್ರಮಿಸಿದ ಶರಣರ ನಾಡಿನಲ್ಲಿ ಕಾಯಕಜೀವಿಗಳ ಸಮಾಗಮ

ವಿಶೇಷ ಪುರವಣಿ

- ಸಾಧನೆ - ಸವಾಲುಗಳು : ವಿ.ಜೆ.ಕೆ.ನಾಯರ್
- ಜಾಗತೀಕರಣ ಮತ್ತು ಟಿ.ಯು. : ಮೀನಾಕ್ಷಿ ಸುಂದರಂ
- ಸ್ಕೀಂ ಕಾರ್ಮಿಕರ ಚಳುವಳಿ : ಎಸ್.ವರಲಕ್ಷ್ಮಿ
- ಆರ್.ಶ್ರೀನಿವಾಸ್ ಸಂದರ್ಶನ
- ಮೂರು ವರ್ಷದ ಹೋರಾಟಗಳು (ಸಚಿತ್ರ)



ಕೇಂದ್ರ ಗೃಹಮಂತ್ರಿಗಳಿಗೆ ಸೀತಾರಾಮ್ ಯೆಚೂರಿ ಪತ್ರ: ಹರಿಯಾಣದಲ್ಲಿ ಭೂಹೀನ ಕುಟುಂಬದ ಮೇಲಿನ ಅತ್ಯಾಚಾರಗಳ ಬಗ್ಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ಆಗ್ರಹ

ಹರಿಯಾಣದ ಮೇವತ್ ಪ್ರದೇಶದಲ್ಲಿ ಒಂದು ಬಡ ಭೂಹೀನ ಕುಟುಂಬದ ಮೇಲೆ ಭೀಕರ ಅಪರಾದ ಎಸಗಿದ ಘಟನೆ ಆಗಸ್ಟ್ 24–25ರ ರಾತ್ರಿ ನಡೆದಿದೆ. ಈ ಹೀನ ಕೃತ್ಯ ಎಸಗಿದವರು ಸ್ಥಳೀಯ ಗೋರಕ್ಷಾ ದಳದವರು ಎಂದೂ ವರದಿಯಾಗಿದೆ. ಹರಿಯಾಣ ಸರಕಾರ ಮತ್ತು ಅದರ ಆಡಳಿತ ಈ ವಿಷಯದಲ್ಲಿ ಉಪೇಕ್ಷೇ ಮತ್ತು ಅಸಂವೇದನಾಶೀಲತೆಯಿಂದ ವರ್ತಿಸುತ್ತಿದೆ. ಆದ್ದ-ರಿಂದ ಈ ಘೋರ ಕೃತ್ಯವನ್ನು ಕೇಂದ್ರ ಗೃಹಮಂತ್ರಿಗಳ ಗಮನಕ್ಕೆ ತರಲು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಸಪ್ಟಂಬರ್ 9 ರಂದು ಪತ್ರ ಬರೆದಿದ್ದಾರೆ. ಆ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:



ನೋವು ಮತ್ತು ಆತಂಕದಿಂದ ನಾನು ಈ ಪತ್ರವನ್ನು ಬರೆಯಲೇಬೇಕಾಗಿ ಬಂದಿದೆ ಮತ್ತು ಹರಿಯಾಣದ ಮೇವತ್ ಜಿಲ್ಲೆಯ ತವೊರು ಸಬ್‌ಡಿವಿಜನ್ನಿನ ಡಿಂಗರ್‌ಹೇಡಿ ಗ್ರಾಮದ ಜಹುರುದ್ದೀನ್ ಕುಟುಂಬದ ಮೇಲೆ 24 ಮತ್ತು 25 ಆಗಸ್ಟ್ 2016ರ ರಾತ್ರಿ ನಡೆಸಿರುವ ಅತ್ಯಾಚಾರ ಮತ್ತು ಕೊಲೆಯ ಬರ್ಬರತೆ ಕುರಿತ ನಿಜಸಂಗತಿಗಳನ್ನು ನಿಮ್ಮ ಗಮನಕ್ಕೆ ತರಬೇಕಾಗಿದೆ. ಈ ನಿಜಸಂಗತಿಗಳು ಆಗಸ್ಟ್ 30ರಂದು ದಿಂಗರ್‌ಹೇರಿ ಗ್ರಾಮಕ್ಕೆ ಭೇಟಿ ನೀಡಿದ ಸಿಪಿಐ(ಎಂ) ಮುಂಖಂಡರಾದ ಸುರಿಂದರ್ ಸಿಂಗ್ ಮತ್ತು ಇಂದರ್‌ಜಿತ್ ಸಿಂಗ್‌ರವರು ಕಂಡು-ಕೊಂಡ ಸಂಗತಿಗಳು. ಇಂದರ್‌ಜಿತ್ ಸಪ್ಟಂಬರ್ 1ರಂದು ತವೊರುನಲ್ಲಿ ಬಹಳ ಮಂದಿ ಭಾಗವಹಿಸಿದ್ದ ಪಂಚಾಯುತಿನಲ್ಲಿಯೂ ಭಾಗವಹಿಸಿದರು. ಈ ಕೆಳಗಿನ ವಿವರಗಳು ಸಂತ್ರಸ್ತ ಕುಟುಂಬದ ಸದಸ್ಯರು ನಮ್ಮ ಮುಖಂಡರಿಗೆ ನೀಡಿದ ವಿವರಗಳು, ಮಾಧ್ಯಮ ವರದಿಗಳು ಮತ್ತು ಪಂಚಾಯತಿನಲ್ಲಿ ಮಾತಾಡಿದವರು ಹೊರಗೆಡಹಿದ ಸಂಗತಿಗಳನ್ನು ಆಧರಿಸಿದಂತವುಗಳು.

1. ದಿಂಗರ್‌ಹೇರಿ ಗ್ರಾಮದ ಜಹುರುದ್ದೀನ್ ಅವರ ಭೂಹೀನ ಕುಟುಂಬ ಕುಂಡ್ಲಿ–ಮನೇಸರ್–ಪಲಿವಾಲ್ ಹೆದ್ದಾರಿಯ ಸಮೀಪ ಕೆಲವು ಎಕ್ರೆ ಭೂಮಿಯನ್ನು ಗುತ್ತಿಗೆಗೆ ಬೇಸಾಯ ಮಾಡಿ ಜೀವನ ನಡೆಸುವವರು. ಇತರ ಬೇಸಾಯದ ಕುಟುಂಬಗಳಂತೆ ಇವರಿಗೂ ಹಳ್ಳಿಯಲ್ಲಿ ಮನೆಯಿದ್ದರೂ, ಕುಟುಂಬದ ಕೆಲ ಸದಸ್ಯರು ತಮ್ಮ ಗದ್ದೆಯಲ್ಲೇ ಹುಲ್ಲು ಗುಡಿಸಲುಗಳಲ್ಲಿ ಬದುಕುತ್ತಾರೆ.
2. ಪಾನಮತ್ತರಾಗಿದ್ದ ಸ್ಥಳೀಯ ಸಮಾಜ ಘಾತುಕರ ಒಂದು ಗ್ಯಾಂಗ್ 25 ಆಗಸ್ಟ್‌ನ ರಾತ್ರಿ ಇವರ ಗುಡಿಸಲಿಗೆ ನುಗ್ಗಿತು. ಅವರಲ್ಲಿ ನಾಲ್ವರನ್ನು ಈಗ ಪೋಲೀಸರು ಬಂಧಿಸಿದ್ದಾರೆ.
3. ಬಹಳ ಮಟ್ಟಿಗೆ ಅವರು ಕುಟುಂಬದ ಇಬ್ಬರು ಹುಡುಗಿಯರನ್ನು ಗುರಿ ಮಾಡಿಕೊಂಡು ಬಂದಿದ್ದರು. ಆದರೆ ಅವರು ನುಗ್ಗಿದ ಸದ್ದಿಗೆ ಹಿರಿಯ ದಂಪತಿಗಳಿಗೆ (ಇಬ್ರಾಹಿಂ, 38 ಮತ್ತು ರಶೀದಾನ್, 35) ಎಚ್ಚರವಾಯಿತು. ಅವರು ಅತಿಕ್ರಮಣಕಾರರನ್ನು ಎದುರಿಸಿದರು. ಆದರೆ ಅವರಿಗೆ ಬಲವಾಗಿ ಹೊಡೆದು ಗಾಯಗೊಳಿಸಲಾಯಿತು. ಅವರು ಸ್ಥಳದಲ್ಲೇ ಬಲಿಯಾದರು. ಕುಟುಂಬದ ಇತರ ನಾಲ್ಕು ಸದಸ್ಯರೂ, ಜಹುರುದ್ದೀನ್, ಆತನ ಪತ್ನಿ ಆಯಿಶಾ, ಮತ್ತು ಇಬ್ಬರು ಮಕ್ಕಳು ಪರ್ವೆಝ್ ಮತ್ತು ನವೇದ್, ಅನುಕ್ರಮವಾಗಿ 11 ಮತ್ತು 8 ವರ್ಷಗಳು ತೀವ್ರವಾಗಿ ಗಾಯಗೊಂಡರು.



4. ನಂತರ ಆ ಇಬ್ಬರು ಹೆಣ್ಣುಮಕ್ಕಳನ್ನು ಅತ್ಯಾಚಾರ ನಡೆಸಲು ಹಿಡಿದರು. ಅವರಲ್ಲಿ ದೊಡ್ಡವಳು ತಪ್ಪಿಸಿಕೊಂಡು ಬೆಳೆದು ನಿಂತಿದ್ದ ಜವಾರ್ ಬೆಳೆಯ ಹಿಂದೆ ಅವಿತುಕೊಂಡಳು. ಕ್ರಿಮಿನಲ್‌ಗಳು ಅವಳ ಆರು ತಿಂಗಳು ಬಾಲಕನನ್ನು ತಲೆಕೆಳಗಾಗಿ ಹಿಡಿದು-ಕೊಂಡು ಆಕೆ ಶರಣಾಗದಿದ್ದರೆ ಚಾಕುವಿನಲ್ಲಿ ಅವನನ್ನು ತುಂಡುತುಂಡು ಮಾಡುವುದಾಗಿ ಬೆದರಿಸಿದರು. ಪರಿಣಾಮವಾಗಿ ಅವಿತಿದ್ದ ಆಕೆ ಕೊನೆಗೂ ಹೊರ ಬರಬೇಕಾಯಿತು. ಈ ಇಬ್ಬರೂ ಹೆಣ್ಣುಮಕ್ಕಳ ಮೇಲೆ ಬಹುಶಃ ಒಂದು ಗಂಟೆಗೂ ಹೆಚ್ಚು ಸಮಯ ಸಾಮೂಹಿಕ ಅತ್ಯಾಚಾರ ನಡೆಯಿತು. ಕಿರಿಯ ಹುಡುಗಿ 13 ವರ್ಷದ ಮೈನರ್.
5. ಹಳ್ಳಿಯ ಮನೆಯಲ್ಲಿದ್ದ ಕುಟುಂಬದ ಇತರ ಸದಸ್ಯರಿಗೆ ಈ ವಿಷಯ ತಿಳಿದಾಗ ಅವರು ಭಯೋತ್ಪಾದನೆಯ ಜಾಡು ಕಣ್ಣೆದುರೇ ಕಂಡು ಅವಾಕ್ಕಾದರು. ಈ ನಡುವೆ ಪೋಲೀಸರೂ ಬಂದರು. ಆದರೆ ಅವರು ಇ ಅಪರಾಧದ ಗಹನತೆಗೆ ಅನುಗುಣವಾದ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಲಿಲ್ಲ.
6. ಎರಡು ಹೆಣಗಳು ಅಲ್ಲೇ ಬಿದ್ದಿದ್ದರೂ ಇಬ್ಬರೂ ಅತ್ಯಾಚಾರಕ್ಕೆ ಒಳಗಾದವರನ್ನು ಏಕಾಂಗಿಯಾಗಿಯೇ ನೂಹ್ ಜಿಲ್ಲಾ ಮುಖ್ಯಾಲಯಕ್ಕೆ ಸಾಗಿಸಲಾಯಿತು. ಅವರನ್ನು ಒಂದು ಕೋಣೆಯಲ್ಲಿ ಇಡಲಾಯಿತು. ಕುಡಿಯಲು ನೀರು ಕೂಡ ಕೊಡಲಿಲ್ಲ. ಮ್ಯಾಜಿಸ್ಟ್ರೇಟ್ ಎದುರು ಹೇಳಿಕೆ ದಾಖಲಿಸುವ ನೆಪದಲ್ಲಿ ಅವರನ್ನು ಒಯ್ಯಲಾಯಿತು.
7. ಐಪಿಸಿ ಸೆಕ್ಷನ್302ನ್ನು ಘಟನೆ ನಡೆದ ಒಂದು ವಾರದ ನಂತರವೇ, ಅದೂ ಬಾರ್ ಅಸೋಸಿಯೇಶನ್‌ನ ಹಿರಿಯ ವಕೀಲರ ಒತ್ತಾಯ ಮತ್ತು ಮಧ್ಯಪ್ರವೇಶದಿಂದಾಗಿ ಸೇರಿಸಲಾಯಿತು. ಮೊದಲಿಗೆ ಎಫ್‌ಐಆರ್‌ನಲ್ಲಿ ಮನೆಗೆ ನುಗಿದ್ದು. ಸಾವುಂಟು ಮಾಡಿದ್ದು ಮುಂತಾದವಕ್ಕೆ ಸಂಬಂಧಪಟ್ಟ ಸೆಕ್ಷನ್ 460ನ್ನು ಮಾತ್ರ ನಮೂದಿಸಲಾಗಿತ್ತು.
8. ಈ ಭೀಕರ ಅಪರಾಧದಿಂದಾಗಿ ಕುಟುಂಬದವರು ಮತ್ತು ಅವರ ಸಂಬಂಧಿಕರು ಆಗಲೂ ಹೌಹಾರಿದ್ದರು., ಜತೆಗೆ ಪೋಲೀಸ್ ಅಧಿಕಾರಿಗಳ ಅತ್ಯಂತ ಆಕ್ರೋಶಕಾರಿ ಮತ್ತು ಅನುಚಿತ ವರ್ತನೆ ಆ ಇಡೀ ಪ್ರದೇಶದ ಎಲ್ಲ ಸಮುದಾಯಗಳ ಜನಗಳಲ್ಲಿ ಆಳವಾದ ಕ್ರೋಧದ ಭಾವನೆಗೆ ಕಾರಣವಾಯಿತು.
9. ಈ ಎಲ್ಲ ನಾಲ್ಕು ಮಂಧಿ ಸ್ಥಳೀಯ ಗೋರಕ್ಷಾದಳದ ಭಾಗ ಎಂದು ವರದಿಗಳಿವೆ.

ತವೊರು ಪಟ್ಟಣದಲ್ಲಿ ನಡೆದ ನ್ಯಾಯ ಪಂಚಾಯತಿನಲ್ಲಿ ಭಾರೀ ಮಳೆಯನ್ನೂ ಲೆಕ್ಕಿಸದೆ ಜನ ಭಾಗವಹಿಸಿದರು. ಸಿಟ್ಟಿಗೆದ್ದ ಯುವ ಜನರು ಸೇರಿದಂತೆ ಎಲ್ಲ ವಯೋಮಾನದ, ಎಲ್ಲ ಸಮುದಾಯಗಳ ಜನ ಎಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರೆಂದರೆ ಪಂಚಾಯತಿಯ ಸ್ಥಳವನ್ನು ಗ್ರಾಮ ಮಾರುಕಟ್ಟೆಯಿಂದ ಬೇರೆಡೆಗೆ ಸ್ಥಳಾಂತರಿಸಬೇಕಾಯಿತು. ಶಾಸಕರು, ಮಾಜಿ ಮಂತ್ರಿಗಳು, ಮಾಜಿ ಶಾಸಕರು, ಮಾಜಿ ಎಂಪಿಗಳು, ಪ್ರಖ್ಯಾತ ಗಣ್ಯ ನಾಗರಿಕರು, ಪಂಚಾಯತ್ ಪ್ರತಿನಿಧಿಗಳು, ನುಹ್ ಬಾರ್ ಅಸೋಸಿಯೇಶನ್ನಿನ ವಕೀಲರು, ವಿವಿಧ ರಾಜಕೀಯ ಪಕ್ಷಗಳ, ಸಾಮಾಜಿಕ ಆಂದೋಲನಗಳ ಮುಖಂಡರು ಸಭೆಯನ್ನುದ್ದೇಶಿಸಿ ಮಾತಾಡುತ್ತ ತಮ್ಮ ಆಳವಾದ ಸಿಟ್ಟನ್ನು ಅಭಿವ್ಯಕ್ತಗೊಳಿಸಿದರು.

ಈ ನ್ಯಾಯ ಪಂಚಾಯತು ನ್ಯಾಯ ಒದಗಿಸಿ, ಇಲ್ಲವೇ ಇನ್ನೂ ಬೃಹತ್ ಸ್ವರೂಪದ ಚಳುವಳಿಯನ್ನು ಎದುರಿಸಬೇಕು ಎಂದು ಖಟ್ಟರ್ ಸರಕಾರಕ್ಕೆ ಕೊನೆಯೆಚ್ಚರಿಕೆ ನೀಡಿದೆ. ಜಿಲ್ಲಾ ಪೋಲಿಸ್ ಅಧಿಕಾರಿಗಳನ್ನು ತಕ್ಷಣವೇ ಅಮಾನತು ಮಾಡಬೇಕೆಂದೂ ಪಂಚಾಯತು ಒಕ್ಕೊರಲಿನಿಂದ ಆಗ್ರಹಿಸಿತು.

ದಯವಿಟ್ಟು ಇದು ಅತ್ಯಂತ ತುರ್ತಿನದ್ದು ಎಂದು ಪರಿಗಣಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಿ, ಏಕೆಂದರೆ ಹರಿಯಾಣ ಸರಕಾರ ಮತ್ತು ಅದರ ಆಡಳಿತ ಈ ವಿಷಯದಲ್ಲಿ ಉಪೇಕ್ಷೆ ಮತ್ತು ಅಸಂವೇದನಾಶೀಲತೆಯಿಂದ ವರ್ತಿಸುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಸಂವಿಧಾನದ ಪ್ರಕಾರ ರಾಜ್ಯ ಪಟ್ಟಿಯಲ್ಲಿ ಬರುತ್ತದೆ ಎಂಬುದು ನನಗೆ ಗೊತ್ತು. ಆದ-ರೆ, ಈ ಹಿಂದೆ ನಾವು ಧಾರ್ಮಿಕ ಅಲ್ಪಸಂಖ್ಯಾತರು, ಮಹಿಳೆಯರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬಡಕಟ್ಟುಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ರಾಷ್ಟ್ರೀಯ ಆತಂಕದ ಸಂಗತಿಗಳು ಎಂದು ಪರಿಗಣಿಸಿದ್ದೇವೆ. ಈ ಆಧಾರದಲ್ಲಿ ನೀವು ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ಕೋರುತ್ತೇನೆ.

ಕಾಶ್ಮೀರದಲ್ಲಿ ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸುವ ಕ್ರಮಗಳು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ

ಕಾಶ್ಮೀರ ಕಣಿವೆಯಾದ್ಯಂತ, ಬಹುಶಃ ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಇದ್–ಉಲ್–ಜುಹಾ ಬಕ್ರಿದ್‌ನ ದಿನ ಕರ್ಫ್ಯೂ ಹೇರಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ. ಶ್ರೀನಗರದಲ್ಲಿ ಎಲ್ಲ ಪ್ರಮುಖ ಮಸೀದಿಗಳನ್ನು ಮುಚ್ಚಿದ್ದರಿಂದ ಪಾರಂಪರಿಕ ಈದ್ ಆಚರಣೆ ಮತ್ತು ಪ್ರಾರ್ಥನೆಗಳಿಗೆ ತಡೆ-ಯುಂಟಾಗಿದೆ. ಕಾಶ್ಮೀರ ಕಣಿವೆಯಾದ್ಯಂತ ಪ್ರತಿ ಈದ್‌ನ ದಿನ ಈದ್‌ಗಾ ಮೈದಾನಗಳಿಗೆ ಪ್ರಾರ್ಥನೆ ಸಲ್ಲಿಸಲು ನಂಬಿಕೆಯಿರುವವರಿಗೆ ಬಿಡದಿರುವುದು ಅಭೂತಪೂರ್ವ ಸಂಗತಿ ಎಂದು ಅದು ಹೇಳಿದೆ.

ಇದುವರೆಗೆ ಬಂದ ವರದಿಗಳ ಪ್ರಕಾರ ಭದ್ರತಾ ಪಡೆಗಳೊಂದಿಗೆ ತಿಕ್ಕಾಟದಲ್ಲಿ ಮತ್ತೆರಡು ಜೀವಗಳು ಹೋಗಿವೆ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾ-ರೆ.

ಸರ್ವಪಕ್ಷ ನಿಯೋಗ ದಿಲ್ಲಿಗೆ ಮರಳಿದ ಮೇಲೆ ಒಂದು ಹೇಳಿಕೆಯನ್ನು ಅಂಗೀಕರಿಸಿತು, ಅದನ್ನು ಸರಕಾರ ಪ್ರಕಟಿಸಿತು. ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ರಾಜಕೀಯ ಸಂವಾದವನ್ನು ಆರಂಭಿಸಲು ಮುತುವರ್ಜಿ ವಹಿಸುತ್ತವೆ ಎಂದು ಸ್ಪಷ್ಟವಾಗಿ ಹೇಳಲಾಗಿತ್ತು ಎಂಬುದನ್ನು ಪೊಲಿಟ್‌ಬ್ಯುರೊ ಈ ಸಂದರ್ಭದಲ್ಲಿ ನೆನಪಿಸಿದೆ. ಕಾಶ್ಮೀರ ಶಾಂತಿ ಮತ್ತು ಸಾಮಾನ್ಯ ಸ್ಥಿತಿಗೆ ಮರಳುವಂತಾಗುವ ಪ್ರಕ್ರಿಯೆ ಇದು ಎಂದು ಅದು ಅಭಿಪ್ರಾಯ ಪಟ್ಟಿದೆ.

ಇದರ ಬದಲು, ಕೇಂದ್ರ ಸರಕಾರ ಇನ್ನಷ್ಟು ಭದ್ರತಾ ಪಡೆಗಳನ್ನು ಕಳಿಸಿದೆ, ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸುವ ಮತ್ತು ಶಾಂತಿ ಮತ್ತು ಸಾಮಾನ್ಯ ಸ್ಥಿತಿಗೆ ಮರಳುವ ಪ್ರಕ್ರಿಯೆಯನ್ನು ನಿಧಾನಗೊಳಿಸ ಬಹುದಾದ ಇಂತಹ ಕ್ರಮಗಳನ್ನು ಕೈಗೊಂಡಿದೆ. ರಾಷ್ಟ್ರೀಯ ಸಾರ್ವಭೌಮತೆಯ ವಿಷಯದಲ್ಲಿ ರಾಜಿ ಸಾಧ್ಯವಿಲ್ಲವಾದರೂ, ಕಾಶ್ಮೀರದಲ್ಲಿ ಸಾಮಾನ್ಯ ಸ್ಥಿತಿ ಮರಳುವಂತಾಗುವುದು ಸಂಬಂಧಪಟ್ಟ ಎಲ್ಲರೊಂದಿಗೆ ಒಂದು ರಾಜಕೀಯ ಸಂವಾದವನ್ನು ಆರಂಭಿಸುವುದರ ಮೇಲೆ ನಿಂತಿದೆ ಎಂದಿರುವ ಸಿಪಿಐ(ಎಂ) ಈ ಪ್ರಕ್ರಿಯಯ ಮೂಲಕಷ್ಟೇ ಜನತೆಯ ವಿಶ್ವಾಸ ಗಳಿಸಲು ಸಾಧ್ಯ ಎಂದಿದೆ.

ಸರ್ವಪಕ್ಷ ನಿಯೋಗ ಒಮ್ಮತದಿಂದ ಒಪ್ಪಿರುವಂತೆ ಸಂಬಂಧಪಟ್ಟ ಎಲ್ಲರೊಂದಿಗೆ ರಾಜಕೀಯ ಸಂವಾದವನ್ನು ಜತೆಗೆ ಎಲ್ಲರೂ ಒಪ್ಪಿಕೊಂಡಿರುವ ವಿಶ್ವಾಸ ಕುದುರಿಸುವ ಕ್ರಮಗಳನ್ನು ತಕ್ಷಣವೇ ಆರಂಭಿಸಬೇಕು ಎಂಬ ಬೇಡಿಕೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಗೋರಕ್ಷಣೆಯ ಹೆಸರಲ್ಲಿ ಅಸಹ್ಯ ಪ್ರಚಾರ – ಸಿಪಿಐ(ಎಂ) ಖಂಡನೆ

ಹರಿಯಾಣ ಸರಕಾರ ರಾಜ್ಯದ ಮೇವತ್ ಪ್ರದೇಶದಲ್ಲಿ ಬಕ್ರಿದ್ ಹಬ್ಬದ ಸಂದರ್ಭದಲ್ಲಿ ಬಿರ್ಯಾನಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಲು ಮುಂದಾಗಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇವುಗಳಲ್ಲಿ ಗೋಮಾಂಸ ಇದೆಯೇ ಎಂದು ಪರಿಶೀಲಸಲು ಇದನ್ನು ಮಾಡಲಾಗುತ್ತಿದೆ ಎನ್ನಲಾಗಿದೆ. ರಾಜ್ಯದಲ್ಲಿ ಗೋಸಂರಕ್ಷಣ ಮತ್ತು ಗೋವಂಶವೃದ್ಧಿ ಕಾನೂನು ತರುವಾಗಲೇ ಪಕ್ಷ ಇದನ್ನು ಧಾರ್ಮಿಕ ಅಲ್ಪಸಂಖ್ಯಾತರನ್ನು ಭಯಪಡಿಸಲು ಮತ್ತು ಸಮಾಜವನ್ನು ಧ್ರುವೀಕರಿಸಲು ಬಳಸಬಹುದು ಎಂದು ಪ್ರತಿಭಟಿಸಿತ್ತು. ಈ ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಸಂಖ್ಯೆ ಬಹಳ ಕಡಿಮೆ ಮತ್ತು ಅದು ಈ ಮೇವತ್ ಪ್ರದೇಶದಲ್ಲಿಯೇ ಸೇರಿ-ಕೊಂಡಿದೆ ಎಂಬುದನ್ನು ಗಮನಿಸಬೇಕು.

ಆರೆಸ್ಸೆಸ್–ಬಿಜೆಪಿಗೆ ಗೋವಂಶದ ರಕ್ಷಣೆಯ ಕಾಳಜಿಯೇನೂ ಇಲ್ಲ ಎಂಬುದು ಸ್ಪಷ್ಟ. ಗೋವಾದಲ್ಲಿ ಇವರೇ ಗೋಮಾಂಸ ತಿನ್ನುವ ಜನರ ಹಕ್ಕುಗಳನ್ನು ರಕ್ಷಿಸುವ ಮಾತಾಡುತ್ತಾರೆ. ಈಶಾನ್ಯ ಭಾರತದಲ್ಲೂ ಅದು ಗೋಮಾಂಸ ಭಕ್ಷಣೆಯ ಪರವಾಗಿ ಇದೆ. ಆದರೆ ಹರಿಯಾಣದಲ್ಲಿ ಇದನ್ನು ಭಯ ಹುಟ್ಟಿಸಲು ಮತ್ತು ಕೋಮು ಧ್ರುವೀಕರಣ ತರಲು, ಆಮೂಲಕ ರಾಜಕೀಯ ಮತ್ತು ಚುನಾವಣಾ ಪ್ರಯೋಜನ ಗಿಟ್ಟಿಸಲು ಬಳಸುತ್ತಿದೆ ಎಂಬುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸರಕಾರೀ ಪೋಷಣೆಯಿಂದ ನಡೆಯುತ್ತಿರುವ ಈ ಅಸಹ್ಯ ಹುಟ್ಟಿಸುವ ಪ್ರಚಾರವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ಈ ಪ್ರದೇಶದ ಡಿಂಗರ್‌ಹೇಡಿ ಗ್ರಾಮದ ಒಂದು ಬಡ ಭೂಹೀನ ಮುಸ್ಲಿಮ್ ಕುಟುಂಬದ ಮೇಲೆ ನಡೆಸಿದ ಕೊಲೆ,ಅತ್ಯಾಚಾರದ ಘಟನೆಯಲ್ಲಿ ರಾಜ್ಯ ಸರಕಾರ ಮತ್ತು ಪೋಲೀಸರ ನಿಷ್ಕ್ರಿಯತೆಯ ಬಗ್ಗೆ ಎದ್ದಿರುವ ಆಕ್ರೋಶವನ್ನು ಬೇರೆಡೆಗೆ ತಿರುಗಿಸಲು ಇದೊಂದು ತಂತ್ರವಾಗಿದೆ ಎಂಬ ಭಾವನೆ ಇಲ್ಲಿನ ಜನಗಳಲ್ಲಿದೆ ಎಂದು ವರದಿಯಾಗಿದೆ.

ಮಾತೆಂದರೆ ಇದು

ಕಮ್ಯೂನಿಸ್ಟರ ಸೈದ್ಧಾಂತಿಕ ತೀರ್ಮಾನಗಳು ಯಾವ ರೀತಿಯಲ್ಲೂ ಯಾವುದೇ ಭಾವೀ ಸಾರ್ವತ್ರಿಕ ಸುಧಾರಕನು ಕಂಡು ಹಿಡಿದ ಅಥವಾ ಆವಿಷ್ಕಾರಗೊಳಿಸಿದ ವಿಚಾರ ಅಥವಾ ಸೂತ್ರಗಳ ಮೇಲೆ ಆಧರಿತವಾಗಿಲ್ಲ. ಅಸ್ತಿತ್ವದಲ್ಲಿರುವ ವರ್ಗ ಹೋರಾಟದಿಂದ, ನಮ್ಮ ಕಣ್ಮುಂದೆಯೇ ಜರುಗುತ್ತಿರುವ ಐತಿಹಾಸಿಕ ಚಳುವಳಿಯಿಂದ ಹುಟ್ಟುವ ವಾಸ್ತವಿಕ ಸಂಬಂಧಗಳನ್ನು ಈ ಸೈದ್ಧಾಂತಿಕ ತೀರ್ಮಾನಗಳು ಸಾಮಾನ್ಯ ಭಾಷೆಯಲ್ಲಿ ವ್ಯಕ್ತಪಡಿಸುತ್ತವೆ ಅಷ್ಟೆ.

–ಮಾರ್ಕ್ಸ್ ಮತ್ತು ಎಂಗಲ್ಸ್
(ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ)

ಕಾವೇರಿ ವಿವಾದ ಪರಿಹರಿಸಲು ಪ್ರಧಾನಿ ಮಧ್ಯಪ್ರವೇಶಿಸಲಿ
– ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹೇಳಿಕೆ

ಕರ್ನಾಟಕ ತಮಿಳುನಾಡಿಗೆ 15 ಸಾವಿರ ಕ್ಯುಸೆಕ್ಸನಷ್ಟು ನೀರನ್ನು ಸೆ. 15 ರವರೆಗೆ ಬಿಡಬೇಕು ಎಂಬ ಸುಪ್ರೀಂ ಕೋರ್ಟಿನ ಸೆಪ್ಟೆಂಬರ್ 5 ತೀರ್ಪಿನ ಹಿನ್ನೆಲೆಯಲ್ಲಿ, ಕರ್ನಾಟಕದ ಅದರಲ್ಲೂ ಕಾವೇರಿ ಕಣಿವೆಯ ಪ್ರದೇಶದ ರೈತರಲ್ಲಿ ತೀವ್ರ ಆತಂಕ, ಆಕ್ರೋಶ ಉಂಟು ಮಾಡಿತ್ತು. ಇದಕ್ಕೆ ತೀವ್ರ ಪ್ರತಿಭಟನೆಗಳು ವ್ಯಕ್ತವಾಗಿದ್ದವು. ಮಳೆಯಲ್ಲಿ ತೀವ್ರ ಕೊರತೆಯ ಹಿನ್ನೆಲೆಯಲ್ಲಿ ಕುಡಿಯುವ ನೀರು ಹಾಗೂ ಕೃಷಿಗೆ ತೀವ್ರ ಕೊರತೆ ಉಂಟಾಗಲಿರುವುದರಿಂದ ಕರ್ನಾಟಕ ಸರಕಾರ, ವಾಸ್ತವ ಪರಿಸ್ಥಿತಿಯ ಅಧ್ಯಯನ ಮಾಡಿ ತೀರ್ಪು ಪುನರ್‌ಪರಿಶಿಲಿಸಲು ಸುಪ್ರೀಂ ಕೋರ್ಟಿಗೆ ಹಾಗೂ ಮೆಲುಸ್ತುವಾರಿ ಸಮಿತಿಗೆ ಮನವಿ ಮಾಡಿದ ಕ್ರಮ ಸರಿಯಾಗಿಯೇ ಇತ್ತು. ಆದರೆ 12 ಸಾವಿರ ಕ್ಯುಸೆಕ್ಸ್ ನೀರನ್ನು ಸೆ.20 ರವರೆಗೆ ಬಿಡಬೇಕು ಎಂಬ ಸೆ. 12ರ ಸುಪ್ರೀಂ ಕೋರ್ಟು ತೀರ್ಪು ಕರ್ನಾಟಕದ ಜನತೆಯ ನಿರೀಕ್ಷೆಗೆ ಅನುಗುಣವಾಗಿರಲಿಲ್ಲ. ಇದರಿಂದ ಜನತೆಯ ಆತಂಕ, ಆಕ್ರೋಶ ಹೆಚ್ಚಿದ್ದು ನಿಜ.

ಆದರೆ ಸೆ.13 ರಂದು ರಾಜ್ಯದ ಹಲವು ಕಡೆ ಅದರಲ್ಲೂ ಬೆಂಗಳೂರಲ್ಲಿ ನಡೆದ ಹಿಂಸಾಚಾರ, ದೊಂಬಿ, ವಾಹನಗಳಿಗೆ ಬೆಂಕಿ ಹಚ್ಚಿದ, ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿ ನಡೆಸಿದ ಘಟನೆಗಳೂ ಖಂಡನಾರ್ಹ. ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಶಾಂತಿ ಸುವ್ಯವಸ್ಥೆಗೆ ಅಪಾಯ ಇರುತ್ತದೆ. ಪ್ರಕ್ಷುಬ್ಧ ಪರಿಸ್ಥಿತಿಯನ್ನು ಬಳಸಿ ಭಾಷಾಂಧ ಮತ್ತಿತರ ವಿಘಟನಾಕಾರಿ ಶಕ್ತಿಗಳು ಹಿಂಸಾಚಾರ, ದೊಂಬಿ ನಡೆಸಬಹುದು ಎಂದು ನಿರೀಕ್ಷಿಸಿ ಕರ್ನಾಟಕ ಸರಕಾರ ತಕ್ಕ ಕ್ರಮ ಕೈಗೊಳ್ಳಬೇಕಾಗಿತ್ತು. ಇದರಲ್ಲಿ ಸರಕಾರ ವಿಫಲವಾಯಿತು. ಸರಕಾರದ ಈ ಬೇಜವಾಬ್ದಾರಿತನ ಅದಕ್ಷತೆ ಸಹ ಖಡನಾರ್ಹ. ಸೆ. 13 ರ ದೊಂಬಿ, ಹಿಂಸಾಚಾರದ ಹಿಂದೆ ಕಾಣದ ಕೈಗಳ ವ್ಯವಸ್ಥಿತ ಪಿತೂರಿ ಇದೆ ಎಂಬುದು ಮೇಲುನೋಟಕ್ಕೆ ಕಂಡು ಬರುತ್ತದೆ. ಈ ವಿಘಟನಾಕಾರಿ ಶಕ್ತಿಗಳು ಯಾವುವು ಎಂದು ಪತ್ತೆ ಹಚ್ಚಿ ಅವುಗಳ ಮೇಲೆ ತಕ್ಕ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ತಮ್ಮ ಟಿ.ಆರ್.ಪಿ.ಯ ಇಂಗದ ದಾಹ ತೀರಿಸಕೊಳ್ಳಲು, ಜನತೆಯಲ್ಲಿನ ಆತಂಕ, ಆಕ್ರೋಶ ಹೆಚ್ಚಿಸಿದ ಹಾಗೂ ಹಿಂಸೆ, ದೊಂಬಿಗೆ ನೇರ ಪ್ರಚೋದನೆ ನೀಡಿದ ಮಾಧ್ಯಮಗಳು ಅದರಲ್ಲೂ ಕನ್ನಡ ಖಾಸಗಿ ಟಿವಿ ವಾಹಿನಿಗಳ ಪಾತ್ರ ಅತ್ಯಂತ ಆಘಾತಕಾರಿ ಬೆಳವಣಿಗೆ ಮತ್ತು ಖಂಡನಾರ್ಹ. ಸಾಮಾಜಿಕ ಮಾಧ್ಯಮಗಳ ದುರ್ಬಳಕೆ ಸಹ ಆತಂಕದ ಬೆಳವಣಿಗೆ.

ಸಂಕಷ್ಟ ಪರಿಸ್ಥಿತಿಯಲ್ಲಿ ಕಾವೇರಿ ನದಿ ನೀರಿನ ಹಂಚಿಕೆಗೆ ಪರಸ್ಪರ ಒಪ್ಪಿತ ಪರಿಹಾರ ಕ್ರಮವೊಂದು ರೂಪಿತವಾಗದಿರುವುದು ಈ ಸಮಸ್ಯೆಯ ಮೂಲ. ನದಿ ನೀರಿನ ಹಂಚಿಕೆ, ನಿರ್ವಹಣೆ ಪ್ರಧಾನವಾಗಿ ಆಡಳಿತಾತ್ಮಕ ವಿಚಾರ. ಇದನ್ನು ಕಾನೂನಾತ್ಮಕ ಕ್ರಮಗಳಿಂದ ಪರಿಹರಿಸಲಾಗುವುದಿಲ್ಲ. ನದಿ ನೀರಿನ ಹಂಚಿಕೆಯ ವಿವಾದಗಳನ್ನು ಸುಪ್ರೀಂ ಕೋರ್ಟಿಗೆ ತೆ-ಗೆದುಕೊಂಡು ಹೋಗಿ ಪರಿಹರಿಸಲು ಪ್ರಯತ್ನಿಸುತ್ತಿರುವುದೇ ಸಮಸ್ಯೆಯ ಮೂಲ. ಸಾಮಾನ್ಯ ಮತ್ತು ಸಂಕಷ್ಟದ ಸಮಯದಲ್ಲಿ ನೀರಿನ ಅಗತ್ಯ, ತುರ್ತು ಅಗತ್ಯ, ಲಭ್ಯತೆ, ಹಂಚಿಕೆ, ಎಲ್ಲಿ ಕಡಿತ ಮಾಡಬಹುದು ಎಂಬವುಗಳ ಬಗ್ಗೆ ವಾಸ್ತವಾಂಶ ಆಧಾರಿತ ಅಧ್ಯಯನ ವಿಶ್ಲೇಷಣೆ ಬೇಕಾಗುತ್ತದೆ. ಸಂಕಷ್ಟ ಪರಿಸ್ಥಿತಿ ನಿರ್ಮಾಣ ಆಗುವ ಪ್ರಕ್ರಿಯೆಯ ಸಂದರ್ಭದಲ್ಲಿ ಸತತವಾಗಿ ಇವನ್ನು ಗಮನಿಸುತ್ತಿರಬೇಕಾಗುತ್ತದೆ. ಇವನ್ನು ಮಾಡಲು ಸಂಬಂಧಿಸಿದ ಪರಿಣತರು, ತಂತ್ರಜ್ಞರು ಮಾಹಿತಿ ಸಂಗ್ರಹಣಾ ನಿರ್ವಹಣಾ ವ್ಯವಸ್ಥೆ ಬೇಕಾಗುತ್ತದೆ. ಇದಕ್ಕೆ ಬೇಕಾದ ಆಡಳಿತ ಯಂತ್ರ ಇಲ್ಲವೆಂದಲ್ಲ. ಕೇಂದ್ರ ಸರಕಾರದ ನೇತೃತ್ವದಲ್ಲಿ ಇದಕ್ಕಾಗಿಯೇ ಎರಡು ಸಮಿತಿಗಳು ಇವೆ. ಒಂದು ಅಧಿಕಾರಿಗಳ ಮಟ್ಟದಲ್ಲಿ. ಇನ್ನೊಂದು ಪ್ರಧಾನ ಮಂತ್ರಿಯ ಅಧ್ಯಕ್ಷತೆಯಲ್ಲಿ. ಎರಡು ರಾಜ್ಯಗಳ ನಡುವೆ ವಿವಾದ ಉಂಟಾದಾಗ ಅದನ್ನು ಪರಿಹರಿಸುವುದು ಕೇಂದ್ರ ಸರಕಾರದ ಹೊಣೆ.

ಇಂತಹ ತೀವ್ರ ಬಿಕ್ಕಟ್ಟು ಉಂಟಾಗಿರುವಾಗ ಪ್ರಧಾನಿಯವರ ಮೌನ ಖಂಡನಾರ್ಹ. ಮಹಾದಾಯಿ ಮತ್ತು ಕಾವೇರಿ ವಿವಾದದ ಪರಿಹಾರದಲ್ಲಿ ಮಧ್ಯಪ್ರವೇಶ ಮಾಡಲು ಮನವಿ ಮಾಡಿ ಕರ್ನಾಟಕ ಮುಖ್ಯಮಂತ್ರಿಗಳ ಏಳು ಪತ್ರಗಳಿಗೆ ಉತ್ತರವನ್ನು ಬರೆಯದೆ, ಭೇಟಿಗೆ ಸಮಯಾವಕಾಶವನ್ನು ಕೊಡದೆ ಇರುವುದು ಜವಾಬ್ದಾರಿ ಮತ್ತು ಉತ್ತಮ ಆಡಳಿತದ ಲಕ್ಷಣ ಖಂಡಿತ ಅಲ್ಲ. ಕಾವೇರಿ ಬಿಕ್ಕಟ್ಟು ಪರಿಹರಿಸಲು ಪ್ರಧಾನಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆಯುವ ಮೂಲಕ ಹಾಗೂ ಎರಡೂ ಸಮಿತಿಗಳೂ ತಮ್ಮ ಜವಾಬ್ದಾರಿ ನಿರ್ವಹಿಸುವ ಮೂಲಕ ಶಾಶ್ವತ ಪರಿಹಾರಕ್ಕಾಗಿ ತೀವ್ರ ಮಧ್ಯಪ್ರವೇಶ ಮಾಡಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ರೈತರ ಆತಂಕ ಪ್ರಸ್ತುತ ಬೆಳೆಗೆ ನೀರಿನ ಲಭ್ಯತೆ ಬಗ್ಗೆ ಇರುವದರಿಂದ, ನೀರಿನ ಲಭ್ಯತೆಯ ಅಭಾವದಿಂದ ಬೆಳೆ ನಷ್ಟವಾದರೆ ಅದಕ್ಕೆ ತಕ್ಕ ಪರಿಹಾರ ಕೊಡಲಾಗುವುದು ಎಂದು ತಕ್ಷಣ ಕರ್ನಾಟಕ ರಾಜ್ಯ ಸರಕಾರ ಘೋಷಿಸಿ ರೈತರ ಆತಂಕ ನಿವಾರಿಸಬೇಕು ಎಂದೂ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಕಾವೇರಿ ವಿವಾದ:
ಹಿಂಸಾಚಾರ ಬಿಡಿ, ಸಾಮಾನ್ಯ ಸ್ಥಿತಿ ಕಾಪಾಡಿ
ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಕರ್ನಾಟಕ ಮತ್ತು ತಮಿಳುನಾಡಿನ ಕೆಲಭಾಗಗಳಲ್ಲಿ ಹಿಂಸಾಚಾರ ಮತ್ತು ದೊಂಬಿಯ ವರದಿಗಳಿಂದ ಆಘಾತ ಮತ್ತು ದಿಗಿಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಎರಡೂ ರಾಜ್ಯಗಳ ಜನರು ಕಾವೇರಿ ನದಿ ನೀರು ಹಂಚಿಕೊಳ್ಳುವ ಬಗ್ಗೆ ಸುಪ್ರಿಂ ಕೋರ್ಟಿನ ನಿರ್ಧಾರದ ಬಗ್ಗೆ ಶಾಂತಿ–ಸಮಾಧಾನವನ್ನು ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿರುವ ಪೊಲಿಟ್‌ಬ್ಯುರೊ ಜನಗಳ ಜೀವ ಮತ್ತು ಆಸ್ತಿಪಾಸ್ತಿಗಳ ರಕ್ಷಣೆಯಾಗುವಂತೆ ನೋಡಿಕೊಳ್ಳಬೇಕು ಎಂದು ಕರ್ನಾಟಕ ಮತ್ತು ತಮಿಳುನಾಡು ಸರಕಾರಗಳಿಗೆ ಕರೆ ನೀಡಿದೆ.

ಕಾವೇರಿ ನದಿ ನೀರನ್ನು ಹಂಚಿಕೊಳ್ಳುವ ಬಗ್ಗೆ ವಿವಾದ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ನಡುವಿನ ಒಂದು ದೀರ್ಘಕಾಲದ ವಿವಾದ. ಇಂತಹ ವಿವಾದಗಳನ್ನು ಮಾತುಕತೆಗಳು ಮತ್ತು ಈ ನೀರನ್ನು ಹೇಗೆ ಹಂಚಿಕೊಳ್ಳಬೇಕು ಎಂಬ ಬಗ್ಗೆ ಪರಸ್ಪರ ಒಪ್ಪಂದಿಂದ ಮಾತ್ರ ಪರಿಹರಿಸಲು ಸಾಧ್ಯ. ಇಂತಹ ವಿವಾದಗಳನ್ನು ಎರಡೂ ರಾಜ್ಯಗಳ ಜನಗಳ ಭಾವನೆಗಳನ್ನು ಬಡಿದೆಬ್ಬಿಸುವ ಮೂಲಕ ಅಥವ ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟುವುದರಿಂದ ಬಗೆಹರಿಸಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಕಾವೇರಿ ನೀರು ಕುರಿತ ಟ್ರಿಬ್ಯೂನಲ್‌ನ ಅವಾರ್ಡ್‌ನ ಜಾರಿಗೆ ತಮಿಳುನಾಡು ಸರಕಾರ ಸಲ್ಲಿಸಿದ ಕೇಸ್‌ನಲ್ಲಿ ಸುಪ್ರಿಂ ಕೋರ್ಟ್ ಹತ್ತು ದಿನಗಳ ಕಾಲ ಪ್ರತಿದಿನ 15000 ಕ್ಯುಸೆಕ್ ನೀರು ಬಿಡುಗಡೆ ಮಾಡಲು ಆದೇಶಿಸಿತ್ತು. ಈ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಕರ್ನಾಟಕ ಸರಕಾರ ನೀರನ್ನು ಬಿಡುಗಡೆ ಮಾಡಿದೆ ಎಂದು ಗಮನಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂಬಂಧಪಟ್ಟ ಎಲ್ಲರೂ, ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ನೀರು ಹಂಚಿಕೊಳ್ಳುವ ವಿವಾದಗಳನ್ನು ಮಾತುಕತೆಗಳು ಮತ್ತು ಪರಸ್ಪರ ಒಪ್ಪಂದದ ಮೂಲಕ ಬಗೆಹರಿಯುವಂತೆ ನೋಡಿಕೊಳ್ಳಬೇಕು ಎಂದು ಕಳಕಳಿಯಿಂದ ಆಗ್ರಹಿಸಿದೆ.

ಈ ವಾರ ಚರಿತ್ರೆಯಲ್ಲಿ

13 ಸೆಪ್ಟೆಂಬರ್ 1948

ಹೈದರಾಬಾದಿನ ಮೇಲೆ 'ಪೋಲಿಸ್ ಆಕ್ಶನ್'

ಭಾರತ ಸ್ವತಂತ್ರವಾದಾಗ ಭಾರತ ಒಕ್ಕೂಟ ಸೇರಲು ಹೈದರಾಬಾದಿನ ನಿಜಾಮ ನಿರಾಕರಿಸಿದ್ದ. ತನ್ನ ಸೈನ್ಯ ಮತ್ತು ಅರೆ–ಸೈನ್ಯದಂತಿದ್ದ ರಜಾಕಾರರನ್ನು ಬಳಸಿ ಜನತೆಯ ಮೇಲೆ ಕ್ರೂರ ದಮನ ಚಕ್ರ ನಡೆಸುತ್ತಿದ್ದ. ಹೈದರಾಬಾದಿನ ನಿಜಾಮನನ್ನು ಮಣಿಸಲು ಭಾರತ ಸರಕಾರ ಮಿಲಿಟರಿ ಕಳಿಸಿದ್ದನ್ನು 'ಪೋಲಿಸ್ ಆಕ್ಶನ್' ಎಂದು ಕರೆಯಲಾಗಿದೆ. ಇದಕ್ಕಿಂತ ಮೊದಲು ತೆಲಂಗಾಣ ರೈತರು ನಿಜಾಮನ ರಜಾಕಾರರನ್ನೂ ನಿಜಾಮನ ಸೈನ್ಯವನ್ನೂ ಎದುರಿಸಿ ವಿರುದ್ಧ ಸಶಸ್ತ್ರ ವಿಮೋಚನಾ ಹೋರಾಟದಲ್ಲಿ ತೊಡಗಿದ್ದರು. ಅದನ್ನು ಲೆಕ್ಕಿಸದೆ ಭಾರತ ಸರಕಾರ ನಿಜಾಮನನ್ನು ಓಲೈಸಲು ಪ್ರಯತ್ನಿಸುತ್ತಿತ್ತು. ಆದರೆ 1948 ಅಗಸ್ಟ್ ಕೊನೆ ಹೊತ್ತಿಗೆ ರೈತರ ಕೈಮೇಲಾಗುವುದನ್ನು ಕಂಡು ಬೆದರಿದ ಭಾರತ ಸರಕಾರ 'ಪೋಲಿಸ್ ಆಕ್ಶನ್' ನಡೆಸಲು ನಿರ್ಧರಿಸಿತು. ಇದಕ್ಕೆ ಬಹಳ ಅಲ್ಪ ಕಾಲದಲ್ಲಿ ನಿಜಾಮನ ಸೈನ್ಯ ಮತ್ತು ರಜಾಕಾರರು ಮಣಿದರು. ಆದರೆ 'ಪೋಲಿಸ್ ಆಕ್ಶನ್' 1951ರ ವರೆಗೆ ನಡೆಯಿತು. 'ಪೋಲಿಸ್ ಆಕ್ಶನ್'ನ ನಿಜವಾದ ಉದ್ದೇಶ 3 ಸಾವಿರ ಹಳ್ಳಿಗಳಲ್ಲಿ ಜಮೀನುದಾರಿ ರದ್ದು ಮಾಡಿ ಗ್ರಾಮ ಸ್ವರಾಜ್ಯ ಸ್ಥಾಪಿಸಿ ಭೂಸುಧಾರಣೆ ಜಾರಿ ಮಾಡಿದ್ದ ತೆಲಂಗಾಣ ರೈತರ ಹೋರಾಟದ ಸಾಧನೆಗಳನ್ನು ಕಸಿದುಕೊಳ್ಳುವುದು ಆಗಿತ್ತು. ದೇಶದ ಇತರ ಕಡೆ ಹರಡದಂತೆ ನೋಡುವುದು ಆಗಿತ್ತು. ಇದಕ್ಕೆ ಪ್ರತಿರೋಧ ಒಡ್ಡಿದ ತೆಲಂಗಾಣ ರೈತರ ಮೇಲೆ ಹೇಳಲಾಗದ ದೌರ್ಜನ್ಯಗಳನನು ನಡೆಸಿ ಅದನ್ನು ದಮನ ಮಾಡಲಾಯಿತು.

ಈ ಹಿಂಸಾಕಾಂಡಕ್ಕೆ ಮಾಧ್ಯಮಗಳ ವರ್ತನೆಯೂ ಕಾರಣವಾಯಿತೇ?

ಎಸ್.ವೈ. ಗುರುಶಾಂತ್

ಕಾವೇರಿ ನದಿ ನೀರಿನ ಹಂಚಿಕೆಯ ವಿವಾದ ಉಭಯ ರಾಜ್ಯಗಳ ನಡುವೆಯೇ ಇತ್ಯಾರ್ಥಗೊಳ್ಳಬೇಕಾದ ವಿಷಯ. ಅದೇನಿದ್ದರೂ ಮಾತುಕತೆ. ಇಲ್ಲವೇ ಈಗಾಗಲೇ ರಚಿತವಾಗಿರುವ ಪ್ರಾಧಿಕಾರ, ನ್ಯಾಯಮಂಡಳಿ, ಇಲ್ಲದಿದ್ದರೆ ಸುಪ್ರೀಂಕೋರ್ಟ್ ಇವುಗಳ ತೀರ್ಪಿಗೆ ಬದ್ಧವಾಗಬೇಕಾದ ವಿಷಯ. ಇವನ್ನು ಹೊರತುಪಡಿಸಿ ಈ ವಿವಾದವನ್ನು ಮತ್ತೆಲ್ಲಿ ಬಗೆಹರಿಸಿಕೊಳ್ಳಲು ಸಾಧ್ಯ? ಒಂದು ವಿವೇಚನೆಯ, ಸಮಚಿತ್ತದ, ಸಮನ್ವಯದ ವರ್ತನೆಯ ಬದಲು ಬೀದಿಗಳಲ್ಲಿ ಹಿಂಸಾಕಾಂಡ ನಡೆಸುವ ಮೂಲಕ ಅಂತರ್ ರಾಜ್ಯಗಳ ನದಿ ನೀರಿನ ವಿವಾದವೊಂದನ್ನು ಬಗೆಹರಿಸಿದ ಉದಾಹರಣೆ ಪ್ರಪಂಚದಲ್ಲಿ ಇದೆಯೇ? ಅದು ಅಸಾಧ್ಯವೆಂಬುದು ಗೊತ್ತಿದ್ದರೂ ಮೊನ್ನೆ ಸೆಪ್ಟಂಬರ್ 12 ರಂದು ಸುಪ್ರೀಂಕೋರ್ಟ್‌ನ ತೀರ್ಪು ಪ್ರಕಟವಾದ ನಂತರವೂ ಬೆಂಗಳೂರು ಮಹಾನಗರ ಮತ್ತಿತರ ಕಡೆಗಳಲ್ಲಿ ಅಪಾರ ಪ್ರಮಾಣದ ಆಸ್ತಿ-ಹಾನಿ, ಜೀವ ಬಲಿ, ಹಿಂಸಾಕಾಂಡಗಳ ದಳ್ಳುರಿ ಧಗಧಗಿಸಿದ್ದು ಯಾಕೆ?

ಮರೆತ ಹೊಣೆಗಾರಿಕೆ

ಇಂತಹ ಪ್ರಶ್ನೆಯನ್ನಾಗಲೀ, ಸತ್ಯಾಸತ್ಯದ ಸಂಗತಿಗಳನ್ನಾಗಲೀ ಸಾರ್ವಜನಿಕರ ಎದುರು ತೆರೆದಿಡುವ ಪ್ರಯತ್ನಗಳು ಬಹುತೇಕ ಇಲ್ಲವೆಂದೇ ಹೇಳಬೇಕು. ಯಾವುದೇ ವಿವಾದಗಳಾಗಲಿ, ಪ್ರಕರಣ ಅಥವಾ ಘಟನೆಗಳನ್ನೇ ಆಗಲಿ ಸಾರ್ವಜನಿಕರಿಗೆ ಸತ್ಯ ಮಾಹಿತಿಗಳನ್ನು ಒದಗಿಸಿ ಜನತೆ ಪ್ರಬುದ್ಧ ತೀರ್ಮಾನವನ್ನು ಕೈಗೊಳ್ಳುವಂತೆ ಮಾಡುವ ಹೊಣೆಗಾರಿಕೆ ಪತ್ರಿಕೆ, ಟಿ.ವಿ.,ಯಂತಹ ನಮ್ಮ ಸಮೂಹ ಮಾಧ್ಯಮಗಳ ಮೇಲಿದೆ. ವಸ್ತುನಿಷ್ಠತೆ ಮತ್ತು ನಿಖರತೆ, ಪ್ರಾಮಾಣಿಕತೆ ಹಾಗೂ ಜನತೆಗೆ ಉತ್ತರದಾಯಿತ್ವವು ಮಾಧ್ಯಮಗಳ ಕಾರ್ಯಾಚರಣೆ-ಯ ಅಂತಃಶಕ್ತಿಯಾಗಿವೆ. ಆದರೆ ಸಾಮಾಜಿಕ ಸ್ವಾಸ್ತ್ಯವನ್ನು ಸಂರಕ್ಷಿಸುವ ಬದಲು ಮಾಧ್ಯಮಗಳು ಅದನ್ನು ಹಾಳು ಮಾಡಿದರೆ?

ಎಲೆಕ್ಟ್ರಾನಿಕ್ ಹಾಗೂ ಅಂತರ್ ಜಾಲದ ಮಾಧ್ಯಮಗಳ ಬೆಳವಣಿಗೆ ಮಾಹಿತಿಗಳನ್ನು ತಲುಪಿಸುವಲ್ಲಿ ವೇಗವನ್ನು ಪಡೆದಿದೆ. ಹೀಗೆ ಅದು ಶಕ್ತಿಶಾಲಿಯೂ ಆಗಿದೆ. ಕಾವೇರಿ ನೀರಿನ ವಿವಾದದ ತೀರ್ಪು ಹೊರಬಂದ ಸಂದರ್ಭದಲ್ಲಿ ಹಿಂಸಾಕಾಂಡ ವಿಜೃಂಬಿಸಲು ನಮ್ಮ ಕೆಲವು ಟಿವಿ, ಪತ್ರಿಕೆ ಹಾಗೂ ಅಂತರ್ಜಾಲ ಮಾಧ್ಯಮಗಳು ಬಹುದೊಡ್ಡ ಖಳನಾಯಕನ ಪಾತ್ರ ವಹಿಸಿದ್ದು ದುರಂತ.

ಪ್ರಚೋದನೆಯೇ?

ಕರ್ನಾಟಕ ಮರುಪರಿಶೀಲನಾ ಅರ್ಜಿಗೆ ಸಂಬಂಧಿಸಿ ಸುಪ್ರಿಂಕೋರ್ಟ್ ನೀಡಿದ ತೀರ್ಪನ್ನು ವಿವರಿಸಿ ಹೇಳಲು ಆರಂಭದಲ್ಲಿ ಯತ್ನಿಸಿದ ಮಾಧ್ಯಮಗಳು ಒಡನೆಯೇ ಜನರನ್ನೂ ಪ್ರಚೋದಿಸುವ ಆಟದಲ್ಲಿ ತೊಡಗಿದವು. ಆಗಲೇ ಬಿ ಟಿವಿ ಯಂತಹ ಕನ್ನಡದ ಕೆಲವು ಚಾನೆಲ್‌ಗಳು ಚೆನ್ನೈನ ಮೈಲಾಪುರದಲ್ಲಿ ಕನ್ನಡಿಗರಿಗೆ ಸೇರಿದ ಹೋಟೇಲ್ ಒಂದರ ಮೇಲೆ ಪೆಟ್ರೋಲ್ ಬಾಂಬ್ ಎಸೆದು 'ಕಾವೇರಿ ತಮಿಳರದ್ದು' ಎಂದು ಹೇಳುವಂತೆ ದಬಾಯಿಸುತ್ತಾ ಕನ್ನಡಿಗನೊಬ್ಬನಿಗೆ ಕೆಲ ತಮಿಳು ಸಂಘಟನೆಯ ಕಾರ್ಯಕರ್ತರು ಹೊಡೆಯುತ್ತಿರುವ ದೃಶ್ಯದ ವಿಡಿಯೋವನ್ನು ಪ್ರಸಾರಿಸಿ ಜನರನ್ನು ಭಾವೋದ್ರೇಕಗೊಳಿಸಲು ಮುಂದಾದವು. (ಈ ವಿಡಿಯೋ ಈಗಿನದೇ-ಹಳೆಯದೇ ಅದರ ಸತ್ಯಾಸತ್ಯ ಏನು ಎಂಬ

ಪುಟ 4 ಕ್ಕೆ

ತಪ್ಪು–ಒಪ್ಪು

ಕಳೆದ ಸಂಚಿಕೆ (ಸಂ. 38, ಸೆಪ್ಟೆಂಬರ್ 18, 2016)ಯ ಸಂಪಾದಕೀಯದಲ್ಲಿ ಕಣ್ತಪ್ಪಿನಿಂದ ಪ್ರಮುಖ ತಪ್ಪು ಉಳಿದು ಹೋಗಿದೆ. ಸಂಪಾದಕೀಯದ ಮೊದಲ ವಾಕ್ಯದಲ್ಲಿರುವ "ಕರ್ನಾಟಕ ತಮಿಳುನಾಡಿಗೆ 13 ಟಿ.ಎಂ.ಸಿ.ಯಷ್ಟು ನೀರು ಬಿಡಬೇಕು" ಎಂಬುದು "ಕರ್ನಾಟಕ ತಮಿಳುನಾಡಿಗೆ 15 ಸಾವಿರ ಕ್ಯುಸೆಕ್ಸ್ ನಷ್ಟು ನೀರು ಬಿಡಬೇಕು" ಎಂದು ಇರಬೇಕಾಗಿತ್ತು. ಈ ತಪ್ಪಿಗೆ ವಿಷಾದಿಸುತ್ತೇವೆ.

ಮಾಧ್ಯಮಗಳ ವರ್ತನೆಯೂ ಕಾರಣವಾಯಿತೇ..... ಪುಟ 3 ರಿಂದ

ಬಗ್ಗೆ ವಿವಾದಗಳಿವೆ.) ಇದಕ್ಕೂ ಮೊದಲು ತಮಿಳು ಚಿತ್ರಗಳ ಅಭಿಮಾನಿ ಹುಚ್ಚನೊಬ್ಬ ಕನ್ನಡ ಚಿತ್ರರಂಗದ ಕೆಲ ನಟರ ಬಗ್ಗೆ ಫೇಸ್‌ಬುಕ್‌ನಲ್ಲಿ ಹರಿಯ ಬಿಟ್ಟ 'ಮೋಮ್'ಗಳು ವಿಪರೀತಾರ್ಥಕ್ಕೆ ಎಳಸಿ ಅವನನ್ನು ಕೆಲವರು ತದುಕಿದ ಘಟನೆ, ಅದರ ವಿಡಿಯೋ ಪ್ರಸಾರ ಮುಂದಿನ ಹಲವು ಅವಘಡಗಳಿಗೆ ಹಾದಿ ಮಾಡಿಕೊಟ್ಟಿದೆ. ಈ ಸಂಗತಿಗಳು ಅದೇನಿದ್ದರೂ ವ್ಯಕ್ತಿಗತವಾಗಿ ಆದ ತಪ್ಪುಗಳೆಂದು ಅವುಗಳನ್ನು ನಿರ್ವಹಿಸುವ ಬದಲು ಕನ್ನಡ, ತಮಿಳು ಭಾಷಿಕರ ವಿರುದ್ಧ ಜನರನ್ನು ಎತ್ತಿ ಕಟ್ಟಲು ಬಳಸಲಾಯಿತು. ಮುಖ್ಯವಾಗಿ ಬೆಂಗಳೂರು, ಮಂಡ್ಯ, ಮೈಸೂರು ಮುಂತಾದೆಡೆಗಳಲ್ಲಿ ವಿವಾದ ದಳ್ಳುರಿಯಾಗಲು ಚೆನ್ನೈನಲ್ಲಿ ನಡೆದ ಘಟನೆಯೆಂಬ ವೀಡಿಯೋ ತುಣುಕಿನ ಸತತ ಪ್ರಸಾರವೇ ಹತ್ತಿ ಉರಿಯಲು ತಿದಿಯೂದಿತು.

ಇದಾದ ನಂತರ ನಮ್ಮ ಕೆಲ ಕನ್ನಡದ ಚಾನೆಲ್‌ಗಳು ಜನ ಹಿಂಸಾಚಾರಕ್ಕೆ ಇಳಿಯಲು ಪ್ರೇರಣೆಯಾಗುವಂತೆ ಸತತವಾಗಿ ಪ್ರಚೋದಿಸ ತೊಡಗಿದವು. ಬಿ ಟಿವಿ ಯಂತಹ ಚಾನೆಲ್ ಬಹಿರಂಗವಾಗಿಯೇ ಜನರು ತಮ್ಮ ಶಕ್ತಿ ತೋರಿಸುವಂತೆ ಕರೆ ನೀಡತೊಡಗಿತ್ತು. ಇಂತಹದ್ದನ್ನೇ ಪಬ್ಲಿಕ್ ಟಿವಿ, ಕಸ್ತೂರಿ ಚಾನೆಲ್, ಪ್ರಜಾ, ಟಿವಿ 9 ಮುಂತಾದವುಗಳೂ ಮಾಡ ತೊಡಗಿದವು. ಮಾಡುವ ವಿಶ್ಲೇಷಣೆ, ವರದಿಯ ವಸ್ತು, ಬಳಸುವ ಭಾಷೆ, ತೋರಿಸುವ ದೃಶ್ಯಗಳು ಎಚ್ಚರಿಕೆ ಮತ್ತು ಸಂಯಮದಿಂದ, ಕೂಡಿರಬೇಕು ಎಂಬ ಕೇಂದ್ರ ಸರ್ಕಾರದ ಮಾಧ್ಯಮ ನೀತಿ ಸಂಹಿತೆಯನ್ನು ಧಿಕ್ಕರಿಸಿ ಮನ ಬಂದಂತೆ ವರ್ತಿಸಿದವು. ಒಂದು ಹಂತದಲ್ಲಿ ಸುಪ್ರಿಂ ಕೋರ್ಟ್‌ನ ತೀರ್ಪಿಗೆ ಹೊಣೆಗಾರರನ್ನು ಹುಡುಕಿ ತೆಗೆಯ ತೊಡಗಿದ ಬಿಟಿವಿ ಆ್ಯಂಕರ್ 'ನೀರಾವರಿ ಮಂತ್ರಿ ಪಾಟೀಲ್‌ರನ್ನು ಗುರಿಯಾಗಿಸಿ 'ಹಿ ಈಸ್ ಎ ಯೂಸ್ ಲೆಸ್ ಫೆಲೋ', ಅವನನ್ನು ಸಿದ್ಧರಾಮಯ್ಯ ಸಂಪುಟದಿಂದ ಕೂಡಲೇ ವಜಾ ಮಾಡಬೇಕು' ಎಂದು ಆದೇಶ ಹೊರಡಿಸುತ್ತಿದ್ದ. ತಾನೊಬ್ಬ ಪ್ರಭುದ್ಧ ಮಾಧ್ಯಮ ಪ್ರಮುಖ ಎಂದು ಬೀಗುವ ಪಬ್ಲಿಕ್ ಟಿವಿಯ 'ಅಲ್‌ರೈಟ್ ರಂಗನಾಥ' ರವರು ಆಗಲೇ ಸುಮಾರು 63ಕ್ಕೂ ಅಧಿಕ ಭಾರೀ ವಾಹನಗಳಿಗೆ ಬೆಂಕಿ ಹಚ್ಚಿ, ಹಿಂಸಾಕಾಂಡ ನಿಯಂತ್ರಿಸಲು ಪೊಲೀಸರ ಪಡೆಗಳು ಹರಸಾಹಸ ಪಡುತ್ತಿರುವಾಗಲೇ, ಗೋಲೀಬಾರಿಗೆ ಒಬ್ಬ ಬಲಿಯಾಗುವ ದುರಂತ ನಡೆದಿರುವಾಗಲೇ 'ವಿಧಾನ ಸೌಧದತ್ತ ಜಿಲ್ಲೆಗಳಿಂದ ಕನಿಷ್ಠ 10 ಸಾವಿರ ಜನ ಕೂಡಲೇ ಹೊರಡು ಮುತ್ತಿಗೆ ಹಾಕಬೇಕು' ಎಂದು ಕರೆ ನೀಡಿದ್ದರು! ಕಸ್ತೂರಿ ಚಾನೆಲ್ 'ಸುಮ್ನೆ ಇರ್ತೀ–ರೋ ಇಲ್ಲ ಸುರು ಹಚ್ಚಿಕೊಳ್ಳಬೇಕೋ' ಎಂದು ಬೆದರಿಸುತ್ತಿದ್ದ ಸ್ಕ್ರೋಲ್ ಹಾಕುತ್ತಿತ್ತು. ಅದಕ್ಕೆ ಜೀವ ಬಲಿ, ದೊಂಬಿ, ಹಿಂಸಾಕಾಂಡದ ಪರಿಣಾಮಗಳ ತಾಪವೇ ಕಾಣದೇ ಅಬ್ಬರಿಸಿ ಪ್ರಸಾರಿಸುತ್ತಿತ್ತು. ಮಾನವೀಯತೆ ಮರೆತೇ ಹೋಗಿತ್ತು.

ಇಲ್ಲವಾದ ನೀತಿ ಸಂಹಿತೆ, ಬದ್ಧತೆ

ಮಾಧ್ಯಮ ನೀತಿ ಸಂಹಿತೆಯಲ್ಲಿ ಘಟನೆಯ ನೇರ ಪ್ರಸಾರದ ಹೆಸರಿನಲ್ಲಾಗಲೀ, ತೋರಿಸಿದ ಹಿಂಸಾಘಟನೆಗಳನ್ನು ಪದೇ ಪದೇ ತೋರಿಸಿ ಉದ್ರೇಕಿಸಬಾರದು ಎಂಬ ನಿರ್ದೇಶನವಿದ್ದರೂ ಈ ಚಾನೆಲ್‌ಗಳ ಪ್ರಚೋದನಾತ್ಮಕ ಕೃತ್ಯ ಅಕ್ಷಮ್ಯ ಅಪರಾಧ, ಖಂಡನಾರ್ಹ.

ಮಾಹಿತಿ, ಶಿಕ್ಷಣ ನೀಡುವಂತಹ ಮಹತ್ತರ ಸಾಮಾಜಿಕ ಬದ್ಧತೆಯ ಆಶಯವನ್ನು ಹೊಂದಿರುವ ಈ ಮಾಧ್ಯಮಗಳು, ವಿಶೇಷವಾಗಿ ಟಿವಿಯಂತಹ ಎಲೆಕ್ಟ್ರಾನಿಕ್ ಮಾಧ್ಯಮಗಳು ಒಟ್ಟಾರೆ ಕಾವೇರಿ ನದಿ ನೀರಿನ ಹಂಚಿಕೆಯ ವಿವಾದ, ಬಿಕ್ಕಟ್ಟನ್ನು ಎಲ್ಲಾ ಮಗ್ಗುಲಗಳಿಂದ ವಸ್ತು ನಿಷ್ಠವಾಗಿ ವಿಶ್ಲೇಷಿಸಲು ಆಸಕ್ತಿಯನ್ನೇ ತೋರಿಸಲಿಲ್ಲ. ಅದು ಅವಕ್ಕೆ ಬೇಕಿರಲಿಲ್ಲ.

ಗುಪ್ತ ಅಜೆಂಡಾಗಳು

ಪ್ರಧಾನವಾಗಿ ಅವು ಒಂದೆಡೆ ನೀರಿನ ಬೇಡಿ–ಕೆ–ಕೊರತೆಯಂತಹ ಅತ್ಯಂತ ಸೂಕ್ಷ್ಮ ವಿಷಯ ಮತ್ತು ಜನರಲ್ಲಿನ ಆತಂಕವನ್ನು ದುರ್ಬಳಕೆ ಮಾಡಿಕೊಂಡವು. ತಮ್ಮ ವಾಹಿನಿಗಳಿಗೆ ಜನರನ್ನು ತಮ್ಮ ಗಿರಾಕಿಗಳನ್ನಾಗಿ ಸೆಳೆದುಕೊಳ್ಳುವ ಪ್ರಯತ್ನದಲ್ಲಿ ತೊಡಗಿದವು, ಯಾವುದೇ ಸಮಸ್ಯೆಯೊಂದರ ಗಹನತೆ ಮೂಲ ಕಾರಣ ಮತ್ತು ನಿಜ ಪರಿಹಾರದ ಮಾರ್ಗಗಳೇ ಕಾಣದಂತೆ ಪ್ರಜ್ಞಾಪೂರ್ವಕವಾಗಿ ವರ್ತಿಸಿದವು. ಆಳುವವರ್ಗಗಳ ನೀತಿಗಳಿಗೆ ಪ್ರತಿ–ರೋಧ ಒಡ್ಡಲು ಜನ ಒಂದಾಗಿರದಂತೆ ವಿಭಜಿಸುವ ಹಂಚಿಕೆ ಈಡೇರುವಂತೆ ನೋಡಿಕೊಂಡವು. 'ಹಿಸ್ ಮಾಸ್ಟರ್ ಮೈಂಡ್' ನ ಮನದ ಇಂಗಿ–ತದಂತೆ ರಾಜಕೀಯ ಪಾತ್ರವನ್ನೂ ನಿರ್ವಹಿಸಿದವು. ರಾಜ್ಯದಲ್ಲಿರುವ ಕಾಂಗ್ರೆಸ್‌ನ ಸಿದ್ಧರಾಮಯ್ಯನವರ ಸರ್ಕಾರದ ವಿರುದ್ಧ ಜನರನ್ನು ಎತ್ತಿ ಕಟ್ಟುವ, ಗುಪ್ತ ರಾಜಕೀಯ ಅಜೆಂಡಾವನ್ನು ಸಹ ಹೊಂದಿರಲಿಲ್ಲ ಎಂದು ಅವರಾದರೂ ಹೇಳಬಲ್ಲರೇ?

ಪ್ರಮುಖವಾಗಿ ಕಾವೇರಿ ವಿವಾದದ ಮೂಲ, ಉಭಯ ರಾಜ್ಯಗಳ ಸಂಕಷ್ಟಗಳನ್ನು, ಸಂಕಷ್ಟ ಸೂತ್ರಗಳನ್ನು ರೂಪಿಸಬೇಕಾದ ಅಗತ್ಯವನ್ನು ಅಷ್ಟಾಗಿ ಪ್ರಸ್ತಾಪಿಸಲಿಲ್ಲ, ವಿವರವಾಗಿ ಪ್ರಸಾರಿಸಲೇ ಇಲ್ಲ. ಕಾವೇರಿ ನದಿ ನೀರಿನ ಹಂಚಿಕೆಯಲ್ಲಿರುವ ವಿವಾದಗಳ ಆಳ, ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಇರುವ ಮಿತಿಗಳು, ಸಂವಿಧಾನ, ಕಾನೂನು ಚೌಕಟ್ಟುಗಳ ಮಿತಿಗಳನ್ನು ಒಂದು ಚುನಾಯಿತ ಸರ್ಕಾರ ನಡೆದುಕೊಳ್ಳಬೇಕಾದ ರೀತಿ ಅನಿವಾರ್ಯತೆಗಳನ್ನು ತೆರೆದಿಡದೇ ಮುಚ್ಚಿಟ್ಟದ್ದು ಗುಪ್ತ ಅಜೆಂಡಾದ ಭಾಗವೇ ಆಗಿದೆ. ಹಾಗೆಯೇ ಹಲವಾರು ತಿಂಗಳಿನಿಂದ ನೀರಿನ ಕೊರತೆ, ಬವಣೆಯಲ್ಲಿರುವ ಜನ ಉಭಯ ರಾಜ್ಯಗಳಲ್ಲಿ ಹಾಹಾಕಾರ ಪಡುತ್ತ, ಅದು ವಿವಾದವಾಗಿ, ಎರಡೂ ರಾಜ್ಯಗಳ ನಡುವಿನ ಜಗಳವಾಗಿ ಮಾರ್ಪಾಡಾಗಿ ಕದನದ ಕಣವಾದರೂ ದೇಶದ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸದೇ ಅತ್ಯಂತ ಹೊಣೆಗೇಡಿ ವರ್ತನೆ ತೋರಿದ್ದು ಮಾಧ್ಯಮಗಳಿಗೆ ವಿಷಯವೇ ಆಗಲಿಲ್ಲ ಯಾಕೆ? ಕರ್ನಾಟಕದ ಮುಖ್ಯಮಂತ್ರಿಗಳು ಪ್ರಧಾನಿಗೆ ಎಂಟು ಪತ್ರಗಳನ್ನು ಬರೆದಿದ್ದರೂ ಅದು ನಮ್ಮ ಮಾಧ್ಯಮಗಳಿಗೆ ಸುದ್ದಿಯೇ ಅಲ್ಲ, ಗಂಭೀರ ವಿಷಯವೇ ಅಲ್ಲ!

ಅದೇ ರೀತಿ ಕರ್ನಾಟಕದಲ್ಲಿನ ಬಿಜೆಪಿ, ಜೆಡಿ(ಎಸ್) ಗಳಂತಹ ವಿರೋಧ ಪಕ್ಷಗಳ ಬೇಜವಾಬ್ದಾರಿ ವರ್ತನೆ ಮತ್ತು ನೀರು ಎಷ್ಟಾದರೂ ಹಂಚಿಕೊಳ್ಳಲೇ ಬೇಕು ಎಂದು ಗೊತ್ತಿದ್ದರೂ ನೀರು ಬಿಡಬಾರದು, ಸರಕಾರ ಹೋದರೂ ಸರಿಯೇ ಎಂಬಂತಹ ಸಂದರ್ಭ ಸಾಧಕ ಪ್ರತಿಪಾದನೆಗಳು ಮಾಧ್ಯಮಗಳಿಗೆ ಬಾಧಿಸುವ ವಿಷಯವೇ ಆಗಲಿಲ್ಲ! ಈ ಪ್ರವೃತ್ತಿ ತಮಿಳುನಾಡಿನ ಚಾನೆಲ್‌ಗಳು, ಪತ್ರಿಕೆಗಳಿಗೂ ಅನ್ವಯಿಸುತ್ತದೆ.

ಒಟ್ಟಾರೆ ವಾರವಿಡೀ ಬಿಡುವಿಲ್ಲದೇ ಕವರೇಜ್ ಮಾಡಿದೆವೆಂದೂ ಬೊಗಳೆ ಹೊಡೆದರೂ ಅಂತಿಮವಾಗಿ ಜನರ ಮನಸ್ಸಿನಲ್ಲಿ ಉಳಿದಿದ್ದು ಹಿಂಸಾಚಾರ, ಸಹೋದರ ಭಾಷಿಕರ ನಡುವೆ ದ್ವೇಷದ, ಆಳ ಗಾಯದ ಮನೋಭಾವ! ಇಷ್ಟೆಲ್ಲಾ ಅನಾಹುತ ಉಂಟುಮಾಡಿ ಈ ಚಾನೆಲ್‌ಗಳು ಕೊನೆಗೆ ಕಾನೂನಿನ ದಂಡನೆಯಿಂದ ತಪ್ಪಿಸಿಕೊಳ್ಳಲು 'ಶಾಂತಿ, ಸೌಹಾರ್ದತೆ' ಕಾಪಾಡಲು ಮನವಿ' ಪ್ರಕಟನೆಯ ನಾಟಕವಾಡಿದವು!.

ನಮ್ಮ ಪತ್ರಿಕೆಗಳಂತಹ ಮುದ್ರಣ ಮಾಧ್ಯಮವೂ ಸಮಚಿತ್ತದ, ವಸ್ತುನಿಷ್ಠ ಚಿತ್ರ ತೋರಿಸುವಲ್ಲಿ ಹಿಂದೆ ಬಿದ್ದಿವೆ ಕೂಡ. ವಿಜಯ ಕರ್ನಾಟಕದಂತಹ ಪತ್ರಿಕೆ ಕನ್ನಡ ಭಾಷಿಕರನ್ನು ಕೆಣಕುವಂತಹ ಫೋಟೋಗಳನ್ನು ಪ್ರಸಾರಿದ್ದು ಗಮನಿಸಬೇಕು. ಉಳಿದ ಬಹುತೇಕ ಪತ್ರಿಕೆಗಳ ಸ್ಥಿತಿಯೂ ಇದೆ.

ಅನಿಷ್ಟಗಳ ಆಟ!

ಇನ್ನು ಹಾಸ್ಯಾಸ್ಪದ ತುಣುಕುಗಳೆಂದರೆ ರಾಜ್ಯದಲ್ಲಿ ಎಲ್ಲೋ ಬಿಳಿ ಕಾಗೆಯೊಂದು ಕಾಣಿಸಿಕೊಂಡಿರುವುದರಿಂದ ಈ ಅನಿಷ್ಟ ಸ್ಥಿತಿ ಎಂಬ ಜೋಯಿಸರ ಜೋತಿಷ್ಯ, ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮನೆಯಲ್ಲಿ ಹಾವು ಕಾಣಿಸಿಕೊಂಡ ಅಪಶಕುನದ ಜೋಕ್ ಗಳು ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿವೆ!

ಸ್ವಾಗತಾರ್ಹ ಪ್ರಯತ್ನ

ಈ ಹೊತ್ತಿನಲ್ಲೇ ಹೊಸ ಮಾಧ್ಯಮವಾಗಿರುವ 'ಇಂಟರ್‌ನೆಟ್'ನ ವ್ಯಾಟ್ಸ್ ಅಪ್, ಫೇಸ್‌ಬುಕ್, ಟ್ವೀಟರ್ ನಂತಹುಗಳನ್ನು ಕೆಲವು ಸ್ಥಾಪಿತ ಹಿತಾಸಕ್ತಿ ಗುಂಪುಗಳು ಪರಿಣಾಮಕಾರಿಯಾಗಿ ದುರುಪಯೋಗ ಮಾಡಿಕೊಂಡವು. ಸುಳ್ಳು ವದಂತಿ ಹಬ್ಬಿಸಲು, ಕೇಂದ್ರ ಹೊಣೆ ಮರೆಸಲು, ಮುಂದೆ ಬಿಜೆಪಿಯೇ ಅಧಿಕಾರಕ್ಕೆ ತರಬೇಕೆಂಬ ಹಿಡನ್ ಅಜೆಂಡಾದೊಂದಿಗೆ ಕೂಡ ಕ್ರಿಯಾಶೀಲವಾಗಿದ್ದವು. ಅಂತರ್ಜಾಲದಲ್ಲಿ ಹೀಗೆ ಪ್ರಧಾನ ಟ್ರೆಂಡ್ ಇದ್ದರೂ ಇದಕ್ಕೆ ಎದುರಾಗಿ ಜನರ ಒಗ್ಗಟ್ಟು, ಸಾಮರಸ್ಯ ಹಾಳಾಗದಂತೆ ಕಾಪಾಡಲು ಪ್ರಯತ್ನಗಳೂ ಇಲ್ಲಿ ನಡೆದವು. ಜನರನ್ನು ಒಂದುಗೂಡಿಸಲು, ವಿವಾದದ ಸೂಕ್ಷ್ಮತೆ ಮನವರಿಕೆ ಮಾಡಲು, ಹಾನಿಯನ್ನು ತಡೆಯಲು ಕೆಲವು ವ್ಯಕ್ತಿಗಳು, ಜಾಲತಾಣದಲ್ಲಿನ ಪ್ರಗತಿಪರ ಗುಂಪುಗಳು ಯತ್ನಿಸಿರುವುದು ಸಹ ಉಲ್ಲೇಖನೀಯ.

ಕೊನೆಗೂ ಬಾಯ್ಬಿಟ್ಟವರು

ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಮಾಧ್ಯಮಗಳು ವಹಿಸುತ್ತಿರುವ ನಕರಾತ್ಮಕ, ಅಪಾಯಕಾರಿಯಾದ ಪಾತ್ರವನ್ನು ಕೊನೆಗೂ ಕೇಂದ್ರ ಸರ್ಕಾರ ಗಮನಿಸಿ, ಪ್ರತಿಕ್ರಿಯಿಸಲೇ ಬೇಕಾಗಿ ಬಂತು. ಕೇಂದ್ರ ಪ್ರಸಾರ ಖಾತೆ ಇಲಾಖೆ, ಸಚಿವ ವೆಂಕಯ್ಯನಾಯ್ಡು ಹಿಂಸಾಕಾಂಡದ ಮರುದಿನ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದರು. ಕೊನೆಗೂ ಪ್ರಧಾನಿ ಮೋದಿಯೂ ಶಾಂತಿ, ಸಾಮರಸ್ಯದಿಂದಲೇ ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ಬಾಯಿ ಬಿಟ್ಟಿದ್ದು ಚಾನೆಲ್, ಮುದ್ರಣ ಮಾಧ್ಯಮಗಳ ಅನಾಹುತದ ಪಾತ್ರದ ಪ್ರಮಾಣವನ್ನು ತೋರಿಸುತ್ತದೆ.

ಇದೇ 'ಮುತ್ಸದ್ದಿತನ'ವನ್ನು ಹಿಂದೆ ಆತ್ಮಹತ್ಯೆ ಮಾಡಿಕೊಂಡ ಡಿಕೆ ರವಿ, ಡಿವೈಎಸ್‌ಪಿ ಗಣಪತಿ, 'ದೇಶದ್ರೋಹ'ದ ಆರೋಪದ ಸರಣಿ ಪ್ರಕರಣಗಳ ಸಂದರ್ಭದಲ್ಲಿ ತೋರಿಸಿ, ಹೊಣೆಗೇಡಿ ಮಾಧ್ಯಮಗಳಿಗೆ ಕಾನೂನು ವ್ಯಾಪ್ತಿಯಲ್ಲಿ ಎಚ್ಚರಿಸಿ, ಮೀರಿದ್ದರೆ ತಕ್ಕ ಪಾಠವನ್ನು ಕಲಿಸಿದ್ದರೆ ಈಗ ಆಗಬಹುದಾದ ಅನಾಹುತದ ಪ್ರಮಾಣ ಒಂದಷ್ಟು ಕಡಿಮೆಯಾಗುತ್ತಿತ್ತು. ಇಲ್ಲಿ ಕೇಂದ್ರದ ಮೌನವೂ ಅರ್ಥವಾಗುವಂತಹುದು. ಅವರ ಲೆಕ್ಕಾಚ್ಚಾರಕ್ಕೆ ಪೂರಕ ಎಂದು ಭಾವಿಸಿದ್ದರೆ ಇನ್ನು ಕ್ರಮವೆಲ್ಲಿ?.

ಆದರೂ ಕತ್ತಲೆಯಲ್ಲಿ ಬೆಳಗಿದ ಹಣತೆಗಳು

ಒಟ್ಟಾರೆ ಈ ಬಾರಿ ಕಾವೇರಿ ವಿವಾದದಲ್ಲಿ ಟಿವಿ, ಪತ್ರಿಕೆ ಮಾಧ್ಯಮಗಳು ವಹಿಸಿದ ಪಾತ್ರ ಬಹುತೇಕ ನಕಾರಾತ್ಮಕ, ಹಾನಿಕಾರಕ. ಇದರ ಅಪಾಯ ಅರಿತ ಬಹಳಷ್ಟು ಜನ ಥೇ ಎಂದು ಗೋಣಿಗಿಕೊಂಡು ನಾನೇನು ಮಾಡಲು ಸಾಧ್ಯ ಎಂದು ಸುಮ್ಮನಾದದ್ದು ಇದೆ. ಆದರೆ ಇಡೀ ಸಮಾಜವನ್ನು ಒಡೆಯುವ, ಭಾರತದ ಒಕ್ಕೂಟದ ವ್ಯವಸ್ಥೆಗೆ, ಸಂವಿಧಾನ – ಕಾನೂನಿಗೆ ವಿರುದ್ಧವಾಗಿ ವರ್ತಿಸುವ ಮಾಧ್ಯಮಗಳ ಮೇಲೆ ಕ್ರಮ ಜರುಗಿಸಲು ಮುಂದಾದವರೂ ಇದ್ದಾರೆ. ಈ ದೆಸೆಯಲ್ಲಿ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಟಿ. ಸುರೇಂದ್ರರಾವ್‌ರವರು ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೆ ಮನವಿ ಸಲ್ಲಿಸಿ ಸ್ವಯಂ ಪ್ರೇರಿತ ಕಾನೂನು ಕ್ರಮ ವಹಿಸಲು ಮನವಿ ಮಾಡಿದ್ದು ಅತ್ಯಂತ ಸ್ವಾಗತಾರ್ಹ, ಇದಕ್ಕೆ ನಾಡಿನ ಅನೇಕರೂ ಜೊತೆಗೂಡಿದ್ದಾರೆ. ಇದು ಮುಂದಿನ ದಿನಗಳಲ್ಲಿ 'ಹಾದಿ ತಪ್ಪುವ', ತಪ್ಪಿಸುವ ಮಾಧ್ಯಮಗಳಿಗೆ ಅಂಕುಶ ಹಾಕುವ ಒಂದು ಪ್ರಯತ್ನಕ್ಕೆ ಪ್ರೇರಣೆ ಎನ್ನಬಹುದಲ್ಲ. ●

ಸಿಐಟಿಯು ಬೆಳಗಾವಿ 5ನೇ ಜಿಲ್ಲಾ ಸಮ್ಮೇಳನ

ಕಾರ್ಮಿಕ ಚಳುವಳಿ ತೀವ್ರಗೊಳಿಸಲು ಕರೆ

ಉತ್ತಮ ಬದುಕಿಗಾಗಿ ಹೆಚ್ಚಿನ ನಿರೀಕ್ಷೆಗಳನ್ನು ಇಟ್ಟುಕೊಂಡಿರುವ ದುಡಿಯುವ ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿರಾಶೆಗೊಳಿಸಿವೆ. ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಮರೆತು ವಿದೇಶಿ ಪ್ರವಾಸದಲ್ಲಿ ಮಗ್ನರಾದ ಪ್ರಧಾನಮಂತ್ರಿ ನರೇಂದ್ರ ಮೋದಿ ರವರ ನೀತಿ ಖಂಡನೀಯ ಎಂದು ಅಗಸ್ಟ 13 ಮತ್ತು 14ರಂದು ಎರಡು ದಿನಗಳ ಕಾಲ ಬೆಳಗಾವಿ ಜಿಲ್ಲೆಯ ಸರಸ್ವತಿ ಕಲ್ಯಾಣ ಮಂಟಪದಲ್ಲಿ ನಡೆದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು)ನ 5ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ||ಆರ್. ಎಸ್.ಬಸವರಾಜ ರವರು ತಿಳಿಸಿದರು.

ಮುಂದುವರೆದ ಮಾತನಾಡಿದ ಅವರು ಅಲ್ಪಸಂಖ್ಯಾತ ಮತ್ತು ದಲಿತರ ಮೇಲೆ ದೇಶದಲ್ಲಿ, ರಾಜ್ಯದಲ್ಲಿ ಹಲ್ಲೆಗಳು ನಡೆಯುತ್ತಿದ್ದರೂ ಸರ್ಕಾರಗಳು ಮೌನ ವಹಿಸಿವೆ. ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ ನಿಗಧಿ ಮಾಡುತ್ತಿಲ್ಲಾ ಆದ್ದ–ರಿಂದ ಬರುವ ಸೆಪ್ಟಂಬರ 2ರ ಅಖಿಲ ಭಾರತ ಮುಷ್ಕರದ ಭಾಗವಾಗಿ ಎಲ್ಲಾ ಕಾರ್ಮಿಕರು ತಮ್ಮ ತಮ್ಮ ಕೆಲಸಗಳನ್ನು ಬಂದ್ ಮಾಡಿ ಸರ್ಕಾರಗಳ ನೀತಿಯ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ಕೊಟ್ಟರು.

ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ. ರೈತರಿಗೆ ಬೆಂಬಲ ಬೆಲೆ ನೀಡುವುದಾಗಿ ಹಾಗೂ ಶ್ರಮವೇ ಜಯತೆ ಎಂದು ಘೋಷಣೆಗಳನ್ನು ನೀಡಿದ ಮೋದಿಯವರು ಎತ್ತ ಕಡೆ ಸಾಗುತ್ತಿದ್ದಾ–ರೆ ಎಂದು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಕಾರ್ಮಿಕ ಮುಂಖಡರಾದ ವ್ಹಿ.ಪಿ.ಕುಲಕರ್ಣಿರವರು ಮಾತನಾಡಿದರು.



ವೇದಿಕೆಯ ಮೇಲೆ ಇದ್ದ ಕಾರ್ಮಿಕ ಮುಖಂಡರಾದ ಎಲ್.ಎಸ್.ನಾಯಕ, ಸಿ.ಎ.ಖರಾಡೆರವರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಎಮ್.ಜೈನೆಖಾನ ಕೊನೆಯಲ್ಲಿ ಸ್ವಾಗತಿಸಿ ವಂದಿಸಿದರು.

ಕೊನೆಯಲ್ಲಿ ನೂತನ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಯಿತು. ಸಿಐಟಿಯು ಜಿಲ್ಲಾ ಗೌರವಾಧ್ಯಕ್ಷರಾಗಿ ಕಾಂ||ಸಿ.ಎ.ಖರಾಡೆ, ಜಿಲ್ಲಾಧ್ಯಕ್ಷರಾಗಿ ಕಾಂ||ವಿ.ಪಿ.ಕುಲಕರ್ಣಿ, ಪ್ರಧಾನ ಕಾರ್ಯದರ್ಶಿಯಾಗಿ ಕಾಂ||ಜಿ.ಎಮ್. ಜೈನೆಖಾನ ಮತ್ತು ಖಜಾಂಚಿಯಾಗಿ ಕಾಂ||ಜಿ.ವ್ಹಿ. ಕುಲಕರ್ಣಿರವರು ಆಯ್ಕೆಯಾದರು. ಒಟ್ಟು 49 ಜನರ ಜಿಲ್ಲಾ ಸಮಿತಿ ಆಯ್ಕೆ ಮಾಡಲಾಗಿದೆ. ಸಮಾರೋಪದೊಂದಿಗೆ ಕಾರ್ಮಿಕ ಹೋರಾಟಗಳನ್ನು ತೀವ್ರಗೊಳಿಸಬೇಕೆಂದು ಸಮ್ಮೇಳನ ಕರೆ ನೀಡಿತು.



ಅಡಿಕೆ, ತೆಂಗು ಬೆಂಬಲ ಬೆಲೆಗಾಗಿ ರೈತರಿಂದ ಹೆದ್ದಾರಿ ತಡೆ

ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿದರೆ ಮಾತ್ರ ಕೃಷಿಯನ್ನು ಉಳಿಸಲು ಹಾಗೂ ಆಹಾರ ಭದ್ರತೆ ಕಾಪಾಡಿಕೊಳ್ಳಲು ಸಾಧ್ಯ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಆರ್. ಚಂದ್ರತೇಜಸ್ವಿ ಹೇಳಿದರು.

ಅವರು ಸೆಪ್ಟಂಬರ್ 08ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದಲ್ಲಿ ಅಡಿಕೆ, ತೆಂಗು ಬೆಳೆಗೆ ಬೆಂಬಲ ಬೆಲೆಗೆ ಆಗ್ರಹಿಸಿ ಪ್ರಾಂತ ರೈತ ಸಂಘದ ವತಿಯಿಂದ ನಡೆದ ರಾಷ್ಟ್ರೀಯ ಹೆದ್ದಾರಿ ತಡೆ ಹೋರಾಟದಲ್ಲಿ ಮಾತನಾಡಿದರು.

ರೈತರ ಸಂಕಷ್ಟಗಳನ್ನು ದೂರ ಮಾಡುವ ದೃಷ್ಠಿಯಿಂದ ಸ್ವಾಮಿನಾಥನ್ ಆಯೋಗ ರಚಿಸಿದ ಕಾಂಗ್ರೆಸ್ ಸರ್ಕಾರದವರೇ ಕೇಂದ್ರದಲ್ಲಿ 10 ವರ್ಷಗಳ ಕಾಲ ಆಡಳಿತ ನಡೆಸಿದಾಗಲೂ ಸಹ ಆಯೋಗದ ಶಿಪಾರಸುಗಳನ್ನು ಜಾರಿಗೊಳಿಸಲು ಮುಂದಾಗದೆ ಕೃಷಿಯನ್ನು ಕಡೆಗಣಿಸಿದ್ದು ದುರಂತದ ಸಂಗತಿಯಾಗಿದೆ ಎಂದು ಹೇಳಿದರು.

ಕೇಂದ್ರದಲ್ಲಿ ಆಡಳಿತಕ್ಕೆ ಬರುವ ಮುನ್ನ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವುದಾಗಿ ಪ್ರಧಾನ ಮಂತ್ರಿ ನರೇಂದ್ರಮೋದಿ ರೈತರಿಗೆ ಭರವಸೆ ನೀಡಿದ್ದರು. ಆದರೆ ಈಗ ಪ್ರಧಾನಮಂತ್ರಿಗಳ ಕಚೇರಿ ಸುಪ್ರಿಂಕೋರ್ಟ್‌ಗೆ ಪ್ರಮಾಣ ಪತ್ರಸಲ್ಲಿಸಿ ರೈತರು ಕೃಷಿಗಾಗಿ ಖರ್ಚು ಮಾಡಿರುವ ಹಣದ ಮೇಲೆ ಶೇ.50 ಬೆಲೆ ನೀಡಲು, ಆಯೋಗದ ಶಿಪಾರಸುಗಳನ್ನು ಜಾರಿಗೊಳಿಸಲು ಕಷ್ಟ ಎಂದು ತಿಳಿಸಿದೆ. ಬಿಜೆಪಿಯವರಿಗೆ ರೈತರ ಬಗ್ಗೆ ಎಷ್ಟರ ಮಟ್ಟಿಗೆ ಕಾಳಜಿ ಇದೆ ಎನ್ನುವುದು ಇದರಿಂದಲೇ ಅರ್ಥವಾಗುತ್ತದೆ ಎಂದರು.

ರಾಜ್ಯದಲ್ಲಿ ಗಣಿ ಉದ್ಯಮಿಗಳಿಂದ 1 ಲಕ್ಷ ಕೋಟಿ ತೆರಿಗೆ ವಂಚನೆಯಾಗಿದೆ ಎಂದು ಮಾಜಿ ಲೋಕಾಯುಕ್ತರಾದ ನ್ಯಾಯಮೂರ್ತಿ ಸಂತೋಷ್‌ಹೆಗ್ಡೆ ಅವರು ಸರ್ಕಾರಕ್ಕೆ ವರದಿ ನೀಡಿದ್ದರು. ಆದರೆ ಬೆಳೆ ನಷ್ಟದಿಂದ ಕಂಗಾಲಾಗಿರುವ ರೈತರ ಸಾಲ ಮನ್ನಾ ಮಾಡಲು ನೂರೆಂಟು ನೆಪಗಳನ್ನು ಹೇಳಲಾಗುತ್ತಿದೆ. ಮೋದಿ ಅಧಿಕಾರಕ್ಕೆ ಬಂದ ನಂತರ ಇಡೀ ದೇಶದಲ್ಲಿ ರೈತರ ಆತ್ಮಹತ್ಯೆಗಳ ಪ್ರಮಾಣ ಶೇ 26ರಷ್ಟು ಹೆಚ್ಚಾಗಿದೆ. ಇಷ್ಟಿದ್ದರೂ ಸಹ ಅಮೇರಿಕಾ ದೇಶಕ್ಕೆ ನಾಲ್ಕು ಬಾರಿ ಭೇಟಿ ನೀಡಿ ಬರುವ ಮೋದಿ ದೇಶದ ಯಾವುದೇ ಒಂದು ಗ್ರಾಮಕ್ಕೂ ಭೇಟಿ ನೀಡಿ ರೈತರ, ಬಡವರ ಕಷ್ಟಗಳ ಬಗ್ಗೆ ಸ್ಪಂದಿಸುತ್ತಿಲ್ಲ ಎಂದರು.

ಹಿರಿಯ ಸಾಹಿತಿ ದೇವನೂರ ಮಹಾದೇವ ಅವರು ಹೇಳುವಂತೆ ಅನ್ನ ತಿನ್ನುವ ಎಲ್ಲರು ಸಹ ರೈತರ ಬಗ್ಗೆ ಚಿಂತನೆ ನಡೆಸದೇ ಹೋದರೆ ಕೃಷಿ ಉಳಿಯುವುದಿಲ್ಲ ಎನ್ನುವ ಮಾತುಗಳನ್ನು ಆಡಳಿತ ನಡೆಸುವ ಎಲ್ಲರು ನೆನಪಿನಲ್ಲಿಟ್ಟುಕೊಳ್ಳಬೇಕು. ಅಡಿಕೆ, ತೆಂಗಿಗೆ ಕೇಂದ್ರ ಸರ್ಕಾರ ತಕ್ಷಣ ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ದೊಡ್ಡಬೆಳವಂಗಲ ಹೋಬಳಿಯಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಬಗ್ಗೆ ಬೆಸ್ಕಾಂ ಎಂಜಿನಿಯರ್ ಅವರುನ್ನು ಇದೇ ಸಂದರ್ಭದಲ್ಲಿ ತರಾಟೆಗೆ ತೆಗೆದು-ಕೊಂಡಿದ್ದರಿಂದ ರೊಚ್ಚಿಗೆದ್ದ ರೈತರನ್ನು ಸಮಾಧಾನ ಪಡಿಸಲು ಪೊಲೀಸರು ಪರದಾಡುವಂತಾಯಿತು. ಪ್ರತಿಭಟನೆಯಿಂದಾಗಿ ತುಮಕೂರು-ದೊಡ್ಡಬಳ್ಳಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ರಸ್ತೆ ತಡೆಯಲ್ಲಿ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗಪ್ಪ, ಕಾರ್ಯದರ್ಶಿ ಸಿ.ರಾಮಕೃಷ್ಣ, ಮುಖಂಡರಾದ ರುದ್ರಾರಾಧ್ಯ, ಉಗ್ರಪ್ಪ, ರಾಮಕೃಷ್ಣ ಸದಾಶಿವಯ್ಯ, ಗಿರೀಶ್, ರಮೇಶ್, ಧರ್ಮೇಂದ್ರ, ಚನ್ನೇಗೌಡ, ಸಿದ್ದಗಂಗಯ್ಯ, ವಾಸೇಗೌಡ, ಡಿ.ಪಿ.ರಾಮಯ್ಯ ಮತ್ತಿತರರು ಭಾಗವಹಿಸಿದ್ದರು.

ಕೇಳಿಸಿದ್ದು

ಮಾಧ್ಯಮ ಪ್ರತಿನಿಧಿಗಳಿಗೆ ಅತ್ಯಂತ ಅಗತ್ಯವಾಗಿರುವುದು ತಮ್ಮ ಅರಿವಿನ ಮಿತಿಯ ಕುರಿತ ಜ್ಞಾನ. ದುರದೃಷ್ಟವಶಾತ್ ಟಿ.ವಿ. ಸ್ಟುಡಿಯೋಗಳಲ್ಲಿ ಕ್ಯಾಮರಾದ ನಿರೂಪಕರಾಗಿ ಕುಳಿತವರು ಕಳೆದುಕೊಂಡಿರುವುದು ಈ ಜ್ಞಾನವನ್ನು. ಪರಿಣಾಮವಾಗಿ ಅವರು ಸಕಲ ವಿಷಯಗಳ ತಜ್ಞರೂ, ಹೋರಾಟಗಾರರೂ, ಸಮಾಜ, ಸರ್ಕಾರ, ಸಂಘಟನೆಗಳಿಗೆಲ್ಲಾ ಬೋಧಿಸುವ ಜ್ಞಾನಿಗಳೂ ಆಗಿಬಿಡುತ್ತಾರೆ. ಪರಿಣಾಮದ ಅರಿವೇ ಇಲ್ಲದೆ ಎಲ್ಲಾ ಅಪೂರ್ಣ, ಅರ್ಧ ಸತ್ಯಗಳಿಗೆ ಇವರು ನಿಜದ ಪೋಷಾಕು ತೊಡಿಸುತ್ತಾರೆ. ಸೋಮವಾರ ಟಿ.ವಿ.ಯ ತೆರೆಗಳ ಮೇಲೆ ಅನಾವರಣಗೊಂಡದ್ದು ಇದುವೇ. ಅದರ ಪರಿಣಾಮ ಕಾಣಿಸಿದ್ದು ಮಾತ್ರ ಬೆಂಗಳೂರಿನ ಬೀದಿಗಳಲ್ಲಿ.

ಕಳೆದ 25 ವರ್ಷಗಳ ಅವಧಿಯಲ್ಲಿ ಹಲವು ಬಾರಿ ಕಾವೇರಿ ನೀರಿನ ಹಂಚಿಕೆಯ ವಿವಾದಕ್ಕೆ ಹಲವು ಬಾರಿ ಕಾವೇರಿದ್ದರೂ ಅದು ಕನ್ನಡ-ತಮಿಳು ಭಾವನೆಗಳನ್ನು ಕೆರಳಿಸಿರಲಿಲ್ಲ. ಆದರೆ ಒಂದು ಕ್ಷುಲ್ಲಕ ಘಟನೆ ಮತ್ತು ಅದರ ವಿವೇಚನಾ ರಹಿತ ಪ್ರಸಾರ ಎರಡೂವರೇ ದಶಕಗಳ ಸಂಯಮವನ್ನು ನಾಶ ಮಾಡಿತು. ಸಾಮಾನ್ಯವಾಗಿ ವೈರಲ್ ಆದ ವಿಡಿಯೋಗಳು ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು. ಆದರೆ ಇಲ್ಲಿ ಮಾಧ್ಯಮದಲ್ಲಿ ಕಾಣಿಸಿಕೊಂಡ ವಿಡಿಯೋ ವೈರಲ್ ಆಯಿತು.

ಗೋಲಿಬಾರಿಗೆ ಜೀವಗಳೂ ಬಲಿಯಾದ ಮೇಲೆ ಟಿ.ವಿ. ಸ್ಟುಡಿಯೋಗಳ ಒಳಕ್ಕೆ ವಿವೇಕ ತಾತ್ಕಾಲಿಕ ಪ್ರವೇಶ ಪಡೆದಂತೆ ಕಾಣಿಸಿತು. ಅಥವಾ ಇದೂ ಜನಪ್ರಿಯ ಸಿನಿಮಾಗಳ ಮಾದರಿಯೇ ಆಗಿತ್ತೇನೋ. ಎಲ್ಲವೂ ಮುಗಿದ ಮೇಲೆ ಸಿನಿಮಾಗಳಲ್ಲಿ ಪೊಲೀಸರು ಬರುತ್ತಾರೆ. ಮಂಗಳವಾರ ಬೆಳಕು ಹರಿಯುವ ಹೊತ್ತಿಗೆ 'ಕನ್ನಡ ಹೋರಾಟಗಾರ'ರೆಲ್ಲ 'ದುಷ್ಕರ್ಮಿ'ಗಳಾಗಿ ಬದಲಾಗಿದ್ದರು

– ಎನ್.ಎ.ಎಂ. ಇಸ್ಮಾಯಿಲ್ (ಪ್ರಜಾವಾಣಿ)

ಕಾವೇರಿ ವಿವಾದ : ಪ್ರಧಾನಿ ಮಧ್ಯಪ್ರವೇಶಕ್ಕಾಗಿ ಆಗ್ರಹ



ಮಂಡ್ಯ: ತಕ್ಷಣದಲ್ಲೇ 4 ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಸೌಹಾರ್ದಯುತವಾಗಿ ಕಾವೇರಿ ನೀರಿನ ಸಮಸ್ಯೆಯನ್ನು ಇತ್ಯರ್ಥಗೊಳಿಸಬೇಕು, ವಾಸ್ತವ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕು ಮತ್ತು ಜನತೆಯು ಶಾಂತಿ ಕಾಪಾಡಬೇಕೆಂದು ಆಗ್ರಹಿಸಿ ಮಂಡ್ಯ ಜಿಲ್ಲೆಯಲ್ಲಿ ಬೈಕ್ ಜಾಥಾ ನಡೆಸುವ ಮೂಲಕ ರಸ್ತೆ ತಡೆ ನಡೆಸಲಾಗಿದೆ.

ಪ್ರತಿಭಟನೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ, ಡಿವೈಎಫ್ಐ, ಕಾರ್ಯಕರ್ತರೂ ಮುಖಂಡರೂ ಇದ್ದರು. ಪ್ರತಿಭಟನೆಯಲ್ಲಿ ಮುಖಂಡರಾದ ದೇವಿ, ಭರತ್ ರಾಜ್, ತಿಮ್ಮೇಗೌಡ, ಗುರುಸ್ವಾಮಿ, ಆನಂದ, ಟಿ.ಎಲ್.ಕೃಷ್ಣೇಗೌಡ, ಜಿ.ರಾಮಕೃಷ್ಣ, ಮಂಜುಳ, ಮುಂತಾದವರು ಭಾಗವಹಿಸಿದ್ದರು.

ನೆಲಮಂಗಲ: ಕರ್ನಾಟಕದ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುವುದು ಮತ್ತು ಕೃಷಿ ನೀರಾವರಿಗೆ ತೊಂದರೆಯಾಗುವ ಸಂಭವವಿದೆ. ಈ ಹಿನ್ನೆಯಲ್ಲಿ ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಯನ್ನು ಅರಿತು ಕೂಡಲೇ ಮಧ್ಯ ಪ್ರವೇಶ ಮಾಡಬೇಕೆಂದು ಆಗ್ರಹಿಸಿ ಸಿಐಟಿಯು, ನೆಲಮಂಗಲ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಸೆಪ್ಟಂಬರ್ 9 ರಂದು ನೂರಾರು ಕಾರ್ಮಿಕರು ಮೆರವಣಿಗೆ ನಡೆಸಿದರು.

ಮೆರವಣಿಗೆಯಲ್ಲಿ ಸಾಗಿದ ನೂರಾರು ಕಾರ್ಮಿಕರು ನೆಲಮಂಗಲ ತಾಲ್ಲೂಕು ಕಛೇರಿ ಮುಂಭಾಗ ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಸಿಐಟಿಯು ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷರಾದ ಪ್ರತಾಪ್ ಸಿಂಹ, ನೆಲಮಂಗಲ ತಾಲ್ಲೂಕು ಅಧ್ಯಕ್ಷರಾದ ತಿರುಮಲಾಚಾರ್ ಮತ್ತು ಇನ್ನಿತರ ಮುಖಂಡರು ಭಾಗವಹಿಸಿದ್ದರು.

ಬೆಂಗಳೂರಿನ ನವರಂಗ್ ವೃತ್ತದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ರಾಜಾಜಿನಗರ ವಲಯ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೋಪಾಲಕೃಷ್ಣ ಅರಳಹಳ್ಳಿ, ವಲಯ ಕಾರ್ಯದರ್ಶಿ ಕೆ.ವೀರಮಣಿ, ಸದಸ್ಯರಾದ ನವೀನ್ ಶೆಣೈ, ಎನ್.ಪಾರ್ಥಿಬನ್, ಡಿ.ಚಂದ್ರಶೇಖರ್, ಶಾರದಾ.ಕೆ.ಎಸ್, ಎನ್.ರಾಜಣ್ಣ, ರಂಗಪ್ಪ, ಗೌಡಗೆ-ರೆ ಮಾಯಾಶ್ರೀ, ರವಿಕುಮಾರ್, ಚಂದ್ರಯ್ಯ.ಪಿ, ಸದಾನಂದಭಟ್, ನೀಲಕಂಠನ್, ಸಿ.ಚಂದ್ರಶೇಖರ್ ಸೇರಿದಂತೆ ಕಾರ್ಮಿಕರು, ಆಟೋ ಚಾಲಕರು ಮುಂತಾದವರು ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆಸಿ ಕಾವೇರಿ ನೀರಿನ ಸಮಸ್ಯೆ ಬಗೆಹರಿಸಲು ಪ್ರಧಾನ ಮಂತ್ರಿಗಳು ಕೂಡಲೇ ಮಧ್ಯಪ್ರವೇಶಿಸಬೇಕೆಂದು, ಜನತೆ ಸೌಹಾರ್ದತೆ ಕಾಪಾಡಬೇಕೆಂದು ಧರಣಿ ಮೆರವಣಿಗೆಗಳು ನಡೆದಿವೆ.

ಕಾರ್ಮಿಕರಿಗೆ ಅಚ್ಚೇ ದಿನ್ ತರುವಲ್ಲಿ ಮೋದಿ ಸರ್ಕಾರ ವಿಫಲ: ಮಹೇಶ ಪತ್ತಾರ



ದೇಶದ 100ಕ್ಕೆ 90ರಷ್ಟು ದುಡಿಯುವ ಜನರಿದ್ದಾರೆ. ಕೇಂದ್ರದ ಮೋದಿ ಸರ್ಕಾರ ಅಚ್ಚೇ ದಿನ್ ತರುವಲ್ಲಿ ವಿಫಲಗೊಂಡಿದ್ದಾರೆ. ಕಾರ್ಮಿಕ-ಜನ ಸಾಮಾನ್ಯರ ಪರವಾದ ನೀತಿಗಳಿಗಿಂತ ಕಾರ್ಪೋರೇಟ್ ಕಂಪನಿಗಳ ಪರವಾದ ನೀತಿಗಳು, ಬಹುರಾಷ್ಟ್ರೀಯ ಕಂಪನಿಗಳ ಪರವಾದ ನೀತಿಗಳನ್ನು ಜಾರಿ ಮಾಡುತ್ತಿರುವುದರಿಂದ ದೇಶದ ದುಡಿಯುವ ವರ್ಗ ತಮ್ಮ ಬದುಕನ್ನು ಕಟ್ಟಿಕೊಳ್ಳಲಾಗದ ಸ್ಥಿತಿಗೆ ತಲುಪಿದ್ದಾರೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ ಪತ್ತಾರ ಹೇಳಿದರು.

ಸೆಪ್ಟಂಬರ್ 11ರಂದು ಹಾವೇರಿ ನಗರದ ಸರ್ಕಾರಿ ನೌಕರರ ಭವನದಲ್ಲಿ ನಡೆದ ಸಿಐಟಿಯುನ ಹಾವೇರಿ ಜಿಲ್ಲಾ ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚುನಾವಣಾ ಪೂರ್ವದಲ್ಲಿ 1 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು, ಆದರೆ ಚುನಾವಣೆಯ ನಂತರದಲ್ಲಿ 14 ಲಕ್ಷದಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡಿದ್ದಾರೆ ಆದ-ರೆ ಆ ಉದ್ಯೋಗಗಳಿಗೆ ಯಾವುದೇ ಭದ್ರತೆಗಳನ್ನು ಕೇಂದ್ರದ ನರೇಂದ್ರ ಮೋದಿ ಸರ್ಕಾರ ನೀಡಿಲ್ಲ, ಗುತ್ತಿಗೆ ಕಾರ್ಮಿಕರ ಪದ್ಧತಿ ಕಾನೂನಿನ ಪ್ರಕಾರ ನಿರಂತರ ಗುತ್ತಿಗೆ ಕೆಲಸ ಮಾಡುವ ಕಾರ್ಮಿಕರನ್ನು ಖಾಯಂಗೊಳಿಸಬೇಕೆಂದು ಕಾನೂನಿನಲ್ಲಿ ಅವಕಾಶವಿದ್ದರೂ ಕೂಡಾ ಸರ್ಕಾರಗಳು ಅದರ ಗಮನಹರಿಸುತ್ತಿಲ್ಲ ಎಂದರು.

ನರೇಂದ್ರ ಮೋದಿಯವರು ಪ್ರಧಾನಿಯಾಗಿ ವರ್ತಿಸುವುದರ ಬದಲು ಬಹುರಾಷ್ಟ್ರೀಯ ಕಂಪನಿಗಳ ಏಜೆಂಟರಂತೆ ವರ್ತಿಸುತ್ತಿದ್ದಾರೆ, ಸರ್ಕಾರಗಳ ಕೃಷಿ ನೀತಿಗಳಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕೃಷಿ ಬಿಕ್ಕಟ್ಟು ಸೃಷ್ಠಿಯಾಗಿದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ, ದುಡಿಯುವ ಜನರ ವಿರೋಧಿ ಸರ್ಕಾರವಾಗಿದೆ ಎಂದು ತಿಳಿಸಿದರು.

ರಾಜ್ಯದ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಾರ್ಮಿಕರ ಬೇಡಿಕೆಗಳನ್ನು ಇಡೇರಿಸುವ ಕುರಿತು ಮತನಾಡುತ್ತಿಲ್ಲ, ಕೇಂದ್ರದ ಬಿಜೆಪಿ ಸರ್ಕಾರದ ರೀತಿಯಲ್ಲೇ ಕಾರ್ಮಿಕ ವಿರೋಧಿ ನೀತಿಗಳನ್ನೇ ಅನುಸರಿಸುತ್ತಿದೆ. ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಕಾರ್ಮಿಕ ವರ್ಗದ ಮುಂದಿರುವ ಸವಾಲುಗಳ ಕುರಿತು ಚಿಂತನೆಯೊಂದಿಗೆ ಕರ್ನಾಟಕ ರಾಜ್ಯವನ್ನು ಒಂದು ಸೌಹಾರ್ದಯುತದತ್ತ ಕೊಂಡ್ಯೊಯ್ಯಬೇಕಿದೆ ಎಂದರು.

ಜಿಲ್ಲೆಯ ವಿವಿಧ ವಿಭಾಗದ ಕಾರ್ಮಿಕರ ಸಮಗ್ರ ಅಭಿವೃದ್ಧಿ ಹಾಗೂ ಕಾರ್ಮಿಕರ ಪಾತ್ರ, ಆರ್ಥಿಕ, ಸಾಮಾಜಿಕ, ರಾಜಕೀಯ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಹಾವೇರಿ ಜಿಲ್ಲಾ ಕಾರ್ಮಿಕರ ಸಮಾವೇಶವನ್ನು ನಡೆಸುತ್ತಿದ್ದೇವೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಗ್ರಾಮ ಪಂಚಾಯತ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಬಿ.ಐ.ಈಳಗೇರ ಮಾತನಾಡಿ, ಹಮಾಲಿ, ಗ್ರಾಮ ಪಂಚಾಯತ, ಗುತ್ತಿಗೆ ಕಾರ್ಮಿಕರು, ಇತರೆ ವಿಭಾಗದ ಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗಾಗಿ ಸಿಐಟಿಯು ನಿರಂತರ ಯಶಸ್ವಿ ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಜೊತೆಗೆ ರೈತ, ಕೃಷಿ ಕೂಲಿಕಾರ ಜನಪರ ಹೋರಾಗಳಿಗೆ ಬೆಂಬಲಿಸುತ್ತಾ ರೈತ-ಕಾರ್ಮಿಕರ ಐಕ್ಯತೆಯನ್ನು ಬೆಸೆಯಲು ಮುಂದಾಗಿದೆ ಎಂದರು.

ಗ್ರಾಮ ಪಂಚಾಯತ ನೌಕರರ ಸಂಘದ ಜಿಲ್ಲಾ ಅದ್ಯಕ್ಷರಾದ ನಾರಾಯಣ ಕಾಳೆ ಮಾನಾಡಿದರು, ಸಿಐಟಿಯು ಜಿಲ್ಲಾ ಸಂಚಾಲಕರಾದ ವಿನಾಯಕ ಕುರುಬರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿ.ಕೆ.ಬಾಳಿಕಾಯಿ ಅದ್ಯಕ್ಷತೆ ವಹಿಸಿದ್ದರು. ಎಸ್ಎಫ್ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ. ವೇದಿಕೆ ಮೇಲಿದ್ದರು.

ಸುಭಾಸ ಎಂ

ಅತಿಥಿ ಅಂಕಣ



ಪ್ರೊ.ವಿ.ಎನ್. ಲಕ್ಷ್ಮಿನಾರಾಯಣ್

ಒಂದೇ ಭೂಮಿ–ಒಂದೇ ದಾರಿ

ಇದು ವ್ಯಾಪಾರದ ಯುಗ. ಮನೆಯ ಗೇಟಿಗೆ ಯಾರು ಯಾರೋ ತಗಲುಹಾಕಿದ ಬಿಟ್ಟಿ ತಗಡಿನಿಂದ ಹಿಡಿದು ಯುವಕ–ಯುವತಿಯರ ಕೈಯಲ್ಲಿನ ಸ್ಮಾರ್ಟ್‌ಫೋನ್‌ಗಳ ವರೆಗೆ, ಅಂತರ್ಜಾಲದ ಪುಟಗಳಿಂದ ಹಿಡಿದು ಬಸ್ಸು, ರೈಲುಗಳ ಕಿಟಕಿಗಳ ಮೇಲೆ, ರಸ್ತೆಗಳ ಇಕ್ಕೆಲಗಳಲ್ಲಿ, ಎಲ್ಲಿ ನೋಡಿದರೂ ವ್ಯಾಪಾರೀ ಸಂದೇಶಗಳೇ ಕಣ್ಣಿಗೆ, ಕಿವಿಗೆ ರಾಚುವ ಕಾಲ.

ಆವೇಶಭರಿತ ಭಾಷಣಕಾರರಿರಲಿ, ಜಗದ್ಗುರುಗಳಿರಲಿ, ಪ್ರಗತಿಪರ ಬುದ್ಧಿಜೀವಿಗಳಿರಲಿ ಬುದ್ಧ, ಬಸವ, ಅಲ್ಲಮ, ಗಾಂಧಿ, ಅಂಬೇಡ್ಕರ್ ಹೆಸರುಗಳನ್ನು ಸಾಲಾಗಿ ಪಠಿಸಿ, ಯಾರೂ ಸಂಘರ್ಷಕ್ಕಿಳಿಯಬಾರದೆಂದೂ, ಎಲ್ಲರೂ ಶಾಂತಿ, ಸೌಹಾರ್ದತೆಗಳನ್ನು ಮೈಗೂಡಿಸಿಕೊಂಡು ಎಲ್ಲರೂ ವಿಶ್ವಮಾನವರಾಗಬೇಕೆಂದು ಜನಸಾಮಾನ್ಯರಿಗೆ ಕರೆಕೊಡುವ ಕಾಲ.

ಎಲ್ಲ ಇಸಮ್ಮುಗಳ ಕಾಲವೂ ಮುಗಿದುಹೋಯಿತೆಂದು, ಸಂಘರ್ಷ, ಹೋರಾಟ, ಚಳುವಳಿಗಳನ್ನು ಬದಿಗಿರಿಸಿ ಯಾವುದೇ ಸಮಸ್ಯೆ ಇದ್ದರೂ ಶಾಂತಿ–ಸೌಹಾರ್ದದಿಂದ, ಮಾತುಕತೆ–ಸಂಧಾನಗಳ ಮೂಲಕ ಬಗೆಹರಿಸಿಕೊಳ್ಳಬೇಕೆಂದೂ, ಮಾತುಕತೆಯಿಂದ ಬಗೆಹರಿಯಲಾಗದ ಯಾವ ಸಮಸ್ಯೆಯೂ ಈ ವಿಶ್ವದಲ್ಲಿ ಇಲ್ಲವೆಂದು ರಾಜಕೀಯ ನೇತಾರರು ಜನರಿಗೆ ಕರೆ ಕೊಡುವ ಕಾಲ.

ಸರ್ಕಾರಗಳಿಗೆ ಅತಿಹೆಚ್ಚಿನ ದರಗಳ, ವಿವಿಧ ಬಗೆಯ ತೆರಿಗೆಗಳನ್ನು ಪ್ರಾಮಾಣಿಕವಾಗಿ ಸಲ್ಲಿಸುತ್ತಾ, ಬಡತನ ನಿರುದ್ಯೋಗ, ಹಸಿವು, ನೀರು, ಆರೋಗ್ಯ, ವಸತಿ, ಶಿಕ್ಷಣ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದತ್ತ ನೋಡದೆ ಜನರೇ ತಮ್ಮ ಸ್ವಂತ ಖರ್ಚಿನಲ್ಲಿ ಬಗೆಹರಿಸಿಕೊಳ್ಳಬೇಕೆಂದು, ಚುನಾಯಿತ ಸರ್ಕಾರಗಳು ಈ ಬಗ್ಗೆ ತಲೆಕೆಡಿಸಿಕೊಳ್ಳದೆ ಸದಾ ಅಭಿವೃದ್ಧಿಯ ಕಡೆಗೆ ಗಮನ ಹರಿಸಲು ಜನರು ಅವಕಾಶ ಮಾಡಿಕೊಡಬೇಕೆಂದು ಪ್ರತಿಷ್ಠಿತ ಜಾಗತಿಕ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದ ಪ್ರತಿಭಾನ್ವಿತ ಆರ್ಥಿಕ ಪರಿಣತರು ಪ್ರತಿಪಾದಿಸುವ ಕಾಲ.

ಹೊಟ್ಟೆ ತುಂಬಿದವರನ್ನು ಕಿತ್ತು ತಿನ್ನುತ್ತಿರುವ ಜೀವನದ ಏಕತಾನತೆ ಮತ್ತು ಮೌಲ್ಯರಾಹಿತ್ಯಗಳ ಹಿಂಸೆಯಿಂದ ಪಾರಾಗಲು ಹಾಸ್ಯಮಯವಾಗಿ ಮಾತನಾಡುವ ಮಾತುಗಾರರು, ನಾಟಕ, ಸಿನಿಮಾಗಳ ನಿರ್ದೇಶಕರು ಮತ್ತು ನಟನಟಿಯರಿಗಾಗಿ ಮುಗಿಬೀಳುವ ಕಾಲ. ಊಟ, ನಿದ್ದೆ, ಮೈಥುನಗಳನ್ನು ವಿನಾಯಿಸಿ ಉಳಿದೆಲ್ಲವನ್ನೂ ಸ್ವತಹ ತಾವೇ ಆಡಿ–ಮಾಡುವ ಬದಲು ಟೀವಿ, ಸಿನಿಮಾಗಳಲ್ಲಿ ಯಾರ್‍ಯಾರೋ ಆಡಿ–ಮಾಡುವುದನ್ನು ನೋಡಿ ಆನಂದಿಸಬೇಕೆಂದು ಬಯಸುವ ಭ್ರಮಾತ್ಮಕ ಸುಖ–ನೆಮ್ಮದಿಗಳ ಕಾಲ.

ಒಟ್ಟಿನಲ್ಲಿ ಹೇಗಾದರೂ ಮಾಡಿ, ಹಣ ಸಂಪಾದಿಸಿ, ತಿಂದು, ಕುಡಿದು, ಕೈಲಾದಮಟ್ಟಿಗೆ ಮಜವಾಗಿ ಸುಖವಾಗಿ ಇರಬೇಕೆಂದು ಎಲ್ಲರೂ ಬಯಸುವ ಕಾಲ. ಅಂದರೆ, ಖಂಡಿತವಾಗಿಯೂ ಇದು ಚಿಂತಿಸುವ ಕಾಲವಲ್ಲ. ಸುತ್ತ– ಮುತ್ತ ಏನಾಗುತ್ತಿದೆಯೆಂದು ಅರ್ಥಮಾಡಿಕೊಳ್ಳುವ ಕಾಲವಲ್ಲ. ಒಂದುವೇಳೆ ಹಾಗೆ ಮಾಡಲು ಯತ್ನಿಸಿದರೆ ಏನಾಗುತ್ತದೆ? ಪರಸ್ಪರ ವಿರುದ್ಧವಾದ ಸಂಗತಿಗಳು ಕಾಣತೊಡಗುತ್ತವೆ.

ಮನೆಜನರೊಂದಿಗೆ, ಬಂಧು–ಮಿತ್ರರೊಂದಿಗೆ, ಸಹಪ್ರಯಾಣಿರೊಂದಿಗೆ, ಸಹಜೀವಿಗಳೊಂದಿಗೆ ಆತ್ಮೀಯವಾಗಿ ಕಲೆತು ಕಷ್ಟ–ಸುಖಗಳನ್ನು ಹಂಚಿಕೊಳ್ಳುವ ಬದಲು, ವಿಚಾರ ವಿನಿಮಯ ಮಾಡಿಕೊಳ್ಳುವ ಬದಲು, ಸಾಮಾಜಿಕ ಜಾಲತಾಣಗಳಲ್ಲಿ ಕಣ್ಣಿಗೆ ಕಾಣದ ತೋರಿಕೆಯ ವ್ಯಕ್ತಿಗಳೊಂದಿಗೆ ಹುಸಿ ಸಂಬಂಧವಿರಿಸಿಕೊಂಡು ಸಾಮಾಜಿಕರಾಗಿದ್ದೇವೆಂದು ಜನರು ತಮ್ಮನ್ನು ತಾವೇ ನಂಬಿಸಿಕೊಳ್ಳುವ ಕಾಲ.

ಕಸದ ರಾಶಿಯ ವಿಲೇವಾರಿ, ಕಕ್ಕಸ್ಸುಗಳ ನಿರ್ಮಾಣ, ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವುದು, ಅತ್ಯಾಚಾರಿಗಳಿಗೆ ಕಠಿಣಶಿಕ್ಷೆ, ವೇಶ್ಯಾವೃತ್ತಿಯನ್ನು ಕಾನೂನುಬದ್ಧಗೊಳಿಸುವುದು, ಬಾಲಕಾರ್ಮಿಕರ ಸಮಸ್ಯೆ, ಸರಗಳ್ಳರನ್ನು ಹಿಡಿಯುವುದು, ಏಟಿಎಮ್‌ಗಳಲ್ಲಿ ಮಹಿಳೆಯರು ಮತ್ತು ವೃದ್ಧರಿಗೆ ರಕ್ಷಣೆಯೊದಗಿಸುವುದು, ಕಪ್ಪುಹಣದ ನಿಯಂತ್ರಣ ಮುಂತಾದ ಗಂಭೀರ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು ಟಿವಿ ವಾಹಿನಿಗಳಲ್ಲಿ ಅತ್ಯಂತ ಕಾಳಜಿಯಿಂದ ಸಂವಾದ–ವಾಗ್ವಾದಗಳನ್ನು ನಡೆಸುವ ಕಾಲ.

ಜಾತೀಯತೆ–ಕೋಮುವಾದದ ವಿರುದ್ಧ, ಸಾಧು ಸಜ್ಜನರಲ್ಲಿ, ರಾಜಕಾರಣಿ–ಗುರು–ಹಿರಿಯರಲ್ಲಿ ಹೆಚ್ಚುತ್ತಿರುವ ಕಾಮುಕತೆಯ ವಿರುದ್ಧ, ಜನರಲ್ಲಿ ನೈತಿಕಮೌಲ್ಯಗಳು ಕುಸಿಯುತ್ತಿರುವುದರ ವಿರುದ್ಧ, ಮೂಢನಂಬಿಕೆ–ಕಂದಾಚಾರಗಳ ವಿರುದ್ಧ, ಪ್ರಜ್ಞಾವಂತಜನರು, ಸಮಾಜಸೇವಕರು, ಪ್ರಗತಿಪರ ಸಂಸ್ಥೆಗಳು, ಮೇಣದ ಬತ್ತಿಹಚ್ಚಿ, ಮೌನ ಮೆರವಣಿಗೆ ತೆಗೆದು, ಒಟ್ಟಿನಲ್ಲಿ ಶಾಂತರೀತಿಯಿಂದ, ಪ್ರಜಾತಾಂತ್ರಿಕ ವಿಧಾನಗಳಲ್ಲಿ ಉಗ್ರವಾಗಿ ಪ್ರತಿಭಟಿಸಬೇಕೆಂದು ಲೇಖಕರು, ಚಿಂತಕರು, ಬುದ್ಧಿಜೀವಿಗಳು ಮತ್ತು ಎನ್‌ಜಿವೋಗಳು ಕರೆಕೊಡುವ ಕಾಲ.

ಎಲ್ಲಿ ನೋಡಿದರೂ ಆತಂಕವಾದಿಗಳು ಎಲ್ಲಿ ಯಾವಾಗ ನುಸುಳಿ ಬಾಂಬ್ ಸಿಡಿಸುತ್ತಾರೋ ಎಂದು ತಿಳಿಯಲು ಎಲ್ಲೆಲ್ಲೂ ಕ್ಯಾಮರಾಗಳನ್ನಿಟ್ಟು ಲೋಹ ಶೋಧಕಗಳಿಂದ ಎಲ್ಲರನ್ನೂ ತಪಾಸಣೆಗೆ ಒಳಪಡಿಸುವ ಕಾಲ.

ಸ್ಮಾರ್ಟ್‌ಕಾರ್ಡು, ಸ್ಮಾರ್ಟ್ ಫೋನು, ಆಧಾರ್ ಕಾರ್ಡ್‌ಗಳ ಐಡಿಗಳ ಆಧಾರದಿಂದ ಒಬ್ಬರನ್ನೊಬ್ಬರು ಗುರುತಿಸಬೇಕಾದ ಕಾಲ.

ಒಟ್ಟಿನಲ್ಲಿ ಹೇಗಾದರೂ ಮಾಡಿ, ಹಣ ಸಂಪಾದಿಸಿ, ತಿಂದು, ಕುಡಿದು, ಕೈಲಾದಮಟ್ಟಿಗೆ ಮಜವಾಗಿ ಸುಖವಾಗಿ ಇರಬೇಕೆಂದು ಎಲ್ಲರೂ ಬಯಸುವ ಕಾಲ.

ಅಂದರೆ, ಖಂಡಿತವಾಗಿಯೂ ಇದು ಚಿಂತಿಸುವ ಕಾಲವಲ್ಲ. ಸುತ್ತ–ಮುತ್ತ ಏನಾಗುತ್ತಿದೆಯೆಂದು ಅರ್ಥಮಾಡಿಕೊಳ್ಳುವ ಕಾಲವಲ್ಲ. ಒಂದುವೇಳೆ ಹಾಗೆ ಮಾಡಲು ಯತ್ನಿಸಿದರೆ ಏನಾಗುತ್ತದೆ?

ಪರಸ್ಪರ ವಿರುದ್ಧವಾದ ಸಂಗತಿಗಳು ಕಾಣತೊಡಗುತ್ತವೆ.

ಎಲ್ಲೆಲ್ಲೂ ರಾಜಮಾರ್ಗಗಳು ನಿರ್ಮಾಣವಾಗುತ್ತಿವೆ. ಆದರೆ ಜನರು ಓಡಾಡಲು ಕಾಲುದಾರಿಗಳೇ ಕಾಣುತ್ತಿಲ್ಲ. ಮೈಲಿಗಟ್ಟಲೆ ಬಣ್ಣ–ದೀಪಗಳಿಂದ ಝುಗಝುಗಿಸುವ ದ್ವಿಪಥ, ಚತುಷ್ಪಥ, ಷಟ್ಪಥ, ಅಷ್ಟ ಪಥಗಳು ನಿರ್ಮಾಣವಾಗುತ್ತಿವೆ. ಆದರೆ ಕೃಷಿಭೂಮಿ ದಿನೇ ದಿನೇ ಕಿರಿದಾಗುತ್ತಿದೆ. ನಗರಗಳು ವರ್ತುಲ ರಸ್ತೆ, ಹೊರವರ್ತುಲ ರಸ್ತೆಗಳ ನಿರ್ಮಾಣಗಳ ಮೂಲಕ ಉಪನಗರಗಳು ಮತ್ತು ಸ್ಮಾರ್ಟ್ ನಗರಗಳಾಗಿ ವಿಸ್ತಾರ ಗೊಳ್ಳುತ್ತಿವೆ. ಆದರೆ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರ ಸಂಖ್ಯೆಯೂ ಹೆಚ್ಚುತ್ತಿದೆ. ಹೊಲಗದ್ದೆಗಳಲ್ಲಿ ಕೆಲಸ ಮಾಡಲು ಕೃಷಿ ಕಾರ್ಮಿಕರೇ ಸಿಗುತ್ತಿಲ್ಲ. ಆದರೆ ಹೋಟೆಲ್, ಮಿಲ್ಲು–ಕಾರ್ಖಾನೆಗಳಲ್ಲಿ ಹೆಂಗಸರು–ಮಕ್ಕಳು ಮೂತ್ರವಿಸರ್ಜನೆಗೂ ಬಿಡುವು ಸಿಗದಷ್ಟು ನಿರಂತರವಾಗಿ ದುಡಿಯುತ್ತಿದ್ದಾರೆ. ದೂರ ದೂರದ ರಾಜ್ಯಗಳಿಂದ ಬಡವರು ನಗರಗಳಲ್ಲಿನ ಕೂಲಿ ಕೆಲಸಗಳಿಗಾಗಿ ರೈಲು–ಬಸ್ಸುಗಳಲ್ಲಿ ಸಂಚರಿಸುತ್ತಿದ್ದಾರೆ. ಆದರೆ ಸ್ಥಳೀಯ ಬಡವರು ನಿರುದ್ಯೋಗಿಗಳಾಗಿ ಕಳ್ಳತನ, ವೇಶ್ಯಾವೃತ್ತಿ, ಕುಡಿತ ಮತ್ತು ಮೋಸದಾಟಗಳ ದಾಸರಾಗುತ್ತಿದ್ದಾರೆ.

ಉದ್ಯೋಗ ಭದ್ರತೆ, ಆಹಾರ ಭದ್ರತೆ ಕಾನೂನುಗಳು ಜಾರಿಯಾಗುತ್ತಿವೆ. ಆದರೆ ನಿವೃತ್ತಿ ವೇತನ, ಕಾರ್ಮಿಕರ ಕಲ್ಯಾಣ ಕಾಯಿದೆಗಳು ರದ್ದಾಗುತ್ತಿವೆ.

ದೇಶಾಭಿಮಾನ, ದೇಶಭಕ್ತಿಗಳ ಬಗೆಗಿನ ರಾಜಕಾರಣಿಗಳ ಆವೇಶ, ಆಗ್ರಹ ದಿನೇ ದಿನೇ ಹೆಚ್ಚುತ್ತಿದೆ. ಆದರೆ ವಿದೇಶೀ ಬಂಡವಾಳ, ವಿದೇಶೀ ವಾಣಿಜ್ಯ ಸಂಸ್ಥೆ–ಉದ್ಯಮಿಗಳ ಪ್ರವೇಶಕ್ಕೆ ದೇಶ ನಿತ್ಯ ಮುಕ್ತವಾಗಿದೆ.

ಎಲ್ಲೆಲ್ಲೂ ಸರಕುಗಳ ಉತ್ಪಾದನೆಗೆ ರೊಬೋಟ್‌ಗಳನ್ನು ಬಳಸುವಂಥ ಅತ್ಯಾಧುನಿಕ ತಂತ್ರಜ್ಞಾನ ವೃದ್ಧಿಯಾಗುತ್ತಿದೆ. ಆದರೆ ಸೇವೆಗಳ ವ್ಯಾಪಾರ ಸರಕುಗಳ ವ್ಯಾಪಾರವನ್ನು ಹಿಂದಕ್ಕೆ ಹಾಕಿ ಅತ್ಯಧಿಕ ಲಾಭ ತರುವ ಉದ್ಯಮವಾಗಿದೆ.

ಸರ್ಕಾರಗಳು ಜನರ ಹೆಸರಿನಲ್ಲಿ ಜಾಗತಿಕ ಬ್ಯಾಂಕುಗಳಿಂದ ಪಡೆಯುತ್ತಿರುವ ಸಾಲದ ಹೊರೆ ಹೆಚ್ಚುತ್ತಲೇ ಇದೆ. ಆದರೆ ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ.

ಬ್ಯಾಂಕುಗಳ ಶಾಖೆಗಳು ಹೆಚ್ಚುತ್ತಲೇ ಇವೆ. ಎಲ್ಲರ ಕೈಯಲ್ಲೂ ಹಣ ಹರಿದಾಡುತ್ತಿದೆ. ಆದರೆ ದೇಶದಲ್ಲಿನ ಬಡವರ ಸಂಖ್ಯೆ ಎಷ್ಟು, ವರ್ಷದಿಂದ ವರ್ಷಕ್ಕೆ ಎಷ್ಟು ಹೆಚ್ಚಿದೆ ಅಥವಾ ಕಡಿಮೆಯಾಗಿದೆ ಎಂದು ತಿಳಿದುಕೊಳ್ಳಲು ಪರಿಣತರಿಗೆ ಸಾಧ್ಯವಾಗುತ್ತಿಲ್ಲ. ಈ ಪರಿಣತರಿಗೆ ಬಡತನ ರೇಖೆಯನ್ನು ಹೇಗೆ ಗುರುತಿಸಬೇಕು ಎಂಬುದೇ ತೋಚುತ್ತಿಲ್ಲ.

ಪೆಟ್ರೋಲ್ ಮುಂತಾದ ತೈಲ ಆಧಾರಿತ ಇಂಧನಗಳನ್ನು ಉರಿಸುವುದರಿಂದ, ಗಗನಚುಂಬಿ ಬಹುಮಹಡಿ ಕಟ್ಟಡಗಳ ನಿರ್ಮಾಣದಿಂದ ಭೂತಾಪಮಾನ ನಿರಂತರವಾಗಿ ಹೆಚ್ಚುತ್ತಿದೆ. ಆದರೆ ಸಿಮೆಂಟಿನ ಉತ್ಪಾದನೆ, ಬಳಕೆ, ಮೋಟಾರು ವಾಹನಗಳ ಉತ್ಪಾದನೆ, ಮಾರಾಟ ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ.

ಮಾರುಕಟ್ಟೆಯಲ್ಲಿ ಆಹಾರಧಾನ್ಯ, ಕೃಷಿ ಉತ್ಪನ್ನಗಳ ಬೆಲೆಗಳು ಏರುತ್ತಲೇ ಇವೆ. ಆದರೆ ರೈತರು ಸಾಲ ತೀರಿಸಲಾಗದೆ ಹಿಂದೆಂದಿಗಿಂತಲೂ ಅತ್ಯಧಿಕ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಎಲ್ಲಿ ನೋಡಿದರೂ ಜನರ ಚಲನವಲನಗಳ ಚಿತ್ರಗಳನ್ನು ತೆಗೆದು ಸಂಗ್ರಹಿಸಿಡುವ ಹದ್ದಿನ ಕಣ್ಣಿನ ಕ್ಯಾಮರಾಗಳು. ಆದರೆ ಸರಗಳ್ಳತನ, ಯುವತಿಯರ ನಾಪತ್ತೆ ಮತ್ತು ಲೈಂಗಿಕ ದೌರ್ಜನ್ಯಗಳ ಹೆಚ್ಚಳ ಮಾಮೂಲಾಗಿದೆ.

ಇದನ್ನು ಆಧುನಿಕೋತ್ತರ ಕಾಲ ಎಂದು ಚರಿತ್ರಕಾರರು, ರಾಜಕೀಯ ಮುತ್ಸದ್ದಿಗಳು, ಸಾಮಾಜಿಕ ತತ್ವಶಾಸ್ತ್ರಜ್ಞರು ವಿವರಿಸುತ್ತಾರೆ. ಇವನ್ನು ಆಧರಿಸಿದ ಸಾಹಿತ್ಯಕ ಕೃತಿಗಳ ಮೌಲ್ಯ ನಿಷ್ಕರ್ಷೆಗಳನ್ನು ಸಾಹಿತ್ಯೋತ್ಸವ, ಚಿತ್ರೋತ್ಸವ ಮತ್ತು ವಿಚಾರ ಸಂಕಿರಣಗಳಲ್ಲಿ ವಿಷಯ ತಜ್ಞರು ತಮ್ಮ ಪ್ರೌಢ ಪ್ರಬಂಧಗಳಲ್ಲಿ ಮಂಡಿಸುತ್ತಿದ್ದಾರೆ. ಪತ್ರಿಕೆಗಳ ಅಂಕಣಗಳಲ್ಲಿ ಪ್ರಕಟಿಸುತ್ತಿದ್ದಾರೆ.

ಇಷ್ಟೆಲ್ಲಾ ಆಗುತ್ತಿದ್ದರೂ ಭಾರತದಲ್ಲಿ ಪ್ರಜಾಪ್ರಭುತ್ವ ಎಂಬುದು ಇದೆಯೆ? ಇದೆ. ಕೆಲವರಿಗೆ ಮಾತ್ರ.

ಸ್ವಾತಂತ್ರ್ಯ, ಸಮಾನತೆಗಳು ಇವೆಯೆ? ಇವೆ. ಕೆಲವರಿಗೆ ಮಾತ್ರ.

ಸುಖ–ನೆಮ್ಮದಿಗಳ ಬದುಕು ಇದೆಯೆ? ಇದೆ ಕೆಲವರಿಗೆ ಮಾತ್ರ.

ಅಭಿವೃದ್ಧಿ ಹೊಂದಲು ಮುಕ್ತ ಅವಕಾಶ ಇದೆ–ಯೆ? ಇದೆ. ಕೆಲವರಿಗೆ ಮಾತ್ರ.

ಈ ಕೆಲವರು ಯಾರು?

ಆಳುವ ವರ್ಗದ ಜನ. ಅಂದರೆ, ಶ್ರೀಮಂತ ರಾಜಕಾರಣಿಗಳು, ವ್ಯಾಪಾರೋದ್ಯಮಿಗಳು ಮತ್ತು ಧರ್ಮಗುರುಗಳು. ಇವರೆಲ್ಲರೂ ಬಂಡವಾಳವಾದವೆಂಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಸಹೋದರರು.

ಆದರೆ ಸಹೋದರತೆ ಎಂಬುದು ಇರುವುದನ್ನು ಹಂಚಿಕೊಂಡು ತಿನ್ನಬೇಕೆನ್ನುವ ಉನ್ನತ ಮಾನವೀಯ ಮೌಲ್ಯವಲ್ಲವೆ?

ಹೌದು. ಅದು ಶ್ರೀಮಂತ ರಾಜಕಾರಣಿಗಳು, ಧರ್ಮಗುರುಗಳು ಮತ್ತು ವ್ಯಾಪಾರೋದ್ಯಮಿಗಳ ನಡುವೆ ಮಾತ್ರ ಇದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಕೆಲವೇ ಕೆಲವರಾದ ಈ ಸಹೋದರರು ಇರುವುದೆಲ್ಲವನ್ನೂ ತಮ್ಮ ತಮ್ಮಲ್ಲೇ ಹಂಚಿಕೊಂಡುಬಿಟ್ಟಿದ್ದಾರೆ.

ಈ ಕೆಲವರಲ್ಲದವರು ಯಾರು?

ಬಡವರು, ದಲಿತರು, ಮಹಿಳೆಯರು, ಕಾರ್ಮಿಕರು ಮತ್ತು ರೈತರು.

ಈ ಸ್ಥಿತಿಯಿಂದ ಬಿಡುಗಡೆ ಪಡೆದು ಎಲ್ಲರಿಗೂ ನ್ಯಾಯ ಒದಗಿಸುವುದು ಸಾಧ್ಯವಿಲ್ಲವೆ?

ಸಾಧ್ಯ. ಅಲ್ಪಸಂಖಾತರಾದ 'ಕೆಲವರ' ಕೈಲಿರುವ ರಾಜ್ಯಾಧಿಕಾರವನ್ನು ಬಹುಸಂಖ್ಯಾತರಾದ ದುಡಿಯುವವರ ಕೈಗೆ ತೆಗೆದುಕೊಂಡು ಆಮೂಲಾಗ್ರವಾದ ರಾಜಕೀಯ ಬದಲಾವಣೆಯ ಮೂಲಕ ಎಲ್ಲರಿಗೂ ಸಮಾನವಾಗಿ ನ್ಯಾಯಯುತವಾದ ಸಮ ಸಮಾಜವನ್ನು ಕಟ್ಟುವುದು.

ಆದರೆ, ಹೇಗೆ?

ಇರುವುದು ಒಂದೇ ದಾರಿ. ಅದೇ ಮಾರ್ಕ್ಸ್‌ವಾದದ ಅಧ್ಯಯನ, ಸಂಘಟನೆ ಮತ್ತು ಹೋರಾಟ. ಅಧ್ಯಯನ ಸಂಘಟನೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಸಂಘಟನೆ ಹೋರಾಟವನ್ನು ಮುನ್ನಡೆಸುತ್ತದೆ.

ಸೆಪ್ಟೆಂಬರ್ 2 ರಂದು ನಡೆದ ಕಾರ್ಮಿಕರ ಅಖಿಲ ಭಾರತ ಮಹಾ ಮುಷ್ಕರ ತೋರಿಸಿಕೊಟ್ಟಿದ್ದು ಇದನ್ನೇ. ●

ನಮ್ಮ ಚುರು-ಟ್ವೀಟ್

@CMOKerala

ಮಹಾಬಲಿ ಮತ್ತು ಓಣಂ ನ ಪುರಾಣ ಕತೆಗಳು ದ್ವೇಷಾಸೂಯೆಗಳು ಇಲ್ಲದ ಎಲ್ಲಾ ಸಮ ಸಮಾಜ ಕಟ್ಟಬಯಸುವ ಎಲ್ಲಾ ಪ್ರಗತಿಪರರಿಗೆ ಸ್ಫೂರ್ತಿಯ ಚಿಲುಮೆಗಳಾಗಿವೆ

– ಪಿಣರಾಯಿ ವಿಜಯನ್
ಕೇರಳ ಮುಖ್ಯಮಂತ್ರಿ

ಕಾವೇರಿ ವಿವಾದ ಕರ್ನಾಟಕದ ಬವಣೆಗೆ ಯಾರು ಹೊಣೆ?

ಗಿರೀಶ್ ನಿಕಮ್

ಕಾವೇರಿ ವಿವಾದದ ಪ್ರಮುಖ ವಿವಾದಾಸ್ಪದ ವಿಷಯಗಳ ಬಗ್ಗೆ ನಿಖರವಾದ ಮಾಹಿತಿ, ಅದರ ಇತಿಹಾಸ, ಈಗ ವಿವಾದ ಪರಿಹಾರದ ಹಲವು ಪ್ರಯತ್ನಗಳ ಪ್ರಸ್ತುತ ಸ್ಥಿತಿ, ಇವೆಲ್ಲದರ ವಸ್ತುನಿಷ್ಟ ವಿಶ್ಲೇಷಣೆ – ಜನತೆಯ ಬಳಿ ಇಲ್ಲದಿರುವುದು, ವಿವಾದ ವ್ಯಾಪಕ ದೊಂಬಿ–ಗಲಭೆಗಳಿಗೆ ಎಡೆ ಕೊಟ್ಟಿರುವುದಕ್ಕೆ ಒಂದು ಕಾರಣ. ಮಾಧ್ಯಮದ ದೊಡ್ಡ ವಿಭಾಗ ಇದನ್ನು ಒದಗಿಸುವ ಬದಲು ಯಾವುದೋ ಒಂದು ಆಯಾಮದ ಬಗ್ಗೆ ಒತ್ತು ಕೊಟ್ಟು, ಪ್ರಚೋದನಕಾರಿ ಅರೆಸತ್ಯ ಅಥವಾ ಸುಳ್ಳುಗಳನ್ನು ಹರಡುತ್ತಿದೆ. ಈ ಕೊರತೆಯನ್ನು ತಕ್ಕ ಮಟ್ಟಿಗೆ ನೀಗಿಸುವ Thewire.in ವೆಬ್ ಪತ್ರಿಕೆಯಲ್ಲಿ ಸೆ.10 ರಂದು ಪ್ರಕಟವಾದ ಗಿರಿಶ್ ನಿಕಂ (ರಾಜ್ಯಸಭಾ ಟಿವಿಯ ಹಿರಿಯ ಆಂಕರ್) ಅವರ ಲೇಖನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಇಲ್ಲಿ ವ್ಯಕ್ತವಾದ ಅಭಿಪ್ರಾಯ ಎಲ್ಲವೂ ಸರಿಯೆಂದಲ್ಲ. ಈ ಲೇಖನದ ಜತೆಗೆ ಕೊಟ್ಟಿರುವ ಬಾಕ್ಸಿನಲ್ಲಿ ಈ ಲೇಖನದಲ್ಲಿರುವ ಕೆಲವು ನ್ಯೂನತೆಗಳನ್ನು ನಿರೂಪಿಸಲಾಗಿದೆ)

(ಅನುವಾದ : ಎಂ.ಜಿ. ವೆಂಕಟೇಶ)

ಇದು ವಿವಾದದ ಅಂತ್ಯವೋ ಅಥವಾ ಹೊಚ್ಚ ಹೊಸತಾದ ಆರಂಭವೋ? 2007 ರಲ್ಲಿ ರಚನೆಯಾದ 17 ವರ್ಷದ ನಂತರ ಕಾವೇರಿ ಟ್ರಿಬ್ಯೂನಲ್ ನೀಡಿದ ಐತೀರ್ಪು(ಅವಾರ್ಡ್) ನೀಡಿದಾಗಿಂದ ಈ ಪ್ರಶ್ನೆ ಎಲ್ಲರ ಮನದಲ್ಲಿ ಕಾಡುತ್ತಿದೆ. ಐತೀರ್ಪು ನೀಡಿ 9 ವರ್ಷಗಳಾದರೂ ವಿವಾದಕ್ಕೆ ಕೊನೆಯಾಗದೇ ಆಗಿಂದಾಗೆ ತನ್ನ ಹೆಡೆಯೆತ್ತುತ್ತಿದ್ದು, ವಿವಾದ ಇನ್ನೂ ಬಗೆಹರಿಯಲಿಲ್ಲ ಎಂಬುದು ಸ್ಪಷ್ಟವಾಗಿದೆ.

ಕಾವೇರಿ ಕೆಲವೊಮ್ಮೆ ಸಮೃಧಿಯಾಗಿ ಹರಿದರೆ ಕೆಲವೊಮ್ಮೆ ಎರಡು ರಾಜ್ಯಗಳೂ ಹನಿ ನೀರಿಗಾಗಿ ಕಾದಾಡುವಂತೆ ಮಾಡುತ್ತದೆ. ಒಳ್ಳೆಯ ಮುಂಗಾರು ಬಂದರೆ ಯಾವ ತೊಂದರೆಯೂ ಇರುವುದಿಲ್ಲ, ಆದರೆ ಮಳೆಯ ಕೊರತೆಯಾದರೆ ಎರಡೂ ರಾಜ್ಯದ ಜನತೆ ಮತ್ತು ರಾಜಕಾರಣಿಗಳು ಹೋರಾಟಕ್ಕೆ ನಿಲ್ಲುತ್ತಾರೆ. 2007ರ ಅಂತಿಮ ಐತೀರ್ಪಿನ ನಂತರ ಎಲ್ಲವೂ ಸರಿಹೋಗಬಹುದೆಂಬ ನಿರೀಕ್ಷೆ ಸುಳ್ಳಾಗಿದೆ. ದುರದೃಷ್ಟವಶಾತ್ 2007 ರಿಂದ ಐತೀರ್ಪಿನ ಮತ್ತು ಪರಿಣಾಮದ ಬಗ್ಗೆ ಸಾಕಷ್ಟು ಬರೆಯಲಾಗಿದ್ದರೂ. ಹಲವಾರು ವಿಷಯಗಳ ಬಗ್ಗೆ ಈಗಲೂ ಮೂಲಭೂತವಾಗಿ ತಪು ಗ್ರಹಿಕೆಗಳಿದ್ದು ಬಿಕ್ಕಟಿಗೆ ಕಾರಣವಾಗಿದೆ. ಅದರಲ್ಲಿ ಪ್ರಮುಖವಾದ ತಪ್ಪುಗ್ರಹಿಕೆಯೆಂದರೆ 1991 ರಲ್ಲಿ ನೀಡಿದ ತಾತ್ಕಾಲಿಕ ತೀರ್ಪಿನ ಪ್ರಕಾರ 205 ಟಿಎಂಸಿ ಮಾತ್ರ ಕೊಟ್ಟಿದ್ದರೂ, 2007ರ ಐತೀರ್ಪಿನಲ್ಲಿ ತಮಿಳುನಾಡಿಗೆ 419 ಟಿಎಂಸಿ ಕೊಡಲಾಗಿದೆಯೆಂಬುದು. ಕರ್ನಾಟಕದ ಕೆಲವು ಮಾಧ್ಯಮಗಳಲ್ಲಿ ಮತ್ತು ಸಂಕುಚಿತ–ಮನಸಿನ ರಾಜಕಾರಣಿಗಳು ಹೀಗೆಂದು ಪ್ರಚಾರ ಮಾಡುತ್ತಿದ್ದಾರೆ.

ಇದು ನಿಜವೇ ಆಗಿದ್ದರೆ ಕರ್ನಾಟಕದಲ್ಲಿರುವ ಕಾವೇರಿ ಕೊಳ್ಳದ ಎಲ್ಲರೂ ಕಾದಾಟಕ್ಕೆ ನಿಲ್ಲುವುದು ನ್ಯಾಯ ಸಮ್ಮತವಾಗಿತ್ತು. ಆದರೆ ವಾಸ್ತವಾಂಶವೇ ಬೇರೆ. ನಾನು ಟ್ರಿಬ್ಯುನಲ್‌ನ ಐತೀರ್ಪು ಮತ್ತು ಅದರ ಅಂಕಿಅಂಶಗಳನ್ನು, ರಾಜಕೀಯ ಮತ್ತು ಕಾನೂನಿನ ಗೊಂದಲ ಸಂಕೀರ್ಣತೆಗಳನ್ನು ಬಿಟ್ಟು ಸರಳವಾಗಿ ಪ್ರಸ್ತುತ ಪಡಿಸಲು ಪ್ರಯತ್ನಿಸುತ್ತೇನೆ.



ಟ್ರಿಬ್ಯೂನಲ್‌ಗೆ ನೀಡಿದ್ದ ಪ್ರಮುಖ ಕಾರ್ಯಭಾರವೆಂದರೆ – ಕಾವೇರಿ ಕೊಳ್ಳದಲ್ಲಿರುವ ನಾಲ್ಕು ರಾಜ್ಯಗಳಿಂದ ಒಟ್ಟು ಎಷ್ಟು ನೀರು ಲಭ್ಯವಾಗುತ್ತದೆ ಎಂಬುದು. ಕರ್ನಾಟಕದಲ್ಲಿ ಕಾವೇರಿ ಹುಟ್ಟುತ್ತದೆ. ತಮಿಳುನಾಡಿನ ಅತಿ ಹೆಚ್ಚಿನ ಪ್ರದೇಶದಲ್ಲಿ ಅದು ಹರಿಯುತ್ತದೆ. ಭೌಗೋಳಿಕ ಕಾರಣಗಳಿಂದಾಗಿ ತಾನು ಉಪಯೋಗಿಸಿಕೊಳ್ಳುವ ಪ್ರಮಾಣಕ್ಕಿಂತ ಹೆಚ್ಚು ನೀಡುವ ರಾಜ್ಯ ಕೇರಳ. ನದಿ ಬಂಗಾಳ ಕೊಲ್ಲಿಯನ್ನು ಸೇರುವ ರಾಜ್ಯ ಪಾಂಡಿಚೇರಿ.

ಹಲವು ವರ್ಷಗಳ ತಜ್ಞರ ಲೆಕ್ಕಾಚಾರಗಳು ಮತ್ತು ವಕೀಲರ ವಾದ–ವಿವಾದಗಳ ನಂತರ (ಮುಂಗಾರು ಮಳೆಯ ಮೇಲೆ) ಶೇ. 50% ಅವಲಂಬನೆಯನ್ನು ಇಟ್ಟುಕೊಂಡು ವಾರ್ಷಿಕ ಲಭ್ಯತೆ 740 ಟಿಎಂಸಿ ಎಂದು ನಿರ್ಧರಿಸಲಾಗಿದೆ.

ಟ್ರಿಬ್ಯೂನಲ್ ಮುಂದಿದ್ದ ಇನ್ನೊಂದು ಪ್ರಮುಖ ಪ್ರಶ್ನೆ – ನಾಲ್ಕು ರಾಜ್ಯಗಳಿಗೆ 740 ಟಿಎಂಸಿ ನೀರಿನ ಹಂಚಿಕೆ. ಹಲವು ವರ್ಷಗಳ ವಾದ–ಪ್ರತಿವಾದ, ತಜ್ಞರ ಅಭಿಪ್ರಾಯಗಳ ನಂತರ ತಮಿಳುನಾಡಿಗೆ 419 ಟಿಎಂ.ಸಿ, ಕರ್ನಾಟಕಕ್ಕೆ 270 ಟಿಎಂಸಿ, 30 ಟಿಎಂಸಿ ಕೇರಳಕ್ಕೆ ಮತ್ತು 7 ಟಿಎಂಸಿ ಪಾಂಡಿಚೇರಿಗೆ ಮತ್ತು 14 ಟಿಎಂಸಿ ನೀರನ್ನು ಪರಿಸರಕ್ಕೆ ಟ್ರಿಬ್ಯೂನಲ್ ಹಂಚಿಕೆ ಮಾಡಿತು. ಹಾಗೆ ನದಿ ಮೇಲ್ಭಾಗದ ಪ್ರದೇಶಕ್ಕೆ ಸೇರಿರುವುದರಿಂದ ಕರ್ನಾಟಕ 192 ಟಿಎಂಸಿ ನೀರನ್ನು ಪ್ರತಿ ವರ್ಷ ಹರಿಸುವಂತೆ ಖಚಿತಪಡಿಸಬೇಕೆಂದು ತಿಳಿಸಿತು. ತಮಿಳುನಾಡಿಗೆ ತಿಂಗಳುವಾರು ಕೊಡಬೇಕಾದ ನೀರಿನ ಪ್ರಮಾಣವನ್ನೂ ಟ್ರಿಬ್ಯುನಲಿನ ಐತೀರ್ಪು ನಿರ್ಧರಿಸಿತು.

ಗೊಂದಲ ಪರಿಹರಿಸಿಕೊಳ್ಳಬೇಕು

ಇಲ್ಲೇ ಎಲ್ಲ ಗೊಂದಲವಿರುವುದು ಮತ್ತು ಅದನ್ನು ಪರಿಹರಿಸಿಕೊಳ್ಳಬೇಕಿದೆ. ಅದಕ್ಕಾಗಿ ಮೊದಲು 740 ಟಿಎಂಸಿ ಎಲ್ಲಿಂದ ಮತ್ತು ಹೇಗೆ ಉತ್ಪತ್ತಿಯಾಗುವುದೆಂದು ತಿಳಿದುಕೊಳ್ಳಬೇಕಿದೆ. ಕರ್ನಾಟಕ ಪಾಲಾದ 270 ಟಿಎಂಸಿ ಮತ್ತು ತಮಿಳುನಾಡಿಗೆ ಬಿಡಬೇಕಾದ 192 ಟಿಎಂಸಿ ಅಂದರೆ ಒಟ್ಟು 462 ಟಿಎಂಸಿ. ಇಷ್ಟು ಪ್ರಮಾಣ ನೀರು ಪ್ರತಿ ವರ್ಷ ಕರ್ನಾಟಕದಲ್ಲಿ ಕಾವೇರಿ ಪ್ರದೇಶದಲ್ಲಿ ಲಭ್ಯವಾಗುತ್ತದೆ ಎಂಬುದು ಟ್ರಿಬ್ಯುನಲಿನ ಲೆಕ್ಕಾಚಾರ. ಆ 462 ಟಿಎಂಸಿಯಲ್ಲಿ ಕರ್ನಾಟಕ 192 ಟಿಎಂಸಿ ನೀರನ್ನು ತಮಿಳುನಾಡಿಗೆ ಕೊಡಬೇಕು.

ತಮಿಳುನಾಡು ತನಗೆ ಕರ್ನಾಟಕದಿಂದ ಹರಿದ 192 ಟಿ.ಎಂ.ಸಿ ಸೇರಿದಂತೆ 419 ಟಿ.ಎಂ.ಸಿ ನೀರನ್ನು ಹೇಗೆ ಉಪಯೋಗಿಸುತ್ತದೆ ಎಂಬುದು ಮುಂದಿನ ಗೊಂದಲಮಯ ಸಮಸ್ಯೆ. ಸರಳ ಉತ್ತರ 419–192=227 ಟಿಎಂಸಿ ತನ್ನ ಮಳೆ ಪ್ರದೇಶಗಳಿಂದ ತಮಿಳುನಾಡು ಸಂಗ್ರಹಿಸಿಕೊಳ್ಳಬೇಕಾದ ಪ್ರಮಾಣ. ಕರ್ನಾಟಕ ಮತ್ತು ತಮಿಳುನಾಡಿನಿಂದ ಒಟ್ಟು 689 ಟಿಎಂಸಿ (462+227) ಮತ್ತು ಕೇರಳದಿಂದ 51 ಟಿಎಂಸಿ (689+51=740). ಅದರಲ್ಲಿ ಕೇರಳ 30 ಟಿಎಂಸಿ ಉಳಿಸಿಕೊಂಡು ಬಾಕಿ 21 ಟಿಎಂಸಿ ನೀರನ್ನು ಪಾಂಡಿಚೇರಿಗೆ 7 ಟಿಎಂಸಿ ಮತ್ತು ಪರಿಸರಕ್ಕಾಗಿ 14 ಟಿಎಂಸಿ ಕೊಡುತ್ತದೆ.

ಈ ಎಲ್ಲ ಲೆಕ್ಕಾಚಾರದ ಒಟು ಅರ್ಥ ಎಂದರೆ ಕರ್ನಾಟಕ ತಾನು ನೀಡುವ 462 ಟಿಎಂಸಿ ನೀರಿನ ಪೈಕಿ 270 ಟಿಎಂಸಿ ಬಳಸಲು ಹಕ್ಕು ಪಡೆದಿದ್ದರೆ, 227 ಟಿಎಂಸಿ ನೀಡುವ ತ.ನಾಡು 419 ಟಿಎಂಸಿ ನೀರನ್ನು ಪಡೆಯುತ್ತದೆ. ಕೇರಳ ನೀಡುವ 51 ಟಿಎಂಸಿಯಲ್ಲಿ 30 ಟಿಎಂಸಿ ಮಾತ್ರ ಬಳಸುತ್ತದೆ. ಈ ಅಂಕಿ–ಅಂಶಗಳನ್ನು ನೋಡಿದರೆ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ ಎಂದೆನಿಸುತ್ತಿದೆ. ಅದಕ್ಕೆ ಕಾರಣ? ಉತ್ತರವನ್ನು ಇತಿಹಾಸದ ಪುಟಗಳಲ್ಲಿ ನೋಡಬೇಕಿದೆ ಮತ್ತು ಇತಿಹಾಸವನ್ನು ಪುನರ್‌ರಚನೆ ಮಾಡುವುದು ಇಂದು ನಮ್ಮಿಂದ ಸಾಧ್ಯವಿಲ್ಲ. ಚೋಳರ ಆಳ್ವಿಕೆಗೆ ಸೇರಿದ್ದ ಆ ಪ್ರದೇಶಗಳಲ್ಲಿ (ಈಗಿನ ತಮಿಳುನಾಡು) ಹರಿಯುತ್ತಿದ್ದ ನದಿಗೆ ಅಣೆಕಟ್ಟುಗಳನ್ನು, ಚೆಕ್ ಡ್ಯಾಂಗಳನ್ನು ಹತ್ತನೇ ಶತಮಾನ ಮತ್ತು ನಂತರದ ದಿನಗಳಲ್ಲಿ ನಿರ್ಮಿಸಿ ನೀರನ್ನು ವ್ಯವಸಾಯಕ್ಕಾಗಿ ಬಳಸಿದರು. ಆದರೆ ಮೈಸೂರಿನ ಅರಸರು 1934ರಲ್ಲಿ ಮೊಟ್ಟಮೊದಲ ಅಣೆಕಟ್ಟನ್ನು (ಕೆಆರ್‌ಎಸ್) ನಿರ್ಮಿಸಿದರು.

1894 ಮತ್ತು 1924 ರ ಒಪ್ಪಂದ ವೇಳೆಗೆ 15 ರಿಂದ 20 ಲಕ್ಷ ಎಕರೆ ನೀರಾವರಿ ಪ್ರದೇಶಕ್ಕೆ ಒಳಪಟ್ಟಿದ್ದರಿಂದ, ತಮಿಳುನಾಡಿನ ರೈತರಿಗೆ ಸಹಜವಾಗಿ ಅನುಕೂಲವಾಗಿತ್ತು. ಕರ್ನಾಟಕ 1924 ರಲ್ಲಿ 6.5 ಲಕ್ಷ ಎಕರೆಗಳಿಗೆ ಮಾತ್ರ ನೀರಾವರಿ ಮಾಡಿದ್ದು, ಈಗ ಅದರ ಪ್ರಮಾಣ 15 ಲಕ್ಷ ಎಕರೆಗಳಿಗೆ ಏರಿದೆ. ಇದರರ್ಥ 1974 ರ ವರೆಗೆ ತಮಿಳುನಾಡು ಹರಿಯುತ್ತಿದ್ದ ನೀರಿನ ಪ್ರಮಾಣದ 80% ದಷ್ಟು ಬಳಸಿಕೊಳ್ಳುತ್ತಿತ್ತು. 1974ರಲ್ಲಿ ಕರ್ನಾಟಕ 1924ರ ಒಪ್ಪಂದವನ್ನು ರದ್ದು ಪಡಿಸಿತು. ಚಾರಿತ್ರಿಕ ಕಾರಣ, ಮುಂದಾಲೋಚನೆ ಮತ್ತು ಸ್ವಾಧೀನಾನುಭವ ಹಕ್ಕಿನಿಂದ (ಪ್ರಿಸ್ಕ್ರಿಪ್ಟಿವ್ ರೈಟ್) ತಮಿಳುನಾಡು ಹೆಚ್ಚಿನ ಪಾಲನ್ನು ಅನುಭವಿಸುತ್ತಿದೆ. 1924ರಲ್ಲಿ 80% ಕ್ಕಿಂತ ಹೆಚ್ಚಿನ ಪಾಲು ಪಡೆಯುತ್ತಿದ್ದ ತಮಿಳುನಾಡಿನ ಪಾಲು 57% ಕ್ಕೆ ಇಳಿದಿದೆ. ಕರ್ನಾಟಕದ ಪಾಲು 16% ರಿಂದ 37%ಕ್ಕೆ ಏರಿದೆ.

ಹಾಗಾದರೆ ತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆಯೇ? ಎಂಬ ಪ್ರಶ್ನೆಗೆ ಉತ್ತರ ಹೌದು. ಆದರೆ 2007 ರ ಟ್ರಿಬ್ಯೂನಲ್ ತೀರ್ಪು ಇದನ್ನು ದುರುದ್ದೇಶದಿಂದ ಮಾಡಿದ ಕಾರ್ಯವಾಗಿರದೆ ಚಾರಿತ್ರಿಕ ಕಾರಣಗಳಿಂದಾಗಿದೆ.

ಕರ್ನಾಟಕದ ಪ್ರಮುಖ ಆಕ್ಷೇಪಣೆಯನ್ನು ನೋಡೋಣ. ಅದು ಪ್ರಮುಖವಾಗಿ ತಿಂಗಳುವಾರಾಗಿ (ಅದರಲ್ಲೂ ನೀರಿನ ವರ್ಷದ ಮುಂಗಾರಿನ ಮೊದಲ 4 ತಿಂಗಳುಗಳಲ್ಲಿ) ಬಿಡಬೇಕಾದ ನೀರಿನ ಪ್ರಮಾಣದ ನಿರ್ಧಾರದ ಬಗ್ಗೆ ಇದೆ. ಜೂನ್ ನಲ್ಲಿ 10 ಟಿಎಂಸಿ, ಜುಲೈನಲ್ಲಿ 34 ಟಿಎಂಸಿ, ಆಗಸ್ಟ್‌ನಲ್ಲಿ 50 ಟಿಎಂಸಿ, ಸೆಪ್ಟಂಬರ್‌ನಲ್ಲಿ 40 ಟಿಎಂಸಿ ಬಿಡಬೇಕಿರುತ್ತದೆ. ನೈರುತ್ಯ ಮುಂಗಾರನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಕರ್ನಾಟಕಕ್ಕೆ ಅದು ಜೂನ್ ತಿಂಗಳಲ್ಲಿ ಸರಿಯಾಗಿ ಬಾರದಿದ್ದಾಗ ಅಥವಾ ಕೊರತೆಯಾದಾಗ ಈ ಐತೀರ್ಪನ್ನು ಪಾಲಿಸುವುದು ದುಸ್ತರವಾಗುತ್ತದೆ.

ಹಾಗಾದರೆ ಕರ್ನಾಟಕ ಯಾವ ಪ್ರತಿರೋಧವನ್ನು ತೋರಿಸದೆ ಒಪ್ಪಿಕೊಳ್ಳಬೇಕೇ? ಇಲ್ಲ, ಕಾರಣ ತೀರ್ಪಿನ ಕೆಲಭಾಗಗಳ ಮಾರ್ಪಾಡಿಗೆ ಮತ್ತು ಹೆಚ್ಚಿನ ವಿವರಣೆಗಾಗಿ 2007 ರಲ್ಲೇ ಕರ್ನಾಟಕ ವಿಶೇಷ ಅರ್ಜಿಯನ್ನು (ಎಸ್‌ಎಲ್‌ಪಿ) ದಾಖಲಿಸಿದೆ. ಕೇರಳ, ತಮಿಳುನಾಡು ರಾಜ್ಯಗಳು ಸಹಿತ ತೀರ್ಪಿನಿಂದ ಸಂಪೂರ್ಣವಾಗಿ ತೃಪ್ತರಾಗದೇ ಅರ್ಜಿ ಸಲ್ಲಿಸಿದ್ದರೂ ಸುಪ್ರಿಂಕೋರ್ಟ್ ಇನ್ನು ತೀರ್ಮಾನಿಸದಿರುವುದರಿಂದ ದುರದೃಷ್ಟಕರ.

ಟ್ರಿಬ್ಯೂನಲ್ ತೀರ್ಪಿನ ಪ್ರಮಾಣಕ್ಕೆ ಆಧಾರ?

ಕೆಲ ರಾಜಕಾರಣಿಗಳು ಮತ್ತು ಮಾಧ್ಯಮದ ಒಂದು ವಿಭಾಗ, ನೈಜ ಸ್ಥಿತಿಗಿಂತ ಹೆಚ್ಚಾಗಿ ಭಾವನಾತ್ಮಕ ಅಂಶಗಳ ಆಧಾರದಲ್ಲಿ ಸಂಕುಚಿತ ಮನೋಭಾವದ ಸ್ಪರ್ಧೆಯಲ್ಲಿ ತೊಡಗಿರುವಾಗ, ಈ ವಿಷಯವನ್ನು ರಾಗ–ದ್ವೇಷಗಳಿಲ್ಲದೇ ಸಾಧ್ಯವಾದಷ್ಟು ಮಟ್ಟಿಗೆ ನೋಡಬೇಕಾದ ಆವಶ್ಯಕತೆ ಇದೆ. ಹಾಗಾದರೇ ಅಂತಿಮ ತೀರ್ಪಿನಿಂದ ಕರ್ನಾಟಕಕ್ಕೆ ಅನ್ಯಾಯವಾಗಿದೆಯೇ ಎಂಬ ಪ್ರಶ್ನೆ ರಾಜ್ಯದಲ್ಲಿನ ಮತ್ತು ರಾಜ್ಯದ ಹೊರಗಿನ ಎಲ್ಲ ಪ್ರಜ್ಞಾವಂತರನ್ನು ಕಾಡುತ್ತದೆ.

ಟ್ರಿಬ್ಯೂನಲ್ ಬಗ್ಗೆ ಐತೀರ್ಪಿಗೆ ಪ್ರದಾನ ಆಧಾರವಾಗಿರುವ ಅಂಕಿ ಅಂಶಗಳನ್ನು ತಣ್ಣನೆ ಗಮನಿಸಿದಾಗ ಕೆಲ ಉತ್ತರಗಳು ಸಿಗುತ್ತವೆ.

ಉದಾಹರಣೆಗೆ ಕರ್ನಾಟಕದ ಕಾನೂನು ಮತ್ತು ತಜ್ಞರ ಒಪ್ಪಿಗೆ ಪಡೆದು ಸಲ್ಲಿಸಲಾದ ತೀರ್ಪಿನ ಬಗೆಗಿನ

ಪುಟ 8 ಕ್ಕೆ

ಎಲ್ಲವೂ ಚಾರಿತ್ರಿಕ ಅಲ್ಲ

ಈ ಲೇಖನದ ವಸ್ತುನಿಷ್ಟತೆಯಲ್ಲಿ ಕೆಲವು ಪ್ರಮುಖ ನ್ಯೂನತೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ

- ಕಾವೇರಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಎಲ್ಲವೂ ಚಾರಿತ್ರಿಕ ಕಾರಣಗಳಿಂದಾಗಿ ಮತ್ತು ಅವು ಅನಿವಾರ್ಯ ಎಂಬ ಅಭಿಪ್ರಾಯ ಲೇಖನದಲ್ಲಿದೆ. ಇದು ನಿಜವಲ್ಲ.
- 1924ರ ಒಪ್ಪಂದ ಬ್ರಿಟಿಷ್ ಆಡಳಿದಲ್ಲಿದ್ದ ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಬ್ರಿಟಿಷರ ಸಾಮಂತರಾಗಿದ್ದ ಮೈಸೂರು ರಾಜರ ನಡುವೆ ಆದ ಅಸಮಾನ ಒಪ್ಪಂದ ಅನ್ಯಾಯದ ಮೂಲ. ಅದರ ಹಲವು ಅಂಶಗಳನ್ನು ವಿವಿಧ ರೀತಿಯಲ್ಲಿ ಮುಂದುವರೆಸುವುದು ಅನಿವಾರ್ಯ ಅಲ್ಲ.
- ತಮಿಳುನಾಡಿನ ಕಾವೇರಿ ಕೊಳ್ಳದಲ್ಲಿ ಹೆಚ್ಚಿನ ನೀರಾವರಿ ಆಗಿರುವುದು ವಿಸ್ತಾರವಾದ ಸಮತಟ್ಟಾದ ಪ್ರದೇಶ ಲಭ್ಯವಿರುವುದು ಮತ್ತು ಸರಳ ತಂತ್ರಜ್ಞಾನದಲ್ಲಿ ಕಟ್ಟಬಹುದಾಗಿದ್ದರಿಂದ. ಆಳಿದವರ 'ಮುಂದಾಲೋಚನೆ'ಯಿಂದ ಮಾತ್ರವಲ್ಲ. ಅಥವಾ ಕರ್ನಾಟಕದ ಭಾಗದ ಆಳಳರಸರಲ್ಲಿ 'ಮುಂದಾಲೋಚನೆ'ಯ ಅಭಾವದಿಂದ ಮಾತ್ರವಲ್ಲ. ಕರ್ನಾಟಕದ ಭಾಗದಲ್ಲಿ ಭೌಗೋಳಿಕ ಪರಿಸ್ಥಿತಿ ಅನುಕೂವಾಗಿಲ್ಲದಿರುವುದು ಮತ್ತು 19–20 ಶತಮಾನದ ತಂತ್ರಜ್ಞಾನ ಹೆಚ್ಚಿನ ಅಭಿವೃದ್ಧ ತಂತ್ರಜ್ಞಾನ ಲಭ್ಯವಾಗದಿರುವ ವರೆಗೆ ಇದು ಸಾಧ್ಯವಿಲ್ಲದ್ದರಿಂದ
- ನೀರಿನ ಹಂಚಿಕೆಯ ನ್ಯಾಯಶಾಸ್ತ್ರದಲ್ಲಿ ಹೊಸ ಬಳಕೆದಾರರಿಗೆ ಕೊಡಬೇಕಾದ ಆದ್ಯತೆ ಬಗ್ಗೆ ಲೇಖನ ಏನನ್ನೂ ಹೇಳುವುದಿಲ್ಲ.
- ನೀರಿನ ಲಭ್ಯತೆ ಬಗ್ಗೆ ರಿಮೋಟ್ ಸೆನ್ಸಿಂಗ್ ಮುಂತಾದ ಆಧುನಿಕ ತಂತ್ರಜ್ಞಾನ ಬಳಸಿ ಮತ್ತು ಲಭ್ಯವಿರುವ ಮಾಹಿತಿ ಬಳಸಿ ಸಂಕಷ್ಟ ಹಂಚಿಕೆಗೆ ನ್ಯಾಯಸಮ್ಮತ ಸೂತ್ರ ರೂಪಿಸುವ ಕೇಂದ್ರ ಸರಕಾರ ಮತ್ತು ಅದರ ವಿಭಾಗಗಳ ಸಾಂವಿಧಾನಿಕ ಜವಾಬ್ದಾರಿ ಬಗ್ಗೆ ಲೇಖನ ಮೌನವಾಗಿದೆ
- ಕಾವೇರಿ ವಿವಾದ ಸಂಬಂಧಿಸಿದ ಕೇಂದ್ರದ ಎರಡು ತಜ್ಞರ ಮತ್ತು ಅಧಿಕಾರಿಗಳ ಸಮಿತಿ ಹಾಗೂ ಪ್ರಧಾನಿ ಅಧ್ಯಕ್ಷತೆಯ ಕಾವೇರಿ ಪ್ರಾಧಿಕಾರ ತನ್ನ ಜವಾಬ್ದಾರಿ ನಿರ್ವಹಿಸದಿರುವುದರ ಬಗೆಗೂ ಲೇಖನ ಮೌನವಾಗಿದೆ

ಕೇರಳದಲ್ಲಿ ಬಿಜೆಪಿ-ಆರೆಸ್ಸೆಸ್ ತಂತ್ರ ತಿರುಗುಬಾಣವಾಗುತ್ತದೆ

ಕೇರಳದಲ್ಲಿ ಅಳವಡಿಸಿಕೊಂಡಿರುವ ಹಿಂಸಾತ್ಮಕ ದಾಳಿಗಳ ಹಾದಿ ನಿರರ್ಥಕ ಮತ್ತು ತಿರುಗುಬಾಣವಾಗುವಂಥದ್ದು ಎನ್ನುವುದನ್ನು ಬಿಜೆಪಿ, ಮತ್ತು ಮುಖ್ಯವಾಗಿ ಆರ್‌ಎಸ್‌ಎಸ್ ನಾಯಕತ್ವ ಮನಗಾಣಬೇಕು. ಈ ಹಿಂಸಾ ರಾಜಕೀಯಕ್ಕೆ ಇತಿಶ್ರೀ ಹಾಡಬೇಕು ಎಂದು ಸಿಪಿಐ (ಎಂ) ಕರೆ ನೀಡಿದೆ.



ಪ್ರಕಾಶ ಕಾರಟ್

ಕೇರಳದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮೇಲೆ ಹೆಚ್ಚುತ್ತಿರುವ ದಾಳಿಗಳ ಬಗ್ಗೆ ಹೊಸದೊಂದು ಸುಳ್ಳಿನ ಕಂತೆ ಕಟ್ಟಲು ಬಿಜೆಪಿ ಪ್ರಯತ್ನಿಸುತ್ತಿದೆ. 'ಬಿಜೆಪಿ ಕಾರ್ಯಕರ್ತರ ಮೇಲೆ ಹೆಚ್ಚುತ್ತಿರುವ ದಾಳಿ ಪ್ರಕರಣಗಳ' ಬಗ್ಗೆ ವಿಚಾರಿಸಲು ತನ್ನ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಭೂಪೇಂದ್ರ ಯಾದವ್ ನೇತೃತ್ವದಲ್ಲಿ ಐವರು ಸದಸ್ಯರ ತಂಡವನ್ನು ಕೇರಳಕ್ಕೆ ಕಳಿಸುವುದಾಗಿ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಪ್ರಕಟಿಸಿದ್ದಾರೆ.

ಕೇರಳದ ಕೋಳಿಕ್ಕೋಡ್‌ನಲ್ಲಿ ಸೆಪ್ಟೆಂಬರ್ 23ರಿಂದ 25ರವರೆಗೆ ಬಿಜೆಪಿಯ ರಾಷ್ಟ್ರೀಯ ಮಂಡಳಿ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ ಈ ಘೋಷಣೆ ಹೊರಬಿದ್ದಿದೆ. ಈ ಸಭೆ ನಡೆಯಬೇಕಿರುವ ಹಿನ್ನೆಲೆಯಲ್ಲಿ ದಾಳಿಗೆ ಕಾರಣ ಎಂದು ಹೇಳಿ ಸಿಪಿಐ (ಎಂ) ವಿರುದ್ಧ ಮತ್ತು ಎಲ್‌ಡಿಎಫ್ ಸರಕಾರದ ವಿರುದ್ಧ ಅಪಪ್ರಚಾರ ನಡೆಸುವುದು ಹಾಗೂ ಎಲ್‌ಡಿಎಫ್ ಸರಕಾರ ಅಧಿಕಾರಕ್ಕೆ ಬಂದ ನಂತರ ಈ ದಾಳಿಗಳು ಹೆಚ್ಚಿವೆ ಎಂದು ಬಿಂಬಿಸುವುದು ಬಿಜೆಪಿ ಉದ್ದೇಶವಾಗಿದೆ.

ಬಿಜೆಪಿಯ ಈ ಸುಳ್ಳು ಆಟಾಟೋಪ ಜಾಸ್ತಿ ದಿನ ಇರುವುದಿಲ್ಲ ಹಾಗೂ ಕೇರಳದ ಹೊರಗಿನ ಜನತೆಗೆ ವಾಸ್ತವಾಂಶ ಗೊತ್ತಾದಾಗ ಬಿಜೆಪಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳಲಿದೆ.

ಕಳೆದ ವಿಧಾನಸಭೆ ಚುನಾವಣೆಗಳಲ್ಲಿ ಎಲ್‌ಡಿಎಫ್ ಜಯಗಳಿಸಿದಾಗಿನಿಂದ ಇದುವರೆಗೆ ನಾಲ್ವರು ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರ ಹತ್ಯೆ ನಡೆದಿದೆ. ಧರ್ಮದಂನಲ್ಲಿ ಸಿ.ವಿ. ರವೀಂದ್ರನ್, ತ್ರಿಶೂರಿನಲ್ಲಿ ಶಶಿಕುಮಾರ್, ಪಯ್ಯನೂರಿನಲ್ಲಿ ಧನರಾಜ್ ಮತ್ತು ತಿರುವನಂತಪುರ ಜಿಲ್ಲೆಯಲ್ಲಿ ಡಿವೈಎಫ್‌ಐ ಕಾರ್ಯಕರ್ತ ಸುರೇಶ್ ಕುಮಾರ್ ಅವರ ಮೇಲೆ ಹಲ್ಲೆ ನಡೆಸಿ ಕೊಲ್ಲಲಾಗಿದೆ. ಈ ಆಕ್ರಮಣಗಳಲ್ಲಿ ಎಲ್‌ಡಿಎಫ್‌ನ ಅನೇಕ ಬೆಂಬಲಿಗರು ಗಾಯಗೊಂಡಿದ್ದಾರೆ.

ಈ ಮಾರಕ ದಾಳಿಗಳನ್ನು ಯಾರು ಹುಟ್ಟು ಹಾಕಿದರು ಎಂಬ ಪ್ರಶ್ನೆಗೆ ಅಸೆಂಬ್ಲಿ ಚುನಾವಣೆಯ ಫಲಿತಾಂಶ ಪ್ರಕಟವಾದ ದಿನದ ಘಟನೆಗಳೇ ಉತ್ತರ ಹೇಳುತ್ತವೆ. ಆ ದಿನ ಬಿಜೆಪಿ-ಆರ್‌ಎಸ್‌ಎಸ್ ಕೂಟದವರು ಪಿಣರಾಯಿ ವಿಜಯನ್ ಅವರ ಕ್ಷೇತ್ರ ಧರ್ಮದಂನಲ್ಲಿ ನಡೆದ ವಿಜಯೋತ್ಸವ ಮೆರವಣಿಗೆ ಮೇಲೆ ದಾಳಿ ಮಾಡಿದ್ದರು. ಅದರಲ್ಲಿ ರವೀಂದ್ರನ್ ಮೃತಪಟ್ಟಿದ್ದರು. ಎಲ್‌ಡಿಎಫ್ ಗೆಲುವಿನ ಬೆನ್ನಲ್ಲೇ ನಡೆದ ಈ ಪ್ರಥಮ ದಾಳಿಯೇ ಬಿಜೆಪಿ-ಆರ್‌ಎಸ್‌ಎಸ್ ಕೂಟದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಅದರ ನಂತರದಲ್ಲಿ ಕಣ್ಣೂರು ಜಿಲ್ಲೆ ಮಾತ್ರವಲ್ಲದೆ ಇತರ ಅನೇಕ ಕಡೆಗಳಲ್ಲೂ ಸರಣಿ ದಾಳಿಗಳು ನಡೆದವು. ಶಶಿಕುಮಾರ್ ಮೃತಪಟ್ಟಿದ್ದು ಆ ದಾಳಿಗಳಲ್ಲೇ.

ಕೊಲೆಗೀಡಾದ ನಾಲ್ವರು ಸಿಪಿಐ(ಎಂ) ಕಾರ್ಯಕರ್ತರ ಪೈಕಿ ಇಬ್ಬರ ಹತ್ಯೆ ಕಣ್ಣೂರಿನ ಹೊರಗಡೆ ನಡೆಯಿತು. ಹಿಂಸಾಚಾರವು ಕಣ್ಣೂರು ಕೇಂದ್ರಿತ ಅಲ್ಲ, ಆದರೆ ಬಿಜೆಪಿ ಆರ್‌ಎಸ್‌ಎಸ್ ಕೂಟ ಕೇರಳದ ವಿವಿಧ ಭಾಗಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರನ್ನು ತೀವ್ರವಾಗಿ ಗುರಿಯಾಗಿಸಿಕೊಂಡಿದೆ ಎನ್ನುವುದನ್ನು ಇದು ತೋರಿಸುತ್ತದೆ. ತಿರುವನಂತಪುರದಲ್ಲಿ ಬಿಜೆಪಿ ರಾಜ್ಯ ಕಚೇರಿ ಬಳಿ ಇತ್ತೀಚೆಗೆ ಒರಟು ಸ್ಫೋಟಕವೊಂದನ್ನು ಎಸೆಯಲಾದ ಪ್ರಕರಣ ಇನ್ನಷ್ಟು ಹೆಚ್ಚು ಗಲಭೆ ಸೃಷ್ಟಿಸಲು ಮಾಡಿದ ಒಂದು ಪ್ರಚೋದನೆ ಎಂಬಂತೆ ಕಾಣುತ್ತದೆ.

ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಬಗ್ಗೆ ಭಾರೀ ನಿರೀಕ್ಷೆಗಳನ್ನು ಹುಟ್ಟು ಹಾಕಲಾಗಿತ್ತಾದರೂ ಫಲಿತಾಂಶಗಳು ಕೇರಳದಲ್ಲಿ ಬಿಜೆಪಿ-ಆರ್‌ಎಸ್‌ಎಸ್ ಘಟಕಗಳಲ್ಲಿ ತೀವ್ರ ನಿರಾಶೆಯನ್ನು ಮೂಡಿಸಿತ್ತು. ಜಾತ್ಯತೀತತೆಯ ಕಟ್ಟಾ ಸಂರಕ್ಷಕ ಹಾಗೂ ಕೋಮುವಾದಿ ಶಕ್ತಿಗಳ ಬದ್ಧ ವಿರೋಧಿಯಾದ ಎಡ ಪ್ರಜಾಸತ್ತಾತ್ಮಕ ರಂಗದ ವಿಜಯ ಅವರನ್ನು ಹಿಂಸಾತ್ಮಕ ದಾಳಿಗಳನ್ನು ನಡೆಸಲು ಪ್ರಚೋದಿಸಿತು. ಅದರಿಂದ ತಮ್ಮ ರಾಜಕೀಯ ಪ್ರಭಾವವನ್ನು ವಿಸ್ತರಿಸಲು ಅವರು ಯಶಸ್ವಿಯಾಗುವುದಿಲ್ಲ ಎನ್ನುವುದು ಕಣ್ಣೂರಿನ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ತನ್ನ ಸಶಸ್ತ್ರ ಪಡೆಗಳ ಮೂಲಕ ಕಣ್ಣೂರಿನಲ್ಲಿ ರಾಜಕೀಯ ನೆಲೆ ಮತ್ತು ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಆರ್‌ಎಸ್‌ಎಸ್ ನೇತೃತ್ವದ ಬಿಜೆಪಿ ಸತತವಾಗಿ ಪ್ರಯತ್ನಿಸುತ್ತಿದೆ. ಆದರೆ ಜಿಲ್ಲೆಯ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಲು ಬಿಜೆಪಿಗೆ ದಶಕಗಳ ಕಾಲದಿಂದ ಸಾಧ್ಯವಾಗಿಲ್ಲ.

ಶಸ್ತ್ರಾಸ್ತ್ರಗಳು ಮತ್ತು ತರಬೇತಿ ನೀಡುವ ಆರ್‌ಎಸ್‌ಎಸ್ ಶಾಖೆಗಳ ಚಟುವಟಿಕೆಗಳನ್ನು ದೇವಸ್ಥಾನಗಳಲ್ಲಿ ನಡೆಸುವುದರ ಮೇಲೆ ನಿಷೇಧ ಹೇರಲು ಎಲ್‌ಡಿಎಫ್ ಸರಕಾರ ಚಿಂತಿಸುತ್ತಿದೆ. ಲಾಠಿ ಮತ್ತು ಖಡ್ಗಗಳ ತರಬೇತಿ ನೀಡಲು ದೇವಸ್ಥಾನಗಳಲ್ಲಿ ನಡೆಸುವ ಶಾಖೆಗಳಲ್ಲಿ ಆರ್‌ಎಸ್‌ಎಸ್ ಗಮನ ಕೇಂದ್ರೀಕರಿಸುತ್ತಿದೆ. ಇದೀಗ ಅಂಥ ಶಾಖೆಗಳ ನಿಷೇಧಕ್ಕೆ ಮುಂದಾಗಿರುವುದರಿಂದ ಬಿಜೆಪಿ ಆರ್‌ಎಸ್‌ಎಸ್ ಕೂಟದ ಸಿಟ್ಟು ಇನ್ನಷ್ಟು ಹೆಚ್ಚಾಗಿದೆ.

ಹಿಂದುತ್ವ ಕೋಮುವಾದ ಮತ್ತು ಇತರೆ ಕೋಮುವಾದಿ ಶಕ್ತಿಗಳ ವಿರುದ್ಧ ಸಿಪಿಐ (ಎಂ) ಸಾಮೂಹಿಕ ಪ್ರಚಾರಾಂದೋಲನವನ್ನು ನಡೆಸುತ್ತಿದೆ. ಮಹಾನ್ ಸಮಾಜ ಸುಧಾರಕರಾದ ಚಟ್ಟಂಬಿ ಸ್ವಾಮಿ ಮತ್ತು ಅಯ್ಯಂಕಳಿ ಅವರ ಜನ್ಮದಿನದ ಪ್ರಯುಕ್ತ 'ನಾವೆಲ್ಲರೂ ಒಂದು' ಎಂಬ ಘೋಷಣೆಯಡಿ ಐದು ದಿನಗಳ ಕಾಲ ಸಾಮೂಹಿಕ ಆಂದೋಲನ ನಡೆಸಲಾಯಿತು. ಕೇರಳದ ಎರಡು ಸಾವಿರ ಕೇಂದ್ರಗಳಲ್ಲಿ ಈ ಕಾರ್ಯಕ್ರಮಗಳು ನಡೆದಿದ್ದು ಲಕ್ಷಾಂತರ ಜನರು ಭಾಗವಹಿಸಿದ್ದರು. ಈ ಬಲಿಷ್ಠವಾದ ಪ್ರತಿ-ಪ್ರಚಾರದ ಮುಂದೆ ತನ್ನ ಕೋಮುವಾದಿ ಸಂದೇಶವನ್ನು ಕೊಂಡೊಯ್ಯಲು ಆರ್‌ಎಸ್‌ಎಸ್ ಮತ್ತು ಬಿಜೆಪಿಗೆ ಆಗುತ್ತಿಲ್ಲ. ಸಿಪಿಐ (ಎಂ) ಕಾರ್ಯಕರ್ತರ ಮೇಲೆ ದಾಳಿಗಳನ್ನು ನಡೆಸಲು ಇದೂ ಒಂದು ಕಾರಣವಾಗಿದೆ.

ಕೇರಳದಲ್ಲಿ ತಾನು ಅಳವಡಿಸಿಕೊಂಡಿರುವ ಹಾದಿ ನಿರರ್ಥಕ ಮತ್ತು ತಿರುಗುಬಾಣವಾಗುವಂಥದ್ದು ಎನ್ನುವುದನ್ನು ಬಿಜೆಪಿ, ಮತ್ತು ಮುಖ್ಯವಾಗಿ ಆರ್‌ಎಸ್‌ಎಸ್ ನಾಯಕತ್ವ ಮನಗಾಣಬೇಕು. ಈ ಹಿಂಸಾ ರಾಜಕೀಯಕ್ಕೆ ಇತಿಶ್ರೀ ಹಾಡಬೇಕು ಎಂದು ಸಿಪಿಐ (ಎಂ) ಕರೆ ನೀಡಿದೆ. ಈ ಮನವಿಗೆ ಸ್ಪಂದಿಸಿದರೆ ಶಾಂತಿಯನ್ನು ಸ್ಥಾಪಿಸುವ ಸಲುವಾಗಿ ಬಿಜೆಪಿ ನಾಯಕತ್ವದೊಂದಿಗೆ ಪಕ್ಷ ಮತ್ತು ಸರಕಾರ ಖಂಡಿತವಾಗಿಯೂ ಮಾತುಕತೆ ನಡೆಸಲಿದೆ.

ಅನುವಾದ:ವಿಶ್ವ

ಕರ್ನಾಟಕದ ಬವಣೆಗೆ ಯಾರು ಹೊಣೆ........ ಪುಟ 7 ರಿಂದ

ಪ್ರಮುಖ ಆಕ್ಷೇಪಣೆಯನ್ನು ನೋಡೋಣ. ಅದು ಪ್ರಮುಖವಾಗಿ ತಿಂಗಳುವಾರಾಗಿ (ಅದರಲ್ಲೂ ನೀರಿನ ವರ್ಷದ ಮುಂಗಾರಿನ ಮೊದಲ 4 ತಿಂಗಳುಗಳಲ್ಲಿ) ಬಿಡಬೇಕಾದ ನೀರಿನ ಪ್ರಮಾಣದ ನಿರ್ಧಾರದ ಬಗ್ಗೆ ಇದೆ. ಜೂನ್ ನಲ್ಲಿ 10 ಟಿಎಂಸಿ, ಜುಲೈನಲ್ಲಿ 34 ಟಿಎಂಸಿ, ಆಗಸ್ಟದಲ್ಲಿ 50 ಟಿಎಂಸಿ, ಸೆಪ್ಟಂಬರ್‌ನಲ್ಲಿ 40 ಟಿಎಂಸಿ ಬಿಡಬೇಕಿರುತ್ತದೆ. ನೈರುತ್ಯ ಮುಂಗಾರನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಕರ್ನಾಟಕಕ್ಕೆ ಅದು ಜೂನ್ ತಿಂಗಳಲ್ಲಿ ಸರಿಯಾಗಿ ಬಾರದಿದ್ದಾಗ ಅಥವಾ ಕೊರತೆಯಾದಾಗ ಈ ಐತೀರ್ಪನ್ನು ಪಾಲಿಸುವುದು ದುಸ್ತರವಾಗುತ್ತದೆ. ಈ ಪರಿಸ್ಥಿತಿ 2007ರ ಹಿಂದೆ-ಯೂ. ಅಂದರೆ 2002-03, 2003-04 ಮುಂಗಾರು ಸತತವಾಗಿ ಕೈಕೊಟ್ಟಾಗ ದೊಡ್ಡ ಸಮಸ್ಯೆಯಾಗಿತ್ತು. 2012 ಮತ್ತು ಈಗ ಅಂತಹುದೇ ಸಮಸ್ಯೆ ಎದುರಾಗಿ ಸುಪ್ರೀಂಕೋರ್ಟ್ 10,000 ಕ್ಯೂಸೆಕ್‌ಗಳನ್ನು 10 ದಿವಸ ಹರಿಸಲು ಹೇಳಿರುವುದು ಕರ್ನಾಟಕದಲ್ಲಿ ಪ್ರತಿಭಟನೆಯನ್ನು ಹುಟ್ಟುಹಾಕಿದೆ.

ಈ ಸಮಸ್ಯೆ ಇರುವಾಗ ಟ್ರಿಬ್ಯೂನಲ್ ಹೇಗೆ 134 ಟಿಎಂಸಿಯನ್ನು ಆ 4 ತಿಂಗಳಿಗೆ ನಿಗದಿಪಡಿಸಿತು? ಕರ್ನಾಟಕವೇ ಟ್ರಿಬ್ಯುನಲಿಗೆ ಒದಗಿಸಿದ ಅಂಕಿ-ಅಂಶಗಳ ಪ್ರಕಾರ 2007ಕ್ಕೂ ಹಿಂದಿನ 16 ವರ್ಷಗಳಲ್ಲಿ ಹರಿಸಿದ ನೀರಿನ ಪ್ರಮಾಣ ಸರಾಸರಿ 134.18 ಟಿಎಂಸಿ (ಬಿಳಿಗುಂಡ್ಲುವಿನಲ್ಲಿ ಅಳೆದಂತೆ). ಟ್ರಿಬ್ಯೂನಲ್ ಈ ಸರಾಸರಿ ಪ್ರಮಾಣ ಅನುಸರಿಸಿ ಅದರ ತಿಂಗಳ ಹಂಚಿಕೆ ಮಾಡಿದೆ.

ಸಂಕಷ್ಟದ ವರ್ಷಗಳ ಒತ್ತಡ

ಒಟ್ಟಾರೆಯಾಗಿ ಸಾಮಾನ್ಯವಾಗಿ ಮಳೆಯಾದ ವರ್ಷಗಳಲಿ ಟ್ರಿಬ್ಯೂನಲ್ ಪ್ರಕಾರ ನೀರು ಹರಿಸುವುದು ಕಷ್ಟವಾಗುತ್ತಿಲ್ಲ. ಆದರೆ 2002-03, 2003-04, 2012ಗಳಲ್ಲಿ ಬಂದ ಮತ್ತು ಈಗ 2016ರಲ್ಲಿ ಬಂದಿರುವ ಸಮಸ್ಯೆಗೆ ಪರಿಹಾರವೇನು - ಸಂಕಷ್ಟದ ವೇಳೆಯಲ್ಲಿನ ಹಂಚಿಕೆ ಸೂತ್ರ ಹೇಗಿರಬೇಕು. ಈ ವಿಷಯದಲ್ಲಿ ಸಾಕಷ್ಟು ಹೇಳಲಾಗಿದೆ. ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಇರುವ ವಿವಾದ ಪ್ರಮುಖವಾಗಿ ಸಂಕಷ್ಟದ ವರ್ಷಗಳಿಗೆ ಸಂಬಂಧಿಸಿದೆ. ಆದರೆ ಎಲ್ಲರೂ ಮನಗಾಣಬೇಕಾದ ವಿಷಯವೆಂದರೆ ಕರ್ನಾಟಕದ ನೀರಾವರಿ ಮತ್ತು ಕಾನೂನು ತಜ್ಞರು ಸಂಕಷವನ್ನು ಹಂಚುವ ಪ್ರಮಾಣವನ್ನು ಮತ್ತು ಸೂತ್ರವನ್ನು ಟ್ರಿಬ್ಯೂನಲ್ಲಿಗೆ ಸಲ್ಲಿಸಿದ್ದಾರೆ ಮತ್ತು ಅದರ ಅನುಮೋದನೆಗೆ ಒತ್ತಾಯಿಸಿರುತ್ತಾರೆ.

ಅಂತಿಮ ಐತೀರ್ಪು ಸಂಕಷ್ಟದ ಅವಧಿಯಲ್ಲಿ ನೀರಿನ ಲಭ್ಯತೆಯನ್ನು ಗಮನಿಸಿ ಕೊರತೆ-ಯ ಅನುಪಾತದಲ್ಲೇ ರಾಜ್ಯಗಳ ಪಾಲನ್ನು ಕಡಿಮೆಮಾಡಬೇಕು ಎಂದಿದೆ. ಇದನ್ನೇ ತಮಿಳುನಾಡು ಬಯಸುತ್ತದೆ. ಆದರೆ ಟ್ರಿಬ್ಯೂನಲ್ ತೀರ್ಪನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದು ಹೇಳಿರುವುದು ಕೇವಲ ಯಾಂತ್ರಿಕವಾಗಿ ಪಾಲನ್ನು ಕಡಿಮೆ ಮಾಡುವುದನ್ನು ಅಲ್ಲ. ಅದು ಉದಾರ ವಿಧಾನ ಸೂಚಿಸಿದೆ. ಮುಂದೆ ರಚಿತವಾಗುವ ನಿಬಂಧನಾ ಸಂಸ್ಥೆ (ರೆಗ್ಯುಲೇಟರಿ ಬಾಡಿ) ಕೊಳ್ಳದಲ್ಲಿನ ಒಟ್ಟಾರೆ ಹರಿಯುವಿಕೆ, ಹಿಂಗಾರು ಮಳೆಯ ಪ್ರಭಾವ ಎಲ್ಲವನ್ನು ಪರಿಗಣಿಸಲು ತಿಳಿಸಿದೆ. ಇದನ್ನೇ ಕರ್ನಾಟಕ ಕೇಳುತ್ತಿರುವುದು. ಹಾಗದರೇ ಇಲ್ಲಿ ಯಾವ ಸಮಸ್ಯೆ ಇದೆ?

ಕರ್ನಾಟಕ ತಮಿಳುನಾಡಿಗೆ ಬಿಡಬೇಕಿರುವ ಮಳೆಗಾಲದ 4 ತಿಂಗಳ ಪ್ರಮಾಣವನ್ನು ಕಡಿಮೆ ಮಾಡಬೇಕು. ಇದರಿಂದ ತನ್ನ ರೈತರಿಗೆ ಅನುಕೂಲವಾಗುತ್ತದೆ. ಎಂಬ ಅಂಶವನ್ನು ಕರ್ನಾಟಕ ಪ್ರಬಲವಾಗಿ ಮುಂದಿಟ್ಟಿದೆ. ಟ್ರಿಬ್ಯೂನಲ್ 1924 ರಲ್ಲಿದ್ದ ಕರ್ನಾಟಕದ ಸೀಮಿತ ಅವಶ್ಯಕತೆಯನ್ನೇ ಆಧಾರವಾಗಿಟ್ಟುಕೊಂಡು ಮೊದಲ 4 ತಿಂಗಳ ಹಂಚಿಕೆ ನಿರ್ಧರಿಸಿದೆ ಎಂಬ ವಾದವೂ ಇದೆ. ಈ ವಿಷಯ ಚರ್ಚೆಯಾಗಬೇಕಾದ್ದು ಎಂಬುದರ ಬಗ್ಗೆ ಸಂಶಯವಿಲ್ಲ. ಆದರೆ ಇದನ್ನು ಕರ್ನಾಟಕ ಸುಪ್ರೀಂಕೋರ್ಟಿಗೆ ಹೇಗೆ ಮನವರಿಕೆ ಮಾಡಿಕೊಡುವುದು ಎಂಬುದು ಊಹಿಸಲಾಗದ ವಿಷಯ

ಇನ್ನೊಂದು ಟ್ರಿಬ್ಯೂನಲ್ ಪರಿಗಣಿಸದೆ ಇರುವ ಅಂಶವೆಂದರೆ ತಮಿಳುನಾಡಿನಲ್ಲಿರುವ ಹೇರಳ ಅಂತರ್ಜಲ ಲಭ್ಯತೆ ಮತ್ತು ಕರ್ನಾಟಕದಲ್ಲಿ ಅದರ ಕೊರತೆ. ತ. ನಾಡಿನಲ್ಲಿ ತಜ್ಞರ ಅಭಿಪ್ರಾಯದಂತೆ ಕಡಿಮೆಯೆಂದರೂ 20 ಟಿಎಂಸಿ ಅಂತರ್ಜಲದ ಲಭ್ಯತೆಯಿರುತ್ತದೆ. ಈ ವಿಷಯವನ್ನು ಪರಿಗಣಿಸಿದರೆ ಕರ್ನಾಟಕದ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಮತ್ತೊಂದು ಟ್ರಿಬ್ಯುನಲಿನ ಐತೀರ್ಪಿನಿಂದ ಹೊಮ್ಮವ ವಿಷಯವೆಂದರೆ ಉತ್ತಮ ನೀರಿನ ನಿರ್ವಹಣೆ (Water Management). ಇದನ್ನು ಎರಡೂ ರಾಜ್ಯಗಳು ಸಮರೋಪಾಧಿಯಲ್ಲಿ ಕೈಗೆತ್ತಿಗೊಳ್ಳಬೇಕು. ವಿಶೇಷವಾಗಿ ತ.ನಾಡು ನೀರನ್ನೇ ಹೆಚ್ಚಾಗಿ ಬೇಡುವ ಭತ್ತದ ಎರಡು ಬೆಳೆಗಳನ್ನು ಬೆಳೆಯುವ ಕಾರಣ ನೀರನ್ನು ಕಡಿಮೆ ಬಳಸುವ ತಾಂತ್ರಿಕ ವಿಧಾನಗಳನ್ನು ಅನುಸರಿಸಬೇಕು. ಆದ್ದರಿಂದ ಎರಡೂ ರಾಜ್ಯಗಳು ಬೆಳೆಯ ಆಯ್ಕೆ, ನೀರಿನ ನಿರ್ವಹಣೆಗಾಗಿ ಉತ್ತಮ ಮಾರ್ಗಗಳನ್ನು ಅನುಸರಿಸಬೇಕು. ಇದೇ ಸಮಯದಲ್ಲಿ ಕರ್ನಾಟಕ ತನ್ನ ಪಾಲಿನ ಹೆಚ್ಚಿನ ನೀರನ್ನು ಬಳಸಲು ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಿ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಬೃಹತ್ ಬೆಂಗಳೂರಿಗೆ ನೀರು ಪೂರೈಕೆ ಮಾಡಬಹುದು.

ಕೊನೆಗೆ ಈ ವಿವಾದದ ಬಗ್ಗೆ ಒಟ್ಟು ಅರ್ಥ ಮಾಡಿಕೊಳ್ಳಲು ಕೆಲವು ಅಂಕಿ ಅಂಶಗಳು. ಟ್ರಿಬ್ಯೂನಲ್ ತೀರ್ಪು 192 ಟಿಎಂಸಿ ಇದ್ದು, 1991-92ರಿಂದ 2006-07ರ ಅವಧಿಯ 16 ವರ್ಷಗಳಲ್ಲಿ ಬಿಳಿಗೊಂಡ್ಲುವಿನಲ್ಲಿ ಅಳೆದಂತೆ ವಾರ್ಷಿಕ ಹರಿವು 255 ಟಿಎಂಸಿ. ಆ ಅವಧಿಯಲ್ಲೇ 5 ವರ್ಷಗಳಲ್ಲಿ ಸರಾಸರಿ ಹರಿವು 350 ಟಿಎಂಸಿ ಗಿಂತ ಹೆಚ್ಚಿತ್ತು. ಟ್ರಿಬ್ಯುನಲಿನ 2007ರ ಐತೀರ್ಪಿನ ನಂತರ 2012ರಲ್ಲಿ ಮಾತ್ರ ವಾರ್ಷಿಕ ಹರಿವು (100.45 ಟಿಎಂಸಿ) ಟ್ರಿಬ್ಯುನಲ್ ನಿರ್ಧರಿಸಿದ 192 ಟಿಎಂಸಿಗಿಂತ ಕಡಿಮೆ ಇತ್ತು.

ಇನ್ನೊಂದು ವಿಷಯವೆಂದರೆ ಕಳೆದ ಏಳು ವರ್ಷಗಳಲ್ಲಿ (2007-08, 2013-14, 2014-15 ಹೊರತುಪಡಿಸಿ) ಮಳೆಗಾಲದ 4 ತಿಂಗಳುಗಳಲ್ಲಿ (2016 ಸೇರಿಸಿ) ಕರ್ನಾಟಕದಿಂದ ಹರಿದಿರುವುದು 94 ಟಿಎಂಸಿಗಿಂತ ಕಡಿಮೆ ಇರುತ್ತದೆ. ದುರ್ಬಲ ಮುಂಗಾರು ಮಳೆಯ ಕಾರಣ 4 ತಿಂಗಳಲ್ಲಿ ಕೊರತೆಯಾದರೂ ತ.ನಾಡಿಗೆ ಹರಿಯುವ ವಾರ್ಷಿಕ ಪ್ರಮಾಣ ಟ್ರಿಬ್ಯೂನಲ್ ಸೂಚಿಸುವ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. ಆದ್ದರಿಂದ ಈ ನಾಲ್ಕು ತಿಂಗಳಲ್ಲಿ ಕೊರತೆ ಇದ್ದಾಗ ಮಾತ್ರ ಕರ್ನಾಟಕ ಟ್ರಿಬ್ಯುನಲ್ ನಿರ್ದೇಶನ ಪಾಲಿಸಲು ಹಿಂಜರಿಯುತ್ತದೆ. ತಮಿಳುನಾಡು ಒತ್ತಡ ಹೇರುತ್ತದೆ.

ಆದರೆ ಎರಡೂ ಕಡೆಯ ರಾಜಕಾರಣಿಗಳು ಅವಕಾಶ ಸಿಕ್ಕಿದಾಗೆಲ್ಲ ಬೊಬ್ಬೆ ಹಾಕುತ್ತಾರೆ ಮತ್ತು ಅಂತಹ ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ●

ಸಾಮಾಜಿಕ ಭದ್ರತೆ ಮತ್ತು ಸಂಘ ಕಟ್ಟುವ ಸ್ವಾತಂತ್ರ್ಯಕ್ಕಾಗಿ ಹಾಗೂ ಕಾರ್ಮಿಕ ಹಕ್ಕುಗಳ ದಮನದ ವಿರುದ್ಧ
CITU 13 ರಾಜ್ಯ ಸಮ್ಮೇಳನ
17-19 ಸೆಪ್ಟೆಂಬರ್ 2016 ಕೂಡಲಸಂಗಮ ಬಾಗಲಕೋಟ
ಸಮಾನತೆಗಾಗಿ ಶ್ರಮಿಸಿದ ಶರಣರ ನಾಡಿನಲ್ಲಿ ಕಾಯಕಜೀವಿಗಳ ಸಮಾಗಮ

ಕರ್ನಾಟಕದಲ್ಲಿ ಸಿಐಟಿಯು: ಸಾಧನೆಗಳು ಮತ್ತು ಸವಾಲುಗಳು

ದೇಶದ ಮತ್ತು ರಾಜ್ಯದ ಒಂದು ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯುನ 13 ನೇ ರಾಜ್ಯ ಸಮ್ಮೇಳನ ಬಾಗಲಕೋಟೆಯಲ್ಲಿ ಸಪ್ಟಂಬರ್17ರಿಂದ 20ರ ವರೆಗೆ ನಡೆಯುತ್ತಿರುವ ಸಂದರ್ಭದಲ್ಲಿ, ಅದರ ರಾಜ್ಯ ಅಧ್ಯಕ್ಷರೂ, ಕರ್ನಾಟಕದ ಹಿರಿಯ ಕಾರ್ಮಿಕ ಮುಖಂಡರೂ ಆಗಿರುವ ವಿಜೆಕೆ ನಾಯರ್‌ರವರಿಂದ ಕಳೆದ ನಾಲ್ಕು ದಶಕಗಳಿಗೂ ಮೀರಿದ ಕಾರ್ಮಿಕ ಅಂದೋಲನದತ್ತ ಒಂದು ಪಕ್ಷಿನೋಟ.

ವಿ.ಜೆ.ಕೆ.ನಾಯರ್

1970ರಲ್ಲಿ ಸಿಐಟಿಯು ನ ಸಂಸ್ಥಾಪಕರು ಅಂಗೀಕರಿಸಿದ ವರ್ಗಹೋರಾಟದ ದಾರಿ 'ಐಕ್ಯತೆ ಮತ್ತು ಹೋರಾಟ'ದ ಘೋಷಣೆಯನ್ನು ಮುಂದಿಟ್ಟಿತು. ಅದನ್ನು ಹಲವು ದಶಕಗಳಿಂದ ಅನುಸರಿಸಿಕೊಂಡು ಬಂದಿದ್ದೇವೆ ಮತ್ತು 1991ರಲ್ಲಿ ಭಾರತ ಸರಕಾರ ನವ–ಉದಾರವಾದಿ ಧೋರಣೆಗಳನ್ನು ಅಂಗೀಕರಿಸಿದಂದಿನಿಂದ 17 ಅಖಿಲ ಭಾರತ ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿದ್ದೇವೆ. 'ಐಕ್ಯತೆ ಮತ್ತು ಹೋರಾಟ'ದ ಘೋಷಣೆಯ ಮೂಲಕ ಸುಮಾರಾಗಿ ಎಲ್ಲ ಸಂಘಟನೆಗಳನ್ನು ಸಂಯುಕ್ತ ಕಾರ್ಯಾಚರಣೆಗೆ ತರಲು ಸಾಧ್ಯವಾಗಿರುವುದು ಸಿಐಟಿಯು ಹಿಡಿದ ದಾರಿಯ ಯಶಸ್ಸಿಗೆ ಸಾಕ್ಷಿಯಾಗಿದ್ದರೂ, ಈ ಸಾಧನೆ ಇನ್ನೂ ತೃಪ್ತಿದಾಯಕ ಎನ್ನುವಂತಿಲ್ಲ. ಇನ್ನಷ್ಟು ದೃಢ ನಿರ್ಧಾರದ ಸಂಘಟನೆ ಮತ್ತು ಕಾರ್ಯಾಚರಣೆ ಬೇಕಾಗಿದೆ.

ಸಿಐಟಿಯು ಸ್ಥಾಪನೆಗೊಂಡ ಎರಡು ವರ್ಷಗಳ ಒಳಗೆ, ಆಗ ವರ್ಗಹೋರಾಟದ ಅತ್ಯಂತ ಮುಂದುವರೆದ ನೆಲೆಯಾದ ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವವನ್ನು ಬುಡಮೇಲುಗೊಳಿಸಲಾಯಿತು, ಅರೆ–ಫ್ಯಾಸಿಸ್ಟ್ ಭಯೋತ್ಪಾದನೆ ಕಾಣಬಂತು. 1977ರಲ್ಲಿ ಪಶ್ಚಿಮ ಬಂಗಾಲದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಸರ್ವಾಧಿಕಾರಶಾಹಿ ಆಳ್ವಿಕೆ ಕೊನೆಗೊಂಡ ಮೇಲೆಯೇ ಮುಂದೆ ಮೂರು ದಶಕಗಳ ಕಾಲ ಯಾವುದೇ ತಡೆಯಿಲ್ಲದ ಎಡರಂಗ ಆಳ್ವಿಕೆ ಬಂತು, ಅಷ್ಟೇ ಅಲ್ಲ, ಭಾರತದಾದ್ಯಂತ ತೀವ್ರಗಾಮಿ ಬದಲಾವಣೆಗೆ ನಾಂದಿಯಾಯ್ತು. ಈ ಪ್ರಕ್ರಿಯೆಯಲ್ಲಿಯೇ ನಮ್ಮ ರಾಜ್ಯ ಸಿಐಟಿಯು 1978ರಿಂದ ಮುಂದೆ ಬೆಳೆಯಲಾರಂಭಿಸಿತು.

ನಮ್ಮ ರಾಜ್ಯದಲ್ಲಿ ಸಿಐಟಿಯುನ ಪಾತ್ರ ದುಡಿಯುವ ಜನಗಳನ್ನು ಸಂಘಟಿಸುವಲ್ಲಿ, ಆಳುವ ವರ್ಗದ ಪಕ್ಷಗಳಿಗೆ ಅವರದೇ ರಾಜಕೀಯ ರಂಗದಲ್ಲಿ ಸವಾಲು ಹಾಕುವಲ್ಲಿ ಎಂಭತ್ತರ ದಶಕದಲ್ಲಿ ಬಲಿಷ್ಟವಾಗಿತ್ತು, ಆಗ ಸ್ವಾತಂತ್ರ್ಯದ ನಂತರ ಅಬಾಧಿತವಾಗಿ ನಡೆದುಕೊಂಡು ಬಂದಿದ್ದ ಕಾಂಗ್ರೆಸಿನ ಆಳ್ವಿಕೆಯನ್ನು ಕೊನೆಗೊಳಿಸಲು ಮತ್ತು ಒಂದು ಪರ್ಯಾಯವನ್ನು ಶ್ರೀ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ಜನತಾ ಪಾರ್ಟಿ ಸರಕಾರದ ಸ್ವರೂಪದಲ್ಲಿ ತರಲು ನಮಗೆ ಸಾಧ್ಯವಾಯಿತು. ಆ ಮೂಲಕ ಹಲವಾರು ಕಾರ್ಮಿಕ ಪರ ಕಾನೂನುಗಳನ್ನು ತರಲು ಸಾಧ್ಯವಾಯಿತು. ಮೇ ದಿನದ ಸಾರ್ವತ್ರಿಕ ರಜೆ, ಜೀವನ ನಿರ್ವಹಣೆ ಭತ್ಯೆ ಪಾವತಿ ಕಾಯ್ದೆ, ರಾಜ ಸಂಧಾನಕ್ಕೆ ಹಾಜರಾಗದ ಮಾಲೀಕರಿಗೆ ಸಮನ್ಸ್ ಜಾರಿಗೊಳಿಸುವ ಅಧಿಕಾರ, ಮಾದರಿ ಸ್ಥಾಯಿ ಆದೇಶಕ್ಕೆ ತಿದ್ದುಪಡಿ ಮಾಡಿ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಕೆ ಮುಂತಾದ ಕ್ರಮಗಳನ್ನು ಸರ್ಕಾರ ವಹಿಸುವಂತಾಯಿತು. ಕಾರ್ಮಿಕ ವರ್ಗದ ಪ್ರಶ್ನೆಗಳನ್ನು ರಾಜ್ಯ ರಾಜಕೀಯದ ಕೇಂದ್ರ ಅಂಶಗಳನ್ನಾಗಿಸಲು ಸಾಧ್ಯವಾಯಿತು. ಈ ಜನತಾ ಪಾರ್ಟಿ ಪ್ರಯೋಗಗಳು ಮುಗಿಯುವ ಸುಮಾರಿಗೆ 1991ರಲ್ಲಿ ನರಸಿಂಹರಾವ್–ಮನಮೋಹನ್‌ಸಿಂಗ್ ಜೋಡಿ ಎಲ್‌ಪಿಜಿ ಧೋರಣೆಗಳನ್ನು ಆರಂಭಿಸಿತು, ಕೋಮುವಾದೀ ರಾಜಕೀಯವನ್ನು ಎದುರಿಸುವುದು ಒಂದು ಎದೆಗುಂದಿಸುವ ಕೆಲಸವಾಯಿತು ಮತ್ತು ದೇಶ ಬಾಬ್ರಿ ಮಸೀದಿ ಧ್ವಂಸದ ನಂತರದ ಅನುಭವಗಳಿಂದ ಹಾದು ಹೋಗಬೇಕಾಯಿತು.

ಕರ್ನಾಟಕದಲ್ಲಿ ಜನತಾಪಾರ್ಟಿ/ಜನತಾ ದಳ ಪ್ರಯೋಗದ ವಿಫಲತೆ ಕಾಂಗ್ರೆಸ್–ವಿರೋಧಿ ಆಂದೋಲನವನ್ನು ರಾಜ್ಯದಲ್ಲಿ ಕೋಮುವಾದಿಗಳು ಹೈಜಾಕ್ ಮಾಡಲು ಅವಕಾಶ ಕಲ್ಪಿಸಿತು. ಇದರ ಪರಿಣಾಮವಾಗಿ ಒಂದು ಅವಧಿಗೆ ಬಿಜೆಪಿ ಸರಕಾರಗಳು ಸ್ಥಾಪನೆಗೊಂಡವು. ಈ ನಡುವೆ ಉದ್ದಿಮೆಗಳಲ್ಲಿ ಮತ್ತು ಉದ್ಯೋಗಗಳ ಸಂರಚನೆಯಲ್ಲಿ ಬಂದ ಬದಲಾವಣೆಗಳಿಂದಾಗಿ ಸಂಘಟಿತ ವಲಯದಲ್ಲಿ ನಮ್ಮ ಪ್ರಭಾವ ಕುಂದಲಾರಂಭಿಸಿತು, ಅಸಂಘಟಿತ ವಲಯ ಹರಡಲಾರಂಭಿಸಿತು. ಸಂಘಟಿತ ಕಾರ್ಮಿಕರನ್ನು ಅಣಿನೆರೆಸಿ ಆಳುವವರ ಧೋರಣೆಗಳಲ್ಲಿ ಮಧ್ಯಪ್ರವೇಶಿಸುವ ನಮ್ಮ ಸಾಮರ್ಥ್ಯ ಕುಂದುತ್ತಿರುವಾಗಲೇ, ನಮಗೆ ಕರ್ನಾಟಕದಾದ್ಯಂತ ಗ್ರಾಮ ಪಂಚಾಯತ್ ಮತ್ತು ಸ್ಕೀಮ್ ಕಾರ್ಮಿಕರ ರಾಜ್ಯ ಮಟ್ಟದ ಸಂಘಗಳನ್ನು ಸಂಘಟಿಸುವ ಮೂಲಕ ಭೌಗೋಳಿಕ ಹರಹು ಪಡೆಯಲು ಸಾಧ್ಯವಾಯಿತು.

ನಾವು ಸ್ಥಾಪಿಸಿಕೊಂಡ ಈ ವಿಸ್ತಾರದ ಬಲದಲ್ಲೇ 2009ರಲ್ಲಿ ಒಂದು ಸರ್ವಸಾಮಾನ್ಯ ಕನಿಷ್ಟ ಕೂಲಿ ಮತ್ತು ಇತರ ಬೇಡಿಕೆಗಳ ಮೇಲೆ ಒಂದು ಸಾರ್ವತ್ರಿಕ ಆಂದೋಲನವನ್ನು, ಆಗ ಸಪ್ಟಂಬರ್ ಹೋರಾಟ ಎಂದು ಕರೆದ ಚಳುವಳಿಯನ್ನು ಬಹಳಷ್ಟು ಸಿದ್ದತೆಯೊಂದಿಗೆ ನಡೆಸಲು ಪ್ರಯತ್ನಿಸಿದೆವು, ಅದು ಆಡಳಿತವನ್ನು ತಬ್ಬಿಬ್ಬುಗೊಳಿಸಿತು. ಮುಂದಿನ ದಿನಗಳಲ್ಲಿ ನಮಗೆ ಈ ಓಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿಲ್ಲ, ನಾವು ಕನಿಷ್ಟ ಕೂಲಿ ಮತ್ತು ಇತರ ಬೇಡಿಕೆಗಳನ್ನು ಎತ್ತಲು ವಿಭಾಗೀಯ ಹೋರಾಟಗಳು ಮತ್ತು ಸರಕಾರೀ ಕ್ರಿಯೆಗಳ ಮೇಲೆ ಅವಲಂಬಿಸಬೇಕಾಯಿತು.

ಬಂಡವಾಳ ಮತ್ತು ಶ್ರಮಶಕ್ತಿಯ ನಡುವಿನ ವೈರುಧ್ಯ ಜಾಗತಿಕವಾಗಿ ತೀಕ್ಷ್ಣಗೊಳ್ಳುತ್ತಿದೆ, ಸಮಾಜವಾದದ ಸ್ಥಾಪನೆಯತ್ತ ನಮ್ಮ ಮುನ್ನಡೆಗೆ ಅಪಾರ ಸಾಧ್ಯತೆಗಳನ್ನು ತೆರೆದು ಕೊಡುತ್ತಿದೆ. ಅತ್ಯಂತ ಮುಂದುವರೆದ, ಹಾಗನ್ನುವುದಕ್ಕಿಂತಲೂ, ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಈ ತೀಕ್ಷ್ಣ ವೈರುಧ್ಯಗಳು ಪ್ರಕಟಗೊಳ್ಳುತ್ತಿವೆ. ಹೆಚ್ಚಿನ ಯುರೋಪಿಯನ್ ದೇಶಗಳು ಕಾರ್ಮಿಕ ವರ್ಗದ ಹೋರಾಟಗಳನ್ನು, ರಾಜಕೀಯ ಪ್ರತಿಪಾದನೆಗಳನ್ನು ಕಾಣುತ್ತಿವೆ.

ಫ್ರಾನ್ಸಿನ ಕಾರ್ಮಿಕ ವರ್ಗದ ಆಂದೋಲನ ಈ ವರ್ಷದ ಫೆಬ್ರುವರಿಯಿಂದ 'ದಣಿಗಳ ಕಾನೂನು' ವಿರುದ್ಧ ಸರಣಿ–ಸರಣಿಯಾಗಿ ಮುಷ್ಕರಗಳನ್ನು ನಡೆಸುತ್ತಿದೆ.

ಗ್ರೀಸ್ ದೇಶ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಮತ್ತು ನಂತರದ ಹೋರಾಟಗಳಲ್ಲಿ ಗಂಭೀರ ಸವಾಲುಗಳನ್ನು ಎಸೆದಿದೆ.

ಸ್ಪೇನ್/ಪೋರ್ಚುಗಾಲ್‌ನ ಕಾರ್ಮಿಕರು ತಮ್ಮದೇ ಪರ್ಯಾಯಗಳನ್ನು ಮುಂದಿಡುತ್ತಿದ್ದಾರೆ.

ಬ್ರಿಟನ್ನಿನಲ್ಲಿ ಯುರೋಪಿಯನ್ ಒಕ್ಕೂಟದಿಂದ ಹೊರಹೋಗುವ ಬ್ರೆಕ್ಸಿಟ್ ವಿರುದ್ಧ ಪ್ರಚಾರದ ಹೊರತಾಗಿಯೂ ಜೆಮ್ಮಿ ಕೊರ್ಬಿನ್ ಲೇಬರ್ ಪಾರ್ಟಿಯ ಮುಖಂಡರಾಗೇ ಮುಂದುವರೆಯುತ್ತಿದ್ದಾರೆ.

ಅಮೆರಿಕಾದಲ್ಲಿ ಬೆರ್ನಿ ಸ್ಯಾಂಡರ್ಸ್ ಒಂದು ಬಿರುಗಾಳಿ ಎಬ್ಬಿಸಿದ್ದಾರೆ, ಅಧ್ಯಕ್ಷೀಯ ಸ್ಪರ್ಧೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗದಿದ್ದರೂ, ಅತ್ಯಂತ ಚೈತನ್ಯಶೀಲ ಯುವಜನರನ್ನು ಆಕರ್ಷಿಸಿದ್ದಾರೆ. ಅವರ ಪ್ರಚಾರ ಉಂಟುಮಾಡಿದ ವಾತಾವರಣ ಸಮಾಜವಾದ ಮತ್ತು ಜನಪರ ಧೋರಣೆಗಳಿಗೆ ಬದ್ಧತೆಯ ಬಲವಾದ ಹೆಜ್ಜೆ ಗುರುತುಗಳನ್ನು ಬಿಟ್ಟಿದೆ.

ಚೀನಾ ಒಂದು ಹಿಂದುಳಿದ ಆರ್ಥಿಕ ವ್ಯವಸ್ಥೆ ಮೂರೇ ದಶಕಗಳಲ್ಲಿ ಅಭಿವೃದ್ಧಿ ಹೊಂದಬಹುದು ಎಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟಿದೆ. ಚೀನೀ ಗುಣಲಕ್ಷಣಗಳನ್ನು ಹೊಂದಿರುವ ಸಮಾಜವಾದವನ್ನು ಕಟ್ಟುತ್ತೇವೆ ಎಂಬ ಅವರ ದಾವೆಯನ್ನು ನಮ್ಮಂತಹ ಒಂದು ದೇಶ ಉಪೇಕ್ಷಿಸಲು ಸಾಧ್ಯವಿಲ್ಲ.

ಜಗತ್ತಿನಲ್ಲಿ ಈ ಸಕಾರಾತ್ಮಕ ಬೆಳವಣಿಗೆಗಳು ನಡೆಯುತ್ತಿರುವಾಗಲೇ ಸಾಮ್ರಾಜ್ಯಶಾಹಿ ಹಸ್ತಕ್ಷೇಪಗಳು ಮತ್ತು ಯುದ್ಧಗಳು, ವಿಶೇಷವಾಗಿ ಮಧ್ಯಪೂರ್ವ ಪ್ರದೇಶದಲ್ಲಿ ಉಂಟು ಮಾಡುತ್ತಿರುವ ಹಾನಿ, ಮತ್ತು ಅದರಿಂದಾಗಿ ಯುರೋಪಿನಲ್ಲಿ ಮತ್ತು ಅಮೆರಿಕಾದಲ್ಲಿಯೂ ಭಯೋತ್ಪಾದನೆಯ ರೂಪದಲ್ಲಿ ಆಗುತ್ತಿರುವ ಅನುಭವವನ್ನು ಕೂಡ ಉಪೇಕ್ಷಿಸುವಂತಿಲ್ಲ. ಬಲಪಂಥೀಯ ಶಕ್ತಿಗಳು ಅಷ್ಟೇ ಜೋರಾಗಿ ಬೆಳೆಯುತ್ತಿವೆ. ಕಾರ್ಮಿಕ ವರ್ಗ ಇದನ್ನು ಉಪೇಕ್ಷಿಸುವಂತಿಲ್ಲ. ಜಗತ್ತು ಕಂಡ ಹಿಟ್ಲರ್ ಮುಸೊಲಿನಿ ಯಂತಹ ಫ್ಯಾಸಿಸ್ಟ್ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಸಂಸದೀಯ ಪ್ರಜಾಪ್ರಭುತ್ವವನ್ನು ಕಡೆಗಣಿಸುವ ಆಳುವ ವರ್ಗದ ನಗ್ನ ಆಡಳಿತವೇ ಫ್ಯಾಸಿಸಂ ಎಂಬ ಅಂತರ್ ರಾಷ್ಟ್ರೀಯ ಕಾರ್ಮಿಕ ಚಳುವಳಿಯ ನೇತಾರರಾದ ಜಾರ್ಜ್ ದಿಮಿತ್ರೋವ್‌ರವರ ಫ್ಯಾಸಿಸಂನ ಪರಿಭಾಷೆಯನ್ನು ಮನವರಿಕೆ ಮಾಡಿಕೊಳ್ಳಬೇಕಿದೆ.

ನಮ್ಮ ದೇಶದಲ್ಲಿ ಕೂಡ ಬಹುಸಂಖ್ಯಾತ ಧಾರ್ಮಿಕ ಸರ್ವಾಧಿಕಾರಶಾಹಿ ತಲೆ ಎತ್ತಿರುವುದು ಫ್ಯಾಸಿಸ್ಟ್ ಬೇಳವಣಿಗೆಯ ಅಪಾಯವನ್ನು ತೋರಿಸುತ್ತಿದೆ. ತಾವು ಮಾತ್ರವೇ ದೇಶಭಕ್ತರು ಎಂದು ಹೇಳಿಕೊಳ್ಳುತ್ತ, ಅವರ ಧೋರಣೆಗಳನ್ನು ಯಾರಾದರೂ ಟೀಕಿಸುತ್ತಿದ್ದರೆ ಅವರೆಲ್ಲರೂ ರಾಷ್ಟ್ರ–ವಿರೋಧಿಗಳು ಎಂದು ಸಾರಿ ಅವರನ್ನು ದಾಳಿಗಳಿಗೆ ಗುರಿ ಮಾಡುತ್ತಿದ್ದಾರೆ.

ಅವರು ತೋರಿಸುತ್ತಿರುವ ಅಭಿವೃದ್ಧಿಯೆಲ್ಲವೂ ಕಾರ್ಪೊರೇಟ್‌ಗಳಿಗೆ, ಶ್ರೀಮಂತರಿಗೇ ಮೀಸಲು, ಮತ್ತು ಅವರ ಪ್ರಚಾರಗಳು 'ಮೇಕ್ ಇನ್ ಇಂಡಿ–ಯಾ' ಹೆಸರಲ್ಲಿ ವಿದೇಶಿ ಗುತ್ತೇದಾರಿಗಳಿಗೆ ಅಗ್ಗದ ಶ್ರಮಶಕ್ತಿಯನ್ನು ಪೂರೈಸುವ ಪ್ರಚಾರಗಳೇ ಆಗಿವೆ. ಅದೇ ವೇಳೆಗೆ, ಒಂದೊಮ್ಮೆ ಬಚ್ಚಿಟ್ಟುಕೊಂಡಿದ್ದ ಅವರ ಹಿಂದೂರಾಷ್ಟ್ರ ಕಟ್ಟುವ ಅಜೆಂಡಾ ಈಗ ಜನಗಳನ್ನು ತಮ್ಮ ದಾರಿಗೆ ತರಲು ಅವರು ಹರಿಯ ಬಿಡುತ್ತಿರುವ ಹಿಂಸಾಚಾರದ ಮೂಲಕ ಬಹಿರಂಗ–ಕ್ಕೆ ಬಂದಿದೆ; ಗೋರಕ್ಷಣೆಯ ಹೆಸರಲ್ಲಿ, ಧಾರ್ಮಿಕ ಕಾರಣಗಳಿಂದಲೇ ಸತ್ತ ಪ್ರಾಣಿಗಳ ಹೆಣಗಳನ್ನು ಎತ್ತುವ, ಅವುಗಳ ಚರ್ಮ ಸುಲಿಯುವ ಕೆಲಸಗಳನ್ನು ಮಾಡಬೇಕಾಗಿದ್ದ ದಲಿತರ ಮೇಲೂ ದಾಳಿಗಳನ್ನು ಮಾಡಿರುವುದಕ್ಕೆ ತೀವ್ರ ಪ್ರತಿಕ್ರಿಯೆಗಳು ಎದ್ದು ಬಂದಿವೆ. ಕೋಮುವಾದಿಗಳ ವಿಚಾರಶೈಲಿಯನ್ನು ಒಪ್ಪದ ವಿಚಾರವಾದಿಗಳು, ಬುದ್ಧಿಜೀವಿಗಳೂ ದಾಳಿಗೆ ಒಳಗಾಗಿದ್ದಾರೆ.

ಕಾರ್ಮಿಕ ವರ್ಗದ ಕಾರ್ಯಾಚರಣೆಗಳು ಬೃಹತ್ ಸ್ವರೂಪದಲ್ಲಿ ನಡೆದಾಗ ಫಲಿತಾಂಶಗಳು ಬರಲು ಸಾಧ್ಯವಿದೆ ಎಂಬುದು ಮಾರ್ಚ್ 18 ಮತ್ತು 19ರಂದು ಬೆಂಗಳೂರಿನಲ್ಲಿ ಗಾರ್ಮೆಂಟ್ ಕಾರ್ಮಿಕರ ಸ್ವಯಂಸ್ಫೂರ್ತ ಹೋರಾಟಗಳು ತೋರಿಸಿ ಕೊಟ್ಟಿವೆ.

ಕಾರ್ಮಿಕರು ತಮ್ಮ ಬದುಕುಗಳನ್ನು ಉತ್ತಮ ಪಡಿಸಲು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ–ವಿರೋಧಿ ಧೋರಣೆಗಳನ್ನು ವಿರೋಧಿಸುವ ಮೂಲಕ ಜನಸಾಮಾನ್ಯರ ಪರವಾಗಿ ನಡೆಸುವ ವ್ಯಾಪಕ ಪ್ರತಿರೋಧಗಳಿಂದ ಮಾತ್ರವೇ ಜನರನ್ನು ಗೆದ್ದುಕೊಳ್ಳಲು ಸಾಧ್ಯ. ●

ನಮ್ಮ ರಾಜ್ಯದಲ್ಲಿ ಸಿಐಟಿಯುನ ಪಾತ್ರ ದುಡಿಯುವ ಜನಗಳನ್ನು ಸಂಘಟಿಸುವಲ್ಲಿ, ಆಳುವ ವರ್ಗದ ಪಕ್ಷಗಳಿಗೆ ಅವರದೇ ರಾಜಕೀಯ ರಂಗದಲ್ಲಿ ಸವಾಲು ಹಾಕುವಲ್ಲಿ ಎಂಭತ್ತರ ದಶಕದಲ್ಲಿ ಬಲಿಷ್ಟವಾಗಿತ್ತು.

ತೊಂಭತ್ತರ ದಶಕದಲ್ಲಿ ಎಲ್.ಪಿ.ಜಿ. ಧೋರಣೆಗಳಿಂದ ಬಂದ ಬದಲಾವಣೆಗಳಿಂದ ಸಂಘಟಿತ ಕಾರ್ಮಿಕರನ್ನು ಅಣಿನೆರೆಸಿ ಆಳುವವರ ಧೋರಣೆಗಳಲ್ಲಿ ಮಧ್ಯಪ್ರವೇಶಿಸುವ ನಮ್ಮ ಸಾಮರ್ಥ್ಯ ಕುಂದುತ್ತಿದ್ದಾಗಲೇ, ವಿಸ್ತರಿಸುತ್ತಿದ್ದ ಅಸಂಘಟಿತ ವಲಯದಲ್ಲಿ ಸಂಘಟನೆ ಮಾಡುವ ಮೂಲಕ ರಾಜ್ಯದಾದ್ಯಂತ ಭೌಗೋಳಿಕ ಹರಹು ಪಡೆಯಲು ಸಾಧ್ಯವಾಯಿತು. ಈ ವಿಸ್ತಾರದ ಬಲದಲ್ಲೇ 2009ರಲ್ಲಿ ಕನಿಷ್ಟ ಕೂಲಿ ಮತ್ತು ಇತರ ಬೇಡಿಕೆಗಳ ಮೇಲೆ ಒಂದು ಸಾರ್ವತ್ರಿಕ ಆಂದೋಲನವನ್ನು ಕೈಗೆತ್ತಿಕೊಳ್ಳಲಾಯಿತು.

ಈಗ ಬಂಡವಾಳ ಮತ್ತು ಶ್ರಮಶಕ್ತಿಯ ನಡುವಿನ ವೈರುಧ್ಯ ಜಾಗತಿಕವಾಗಿ ತೀಕ್ಷ್ಣಗೊಳ್ಳುತ್ತಿರುವ ಸಂದರ್ಭದಲ್ಲಿ, ದೇಶದಲ್ಲಿ ಒಂದು ಕಡೆ ಧಾರ್ಮಿಕ ಸರ್ವಾಧಿಕಾರಶಾಹಿ ತಲೆ ಎತ್ತಿರುವುದು ಫ್ಯಾಸಿಸ್ಟ್ ಬೆಳವಣಿಗೆಯ ಅಪಾಯವನ್ನು ತೋರಿಸುತ್ತಿದ್ದರೆ, ಇನ್ನೊಂದೆಡೆಗೆ ಅದು ಹರಿಯ ಬಿಟ್ಟಿರುವ ಹಿಂಸಾಚಾರಕ್ಕೆ ತೀವ್ರ ಪ್ರತಿರೋಧಗಳೂ ಎದ್ದು ಬರುತ್ತಿವೆ.



ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಪ್ರಕಟಿಸಿರುವ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಅವರು ಬರೆದಿರುವ "ಅಂಬೇಡ್ಕರ ಮತ್ತು ಕಾರ್ಮಿಕ ಕಾನೂನು" ಎಂಬ ಪುಸ್ತಕವನ್ನು ಸೆಪ್ಟಂಬರ್ 10ರಂದು ಬಸವನಗುಡಿಯ ಬ್ಯೂಗಲ್ ರಾಕ್ ಉದ್ಯಾನವನದಲ್ಲಿ ಸಾಹಿತಿ ದೇವನೂರು ಮಹಾದೇವರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ನ್ಯಾ.ನಾಗಮೋಹನ್ ದಾಸ್, ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ.ಪ್ರಕಾಶ್, ರಾಜ್ಯ ಕಾರ್ಯದರ್ಶಿ ಕೆ.ಎನ್,ಉಮೇಶ್, ಹಿರಿಯ ನ್ಯಾಯವಾದಿ ಎಸ್.ಸುಬ್ಬರಾವ್, ನಿವೃತ್ತ ಕಾರ್ಮಿಕ ಆಯುಕ್ತರಾದ ವಸಂತಕುಮಾರ್ ಹಿಟ್ಟಣಗಿ, ಜಿಲ್ಲಾ ಖಜಾಂಚಿ ಜೋಮಿ ಜಾರ್ಜ್, ಮುಖಂಡರಾದ ಬಿ.ರಾಜಶೇಖರಮೂರ್ತಿ ಉಪಸ್ಥಿತರಿದ್ದರು.

ಸಾಮಾಜಿಕ ಭದ್ರತೆ ಮತ್ತು ಸಂಘ ಕಟ್ಟುವ ಸ್ವಾತಂತ್ರ್ಯಕ್ಕಾಗಿ ಹಾಗೂ ಕಾರ್ಮಿಕ ಹಕ್ಕುಗಳ ದಮನದ ವಿರುದ್ಧ

CITU 13 ರಾಜ್ಯ ಸಮ್ಮೇಳನ

17-19 ಸೆಪ್ಟೆಂಬರ್ 2016 ಕೂಡಲಸಂಗಮ ಬಾಗಲಕೋಟ

ಸಮಾನತೆಗಾಗಿ ಶ್ರಮಿಸಿದ ಶರಣರ ನಾಡಿನಲ್ಲಿ ಕಾಯಕಜೀವಿಗಳ ಸಮಾಗಮ

ಹೋರಾಟದ ವರ್ಷಗಳು : ಕರ್ನಾಟಕ ಸಿಐಟಿಯು 2013–16

2013ರ 12 ನೇ ಸಮ್ಮೇಳನದಿಂದ ಈಗ ನಡೆಯುತ್ತಿರುವ 13ನೇ ಸಮ್ಮೇಳನದ ವರೆಗಿನ ಅವಧಿಯಲ್ಲಿ ಸಿಐಟಿಯು ಕರ್ನಾಟಕ ಘಟಕ ಹಲವಾರು ವಿಧದ ಹೋರಾಟಗಳಲ್ಲಿ ಭಾಗವಹಿಸಿದೆ. ಇವುಗಳಲ್ಲಿ ಮೂರು ಐತಿಹಾಸಿಕ ಸಾರ್ವತ್ರಿಕ ಮುಷ್ಕರಗಳು, ಅಖಿಲ ಭಾರತ ಸಮ್ಮೇಳನಗಳು, ಪ್ರಚಾರಾಂದೋಲನಗಳು, ರಾಜ್ಯ ಮಟ್ಟದ ಹೋರಾಟಗಳು, ಸೌಹಾರ್ದ ಹೋರಾಟಗಳೂ ಹಾಗೂ ಮಧ್ಯ ಪ್ರವೇಶಗಳೂ ಸೇರಿವೆ. ಇವುಗಳ ಒಂದು ಸಚಿತ್ರ ಝಲಕ್ ಇಲ್ಲಿದೆ


12.02.2015 : ಅಂಗನವಾಡಿ ನೌಕರರ ಹೋರಾಟ


11.03.2016 : ಸಿಐಟಿಯುಯಿಂದ ವಿಧಾನಸೌಧ ಚಲೋ


ಮಂಗಳೂರು : 9–2–16 ಬೀದಿಬದಿ ವ್ಯಾಪಾರಸ್ಥರ ಪ್ರತಿಭಟನೆ

ಐತಿಹಾಸಿಕ ಸಾರ್ವತ್ರಿಕ ಮುಷ್ಕರಗಳು

ಫೆಬ್ರವರಿ 20, 21 2013 ಸಾರ್ವತ್ರಿಕ ಮುಷ್ಕರ

- 30 ಜಿಲ್ಲೆಗಳು, 76 ತಾಲ್ಲೂಕುಗಳಲ್ಲಿ 155 ತಾಲ್ಲೂಕುಗಳಲ್ಲಿ ಮುಷ್ಕರ–ಪ್ರತಿಭಟನೆಗಳು
- 16 ಜಿಲ್ಲಾ ಕೇಂದ್ರಗಳು, 76 ತಾಲ್ಲೂಕುಗಳು ಸಂಪೂರ್ಣ ಬಂದ್
- 8 ತಾಲ್ಲೂಕುಗಳಲ್ಲಿ ಭಾಗಶಃ ಬಂದ್

ಜೆ.ಸಿ.ಟಿ.ಯು ಪಾರ್ಲಿಮೆಂಟ್ ಚಲೋ
ಡಿಸೆಂಬರ್ 12, 2013

ಲಕ್ಷಾಂತರ ಕಾರ್ಮಿಕರಲ್ಲಿ ಕರ್ನಾಟಕದ ಸಾವಿರಾರು ಕಾರ್ಮಿಕರು

ಫೆಬ್ರವರಿ 26, 2015ರ ಕಾನೂನು ಭಂಗ ಚಳವಳಿ

- 10 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗಿ
- 60 ಸಾವಿರಕ್ಕೂ ಹೆಚ್ಚು ಕರಪತಗಳ ಮೂಲಕ ವ್ಯಾಪಕ ಪ್ರಚಾರ

ಸೆಪ್ಟೆಂಬರ್ 2, 2015 ರ ಸಾರ್ವತ್ರಿಕ ಮುಷ್ಕರ :

- ಎರಡು ಲಕ್ಷ ಕಾರ್ಮಿಕರು ಮತ್ತು ನೌಕರರು ಪ್ರತಿಭಟನೆಗಳಲ್ಲಿ ನೇರವಾಗಿ ಭಾಗಿ
- 90 ಪ್ರಮುಖ ಎಪಿಎಮ್‌ಸಿ ಮಾರುಕಟ್ಟೆಗಳು ಬಂದ್
- ಬೆಂಗಳೂರಿನ 5 ಕೈಗಾರಿಕಾ ಪ್ರದೇಶಗಳಲ್ಲಿ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿದ್ದವು
- ಬೆಂಗಳೂರಿನ ಒಟ್ಟು 14 ಕೈಗಾರಿಕಾ ಪ್ರದೇಶಗಳಲ್ಲಿ ಬಹುತೇಕ ಉತ್ಪಾದನಾ ಸ್ಥಗಿತ

ಸೆಪ್ಟೆಂಬರ್ 2, 2016 ರ ಸಾರ್ವತ್ರಿಕ ಮುಷ್ಕರ :

- 17ನೇ ಸಾರ್ವತ್ರಿಕ ಮುಷ್ಕರ ಹಿಂದೆಂದಿಗಿಂತಲೂ ಯಶಸ್ವಿ
- ರಾಜ್ಯದಲ್ಲಿ 50 ಲಕ್ಷಕ್ಕೂ ಹೆಚ್ಚಿನ ಕಾರ್ಮಿಕರು– ನೌಕರರು ಮುಷ್ಕರದಲ್ಲಿ ನೇರ ಭಾಗಿ
- 194 ಪಂಚಾಯತಿ, ವಾರ್ಡ್, ಸ್ಥಳೀಯ ಮತ್ತು ಹೋಬಳಿ ಮಟ್ಟದ ಸಮಾವೇಶಗಳು
- 84 ತಾಲೂಕು ಸಮಾವೇಶಗಳು
- ರಾಜ್ಯದ 30 ಜಿಲ್ಲೆಗಳ ಪೈಕಿ 16 ಜಿಲ್ಲೆಗಳ 64 ತಾಲೂಕು ಕೇಂದ್ರಗಳಲ್ಲಿ ಬಂದ್
- ಉಡುಪಿಯ 72 ಗ್ರಾಮಗಳಲ್ಲಿ ಬಂದ್

ಅಖಿಲ ಭಾರತ ಸಭೆ–ಸಮ್ಮೇಳನಗಳು

ಜುಲೈ 2014 ಅಖಿಲ ಭಾರತ ಜನರಲ್ ಕೌನ್ಸಿಲ್ ಸಂದೇಶ ಜಾಥಾ

- ರಾಜ್ಯದ ಉದ್ದಗಲಗಳನ್ನು ಸುತ್ತಿ ಬಳ್ಳಾರಿ ತಲುಪಿದ 5 ಜಾತಾಗಳು
- ಜುಲೈ 14, 2014 ರಂದು ಬಳ್ಳಾರಿಯಲ್ಲಿ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯಲ್ಲಿ ಸಮಾರೋಪ

ಅಗಸ್ಟ್ 19–24, 2014 ಅಂಗನವಾಡಿ ನೌಕರರ ನಾಯಕತ್ವದ ಸಭೆ, ಗುಲಬರ್ಗಾ

- ಅಖಿಲ ಭಾರತ ಅಂಗನವಾಡಿ ನೌಕರರ ಸಂಘಟನಾ ಕಾರ್ಯಾಗಾರ ಮತ್ತು ಸಮಿತಿ ಸಭೆಗಳು

  ಜೂನ್ 21–23, 2015: ಬಿಸಿಯೂಟ ಕಾರ್ಮಿಕರ ಅಖಿಲ ಭಾರತ ಸಂಸ್ಥಾಪನಾ ಸಮ್ಮೆಳನ, ಬೆಂಗಳೂರು

ಪ್ರಚಾರಾಂದೋಲನಗಳು

ಮೇ 30 ರಿಂದ ಜೂನ್ 15 2013

- ಕಾರ್ಮಿಕರ ಪ್ರಮುಖ ಬೇಡಿಕೆಗಳ ಕುರಿತು ಪ್ರಚಾರಾಂದೋಲನ
- 7 ದಿನಗಳ ಕಾಲ ಜಾಥಾ, ಮನೆ ಮನೆ ಪ್ರಚಾರ, ಬೀದಿ ಬದಿ ಸಭೆಗಳು

ಡಿಸೆಂಬರ್ 21, 2013 ದುಡಿಯುವ ಮಹಿಳೆಯರ ಬೇಡಿಕೆಗಳ ಬಗ್ಗೆ ರಾಷ್ಟ್ರವ್ಯಾಪಿ ಪ್ರತಿಭಟನೆ

ಕಾಂ: ಜ್ಯೊತಿಬಸು ಅವರ ಜನ್ಮ ಶತಮಾನೋತ್ಸವ

ಜುಲೈ 8, 2014 ರಿಂದ ಇಡೀ ವರ್ಷ ವಿವಿಧ ಕಾರ್ಯಕ್ರಮಗಳು

ಆಗಸ್ಟ್ 7, 2014 ಬಂಗಾಳ ಸೌಹಾರ್ದ ದಿನ

ಸೆಪೆಂಬರ್ 10, 2014 ಕನಿಷ್ಟ ಕೂಲಿಗೆ ರಾಜ್ಯವ್ಯಾಪಿ ಪ್ರತಿಭಟನೆ

ಸೆಪ್ಟೆಂಬರ್ 16 2014 ಪ್ರತಿಭಟನಾ ರ್ಯಾಲಿ

- ಗುತ್ತಿಗೆ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ
- ರಾಜ್ಯ ಮಟ್ಟದ ಪ್ರತಿಭಟನಾ ರ್ಯಾಲಿ ಬೆಂಗಳೂರಲ್ಲಿ

ಜೂನ್ 8, 2015 ಕೇಂದ್ರ ಸರ್ಕಾರದ ಭೂತದಹನ

ಜನವರಿ 19, 2016 ರೈತ–ಕೂಲಿಕಾರರು ಹಾಗೂ ಕಾರ್ಮಿಕರ ದಿನ

ಮೈಸೂರಿನಲ್ಲಿ ರಾಜ್ಯ ಮಟ್ಟದ ದುಡಿಯುವ ಮಹಿಳೆಯರ ಸಮಾವೇಶ.

ರಾಜ್ಯ ಮಟ್ಟದ ಹೋರಾಟಗಳು

ಸೆಪ್ಟೆಂಬರ್ 26, 2013 ಕರಾಳ ಎಸ್ಮಾ ಕಾನೂನು ವಿರುದ್ದ ವಿಚಾರ ಸಂಕಿರಣ/ಪ್ರಚಾರ

ಡಿಸೆಂಬರ್ 2013 ಅಕ್ಷರ ದಾಸೋಹ ನೌಕರರ ಹೋರಾಟ:

- ಡಿಸೆಂಬರ್ 2–4. ಹೋರಾಟದಲ್ಲಿ ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ನೌಕರರು ಭಾಗಿ
- ಡಿಸೆಂಬರ್ 5 ರಂದು ಪ್ರಥಮ ಬಾರಿಗೆ ರಾಜ್ಯದ್ಯಂತ ಅಡುಗೆ ಬಂದ್

ಐಸಿಡಿಎಸ್ ಖಾಸಗೀಕರಣದ ವಿರುದ್ದ ಹೋರಾಟ ಡಿಸೆಂಬರ್ 2013

- "ಅಂಗನವಾಡಿ ಕೇಂದ್ರಗಳನ್ನು ಉಳಿಸಿ ಮಕ್ಕಳ ಆಹಾರ ಹಕ್ಕನ್ನು ರಕ್ಷಿಸಿ" ಪ್ರಚಾರಾಂದೋಲನ


25.03.2015 : ನೂರಾರು ಭಗತ್ ಸಿಂಗ್‌ರ ಪ್ರತಿಭಟನಾ ರ್ಯಾಲಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಂಗಳೂರು.


16.09.2014 : ಗುತ್ತಿಗೆ ಕಾರ್ಮಿಕರ ವಿಧಾನಸೌಧ ಚಲೋ


26.02.2015 : ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರೋಧಿಸಿ ಜೈಲ್‌ಭರೋ ಚಳುವಳಿ, ಉಡುಪಿ



ಮುನಿಸಿಪಲ್ ಕಾರ್ಮಿಕರ ಅನಿರ್ದಿಷ್ಟಾವಧಿ ಧರಣಿ, ಬಂಧನ, ಉತ್ತರ ಕನ್ನಡ.



ಮೈಸೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳಿಂದ ಪ್ರತಿಭಟನೆ



12.01.2016 : ಬಿಡದಿ ಕೈಗಾರಿಕಾ ಪ್ರದೇಶ ಕಾರ್ಮಿಕರಿಂದ ರಾಮನಗರ ಜಿಲ್ಲಾಧಿಕಾರಿ ಕಛೇರಿ ಚಲೋ

- ಪ್ರಚಾರಾಂದೋಲನದ ಭಾಗವಾಗಿ 18 ಡಿಸೆಂಬರ್ ರಂದು ಜಂಟಿ ಸಮಾವೇಶ

ಜನವರಿ 23, 2014 ಕಾರ್ಮಿಕ ಬೇಡಿಕೆಗಳಿಗಾಗಿ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ

- 13 ಲಕ್ಷದಷ್ಟು ಕರಪತ್ರಗಳ ಮತ್ತು 30 ಸಾವಿರ ಪೋಸ್ಟರ್‌ಗಳ ಮೂಲಕ ಕಾರ್ಮಿಕರ ನಡುವೆ ವ್ಯಾಪಕ ಪ್ರಚಾರ
- ಜನವರಿ 23 ರ ರ್‍ಯಾಲಿಗೆ ಹೊಂದಿಕೊಂಡಂತೆ ವಿವಿಧ ಹೋರಾಟಗಳು
- ಅಂಗನವಾಡಿ ನೌಕರರಿಂದ 2 ದಿನ ಅಹೋರಾತ್ರಿ ಧರಣಿ (ಜನವರಿ 23–24)
- ಬಿಸಿಯೂಟ ನೌಕರರು ಟೌನ್‌ಹಾಲ್ ಮುಂದೆ ಧರಣಿ (ಜನವರಿ 24)
- ಹಮಾಲಿ ಕಾರ್ಮಿಕರಿಂದ ರಾಜ್ಯ ಕೃಷಿ ಮಾರಟ ಮಂಡಳಿ ಮುತ್ತಿಗೆ (ಜನವರಿ 22)
- ಜನವರಿ 25 ರಂದು ಆಟೋ ಚಾಲಕರು ರಾಜಭವನ ಚಲೋ
- ಮುಖ್ಯಮಂತ್ರಿಗಳ ಜತೆ ಸಭೆ (ಜನವರಿ 27)

ಫೆಬ್ರುವರಿ 2015 : ಅಂಗನವಾಡಿ ನೌಕರರ ಸಮರಧೀರ ಅನಿರ್ದಿಷ್ಟಾವಧಿ ಮುಷ್ಕರ:

- 'ಮಿಶನ್ ಮೋಡ್' ಮೂಲಕ ಹಂತಹಂತವಾಗಿ ಖಾಸಗೀಕರಣದ ಕೇಂದ್ರ ಸರಕಾರದ ಧೋರಣೆ, ಕನಿಷ್ಠ ವೇತನ ರೂ. 15 ಸಾವಿರ ಪಾವತಿ ಮತ್ತಿತರ ಬೇಡಿಕೆಗಳ ಈಡೇರಿಕೆಗಾಗಿ
- ಫೆಬ್ರುವರಿ 2 ರಿಂದ ಜಿಲ್ಲಾಧಿಕಾರಿಗಳ ಕಚೇರಿಗಳ ಮುಂದೆ ನಿರಂತರ ಅಹೋ ರಾತ್ರಿ ಧರಣಿ
- 1.25 ಲಕ್ಷ ಅಂಗನವಾಡಿ ನೌಕರರಲ್ಲಿ 1 ಲಕ್ಷ ನೌಕರರು ಮುಷ್ಕರದಲ್ಲಿ ಭಾಗಿ
- ಮೂರು ದಿನಗಳ ಕಾಲ ಉಪವಾಸ ಸತ್ಯಾಗ್ರಹ
- 88 ತಾಲೂಕುಗಳಲ್ಲಿ ಪ್ರಚಾರ ಜಾಥಾ, 2500 ಗ್ರಾಮಪಂಚಾಯತ ಮಟ್ಟದ ಬಹಿರಂಗ ಸಭೆಗಳು
- ಫೆಬ್ರುವರಿ 12ರಂದು 40 ಸಾವಿರಕ್ಕೂ ಹೆಚ್ಚು ಅಂಗನವಾಡಿ ಮಹಿಳೆಯರಿಂದ ವಿಧಾನ ಸೌಧ ಚಲೋ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ

ಮಾರ್ಚ್ 11, 2016 ರಂದು ವಿಧಾನಸೌಧ ಚಲೋ:

- 20 ಸಾವಿರ ಜನ ಭಾಗವಹಿಸಿದ ಯಶಸ್ವಿ ಪ್ರತಿಭಟನೆ
- ಬೆಂಗಳೂರಿನ ಕೈಗಾರಿಕೆಗಳು, ಪ್ಲಾಂಟೇಶನ್, ಮುನ್ಸಿಪಾಲಿಟಿ ಕಾರ್ಮಿಕರು, ಮುಷ್ಕರದ ನೋಟೀಸನ್ನು ನೀಡಿ ಭಾಗಿ

ಕನಿಷ್ಠ ಕೂಲಿ ಹೋರಾಟಕ್ಕೆ ಆಂಶಿಕ ಜಯ

- 23 ಉದ್ದಿಮೆಗಳಿಗೆ ಕರಡು ಅಧಿ ಸೂಚನೆ ಪ್ರಕಟ.
- 9 ವಿಭಾಗಗಳಿಗೆ ರೂ. 10,100 ಪರಿಷ್ಕರಣೆಯಾಗಿರುವ ಕೂಲಿಯ ವಿರುದ್ಧ ಮಾಲೀಕರು ಹೈಕೋರ್ಟನಲ್ಲಿ ತಂದಿರುವ ತಡೆಯಾಜ್ಞೆಯ ವಿರುದ್ಧ ಅರ್ಜಿ

ತುಟ್ಟಿಭತ್ಯೆಗಾಗಿ ಬೀಡಿ ಕಾರ್ಮಿಕರ ಹೋರಾಟ

- 2012 ರಲ್ಲಿ ಬೀಡಿ ಕಾರ್ಮಿಕರಿಗೆ ತುಟ್ಟಿ ಭತ್ಯೆ ಹೆಚ್ಚಳವಾಗಿರುವ ರೂ 21.15 ಪಾವತಿಸಲು
- ಆಗಸ್ಟ್ 12, 2013 ರಿಂದ ಬೀಡಿ ಕಾರ್ಮಿಕರ 3 ದಿನಗಳ ಸಮರಧೀರ ಮುಷ್ಕರ
- ಜುಲೈ 9, 2014 ಬೆಂಗಳೂರು ಚಲೋ
- ಆಗಸ್ಟ್ 18, 2015 ರಂದು ಮತ್ತೆ ಮುಷ್ಕರ

'ಕಾಯಕ ನಿಧಿ' ಜಾರಿಗಾಗಿ ಹಮಾಲಿ ಕಾರ್ಮಿಕರ ಹೋರಾಟ– ಸಾಧನೆಗಳು

- ಹಮಾಲಿ ಕಾರ್ಮಿಕರ ಬೇಡಿಕೆಗಳಿಗಾಗಿ 2 ಸಾರಿ ವಿಧಾನಸೌಧ ಚಲೋ, ಕೃಷಿ ಮಾರಾಟ ಮಂಡಳಿ ಮುತ್ತಿಗೆ, ಕಾರ್ಮಿಕ ಭವನದ ಮುಂದೆ ಅನಿರ್ದಿಷ್ಟ ಧರಣಿ
- 1ಲಕ್ಷ ರೂ. ವರೆಗೆ ಆರೋಗ್ಯ ವಿಮೆ, ಶವ ಸಂಸ್ಕಾರಕ್ಕೆ 10 ಸಾವಿರ ರೂ.
- 10 ಸಾವಿರದಷ್ಟು ಕಾರ್ಮಿಕರಿಗೆ ಆಮ್ಮ ಆದ್ಮಿ ಭೀಮಾ ಯೋಜನೆ, ನೂರಾರು ಕಾರ್ಮಿಕರಿಗೆ ಮರಣ ಪರಿಹಾರ, ಮಕ್ಕಳಿಗೆ ವಿದ್ಯಾರ್ಥಿ ವೇತನ
- ನಾಲ್ಕು ವರ್ಷದಲ್ಲಿ ಸುಮಾರು 20 ಲಕ್ಷ ರೂಪಾಯಿಗಳಷ್ಟು ವಿದ್ಯಾರ್ಥಿ ವೇತನ

ಪೌರ ಕಾರ್ಮಿಕರ ಪ್ರಶ್ನೆಯಲ್ಲಿ ಮಧ್ಯ ಪ್ರವೇಶ

- ಜುಲೈ 25, 2013 ರಂದು ಬೆಂಗಳೂರಿನಲ್ಲಿ ವಿಧಾನ ಸೌಧ ಚಲೋ
- ಎರಡು ಬಾರಿ ರಾಜ್ಯ ಮಟ್ಟದ ಬೆಂಗಳೂರಿನಲ್ಲಿ ಅನಿರ್ಧಿಷ್ಠ ಹೋರಾಟಗಳು
- ಜುಲೈ 11, 2015 ವಿಧಾನ ಸೌಧ ಚಲೋ ದಲ್ಲಿ 15 ಜಿಲ್ಲೆಗಳ ಕಾರ್ಮಿಕರು ಭಾಗಿ

ಸೌಹಾರ್ದ ಹೋರಾಟಗಳು, ಮಧ್ಯಪ್ರವೇಶ

ದಲಿತರ ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ತಾರತಮ್ಯ ವಿರೋಧಿಸಿ

- ಕಂಬಾಲಪಲ್ಲಿ, ಮರಕುಂಬಿ, ಮುಂತಾದ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳ ಹೋರಾಟಕ್ಕೆ ಬೆಂಬಲ
- ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಮುಂತಾದ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳ ಹೋರಾಟಕ್ಕೆ ಬೆಂಬಲ
- ಮಡೆಮಡೆ ಸ್ನಾನ ವಿರೋಧಿಸಿ ಚಳುವಳಿಗೆ ಬೆಂಬಲ

ಬೆಂಗಳೂರು ಗಾರ್ಮೆಂಟ್ಸ್ ಕಾರ್ಮಿಕರ ಐತಿಹಾಸಿಕ ಹೋರಾಟ

- ಪಿ.ಎಫ್ ಹಿಂಪಡೆಯಲು ನಿರ್ಬಂಧ ವಿಧಿಸಿದ ಕೇಂದ್ರ ಸರಕಾರದ ಏಕಪಕ್ಷೀಯ ತೀರ್ಮಾನ ಹಿಂಪಡೆಯಲು ಏಪ್ರಿಲ್‌ನಲ್ಲಿ 18–19 2016 ರ ಕ್ಷಿಪ್ರ ಮುಷ್ಕರಕ್ಕೆ ಬೆಂಬಲ
- ಬಂಧಿತ ಕಾರ್ಮಿಕರಿಗೆ ಕಾನೂನು ನೆರವು

ರಸ್ತೆ ಸಾರಿಗೆ ನೌಕರರ ಐತಿಹಾಸಿಕ ಮುಷ್ಕರಗಳು

- ಮೂರು ಐತಿಹಾಸಿಕ ಸಾರಿಗೆ ಮುಷ್ಕರಗಳನ್ನು ಸಂಘಟಿಸುವಲ್ಲಿ ಬೆಂಬಲ ಮತ್ತು ಪರಿಣಾಮಕಾರಿ ಮಧ್ಯಪ್ರವೇಶ
- ಏಪ್ರಿಲ್ 30, 2015 ರಾಷ್ಟ್ರವ್ಯಾಪಿ ಸಾರಿಗೆ ಮುಷ್ಕರ
- ಜುಲೈ 25, 2016 ರಿಂದ ಅನಿರ್ಧಿಷ್ಟ ಮುಷ್ಕರ
- ಸೆಪ್ಟೆಂಬರ್ 2, 2016 ರ ಸಾರ್ವತ್ರಿಕ ಮುಷ್ಕರ

ಭದ್ರಾವತಿಯ ವಿಐಎಸ್‌ಎಲ್ ಖಾಸಗೀಕರಣ ವಿರೋಧಿಸಿ 40 ದಿನಗಳ ಹೋರಾಟಕ್ಕೆ ಬೆಂಬಲ

ಬಾಷ್ ಕಂಪನಿ ಕಾರ್ಮಿಕರ ಮುಷ್ಕರ

- ಆಡುಗೋಡಿ ಘಟಕದ ಕಾರ್ಮಿಕರ 16 ಸೆಪ್ಟೆಂಬರ್ 2014ರಿಂದ 88 ದಿನಗಳ ಮುಷ್ಕರ
- ಅಕ್ಟೋಬರ್ 13 ರಂದು ಮೈಕೋ ಕಾರ್ಮಿಕರು ಮುಖ್ಯಮಂತ್ರಿ ಮನೆಗೆ ಮುತ್ತಿಗೆ
- ಡಿಸೆಂಬರ್ 8, 2014 ರಂದು ಧೀರ್ಘಕಾಲಿಕ ವೇತನ ಒಪ್ಪಂದದ

ಹಲವು ಹೋರಾಟಗಳಿಗೆ ಸೌಹಾರ್ದ ಬೆಂಬಲ

ರಾಯಚೂರಿನ ಸುರಾನ ಕಾರ್ಮಿಕರ, ಬಿಬಿಎಂಪಿಸಿ ಕಂಪ್ಯೂಟರ್ ಆಪರೇಟರ್‌ಗಳು, ಹಾಸ್ಟೇಲ್ ನೌಕರರ, 108 ನೌಕರರು, ಕಂಪೂಟರ್ ಆಪರೇಟರ್‌ಗಳ, ಸರಕಾರಿ ನೌಕರರು, ಪೋಲಿಸರು ಇತರೆ ಗುತ್ತಿಗೆ ಕಾರ್ಮಿಕರ, ಭವಿಷ್ಯನಿಧಿ ಮಿತಿ ಹೆಚ್ಚಳಕ್ಕಾಗಿ, ಖಚಿತ ಪಿಂಚಣಿಗಾಗಿ, ಇಎಸ್‌ಐ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ನಡೆಸಿದ ಹಲವು ಹೋರಾಟಗಳಿಗೆ ಬೆಂಬಲ

ಮಹಾದಾಯಿ ಹೋರಾಟಕ್ಕೆ ಸೌಹಾರ್ದ ಬೆಂಬಲ



26.05.2015 : ಮೋದಿ ಸರ್ಕಾರದ ಒಂದು ವರ್ಷ : ಹಾಸನದಲ್ಲಿ ಪ್ರತಿಭಟನೆ



ಜೂನ್ 5, 2015 ಧಾರವಾಡ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ



05.12.2014 : ರಾಷ್ಟ್ರೀಯ ಪ್ರತಿಭಟನಾ ದಿನ ರಾಜಭವನ್ ಚಲೋ

ಜಾಗತೀಕರಣದ ಯುಗದಲ್ಲಿ ಕಾರ್ಮಿಕ ಸಂಘಗಳನ್ನು ಕಟ್ಟುವ ಸವಾಲುಗಳು

ಮೀನಾಕ್ಷಿಸುಂದರಂ

ಸಂಘಟನೆಯ ಅಂತರ್ಗತವಾದ ಸವಾಲುಗಳು ಹಾಗು ತೀವ್ರವಾಗಿ ಬದಲಾಗುತ್ತಿರುವ ಉದ್ಯೋಗದ ಸ್ವರೂಪಗಳು ನಗರ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಸಂಘಟಿತರಾಗದೇ ಇರುವ ಕಾರ್ಮಿಕರನ್ನು ಸಂಘಟನೆಮಾಡಲು ಮತ್ತಷ್ಟು ಹೊಸ ಪ್ರಯೋಗಗಳು ಅಗತ್ಯವಿದೆ. ಕಾರ್ಮಿಕ ಮಾಲಿಕ ಸಂಬಂಧವಿಲ್ಲದೆ ದೈಹಿಕ ದುಡಿಮೆಯಲ್ಲಿ ತೊಡಗಿರುವ ಕಾರ್ಮಿಕರು, ಹಂಗಾಮಿ ಸ್ವರೂಪದಲ್ಲಿ ದಿನಗೂಲಿ ಅಥವಾ ಕಾಲ ನಿಯಮಿತ ಬಹುರೂಪಿ ಕೂಲಿ ಶ್ರಮದಲ್ಲಿ ತೊಡಗುವ ಕಾರ್ಮಿಕರು, ಕಿರು ಬಂಡವಾಳ ಹೂಡಿಕೆ ಮಾಡಿ ತಮ್ಮ ದೈಹಿಕ ಶ್ರಮದ ಮೂಲಕ ಆದಾಯ ಗಳಿಸುವ ಶ್ರಮಿಕ ಜನರನ್ನು ವಾಸಸ್ಥಳಗಳ ಆಧಾರದಲ್ಲಿ ಸಾಮಾನ್ಯ ಕಾರ್ಮಿಕ ಸಂಘಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಂಘಟಿಸಲು ಯೋಜನೆಗಳನ್ನು ರೂಪಿಸಬೇಕು. ಈ ವಾಸಸ್ಥಳ ಆಧಾರಿತ ಸಂಘಗಳನ್ನು ತಾಲೂಕು ಹಾಗು ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಲು ಪ್ರಯತ್ನ ಮಾಡಬೇಕು. ಇದರಿಂದ ಸಿಐಟಿಯು ಸಂಘಟನೆಯ ಅಖಿಲ ಭಾರತ ಸಮ್ಮೇಳನದ ಕರೆಯಾದ "ತಲುಪದೆ ಇರುವ ಕಾರ್ಮಿಕರನ್ನು ತಲುಪಿ" ಎಂಬ ಘೋಷಣೆಯ ಸಮರ್ಪಕ ಜಾರಿಯೂ ಸಾಧ್ಯವಾಗುತ್ತದೆ.



ಸಂಪತ್ತನ್ನು ಸೃಷ್ಟಿ ಮಾಡುವ ದುಡಿಯುವ ವರ್ಗವನ್ನು ಬೆಳವಣಿಗೆಯ ಫಲ ಅನುಭವಿಸುವ ಹಕ್ಕುಗಳಿಂದ ವಂಚನೆ ಮಾಡುವ ಹುನ್ನಾರವೇ ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸುವ ಪ್ರಯತ್ನಗಳು. ಕಳೆದ ಎರಡುವರೆ ದಶಕಗಳಿಂದ ಪ್ರಾರಂಭವಾಗಿ ಮೋದಿ ಸರ್ಕಾರದ ಅವಧಿಯಲ್ಲಿ ವೇಗ ಹೆಚ್ಚಿಸಿಕೊಂಡಿದೆ.

ಈ ಅವದಿಯಲ್ಲಿ ಜಾರಿಮಾಡಲಾದ ಆರ್ಥಿಕ ನೀತಿಗಳಿಂದಾಗಿ ಭಾರತ ದೇಶದಲ್ಲಿನ ಸಾಮಾಜಿಕ ವರ್ಗ ಸಂಯೋಜನೆಯಲ್ಲಿ ಗುರುತರವಾದ ಬದಲಾವಣೆಗಳು ಆಗುತ್ತಿದೆ. ಕೃಷಿ ರಂಗದಲ್ಲಿ ಭೂಮಿಯ ಜತೆಗಿನ ದುಡಿಮೆ ಸಂಬಂಧಗಳನ್ನು ಕತ್ತರಿಸುವುದರಲ್ಲಿ ಕೈಗಾರಿಕಾ ಬಂಡವಾಳದ ಯಶಸ್ಸನ್ನು ಈ ಕೆಳಗಿನ ಅಂಕಿ-ಅಂಶಗಳು ಸ್ಪಷ್ಟಪಡಿಸುತ್ತವೆ.

ಜನಗಣತಿಯ ಆಧಾರದಲ್ಲಿ 1991ರಲ್ಲಿ ದೇಶದ ಒಟ್ಟು ಬೆಳೆಗಾರರ (ರೈತರ) ಸಂಖ್ಯೆ 11 ಕೋಟಿ ಇತ್ತು. ಈ ಸಂಖ್ಯೆಯು 2001 ರ ವೇಳೆಗೆ 10 ಕೋಟಿ 30 ಲಕ್ಷವಾಗಿತ್ತು 2011 ರಲ್ಲಿ 9 ಕೋಟಿ 85 ಲಕ್ಷವಾಗಿದೆ. ಈ ಅವದಿಯಲ್ಲಿ ಕೃಷಿಕೂಲಿಗಾರರು, ಸಣ್ಣ ರೈತರು ಒಳಗೊಂಡು ಕೃಷಿಯ ಮೇಲೆ ಅವಲಂಬಿಸಿರುವ ಭಾರತೀಯರ ಸಂಖ್ಯೆ 26 ಕೋಟಿ 30 ಲಕ್ಷಕ್ಕೆ ಇಳಿದಿದೆ. ಅಂದರೇ ಕಳೆದ ಇಪ್ಪತ್ತು ವರ್ಷಗಳಲ್ಲಿ ಪ್ರತಿ ದಿನವು ಸುಮಾರು 2035 ಜನ ಭಾರತೀಯರು ಕೃಷಿ ಕೆಲಸಗಳನ್ನು ತ್ಯಜಿಸುತ್ತಿದ್ದಾರೆ. ಅದೇ ರೀತಿಯಲ್ಲಿ ಪಾರಂಪರಿಕ ಕರಕಸಬು ಕೆಲಸಗಳಲ್ಲಿ ತೊಡಗಿದ್ದವರು ಕೋಟ್ಯಾಂತರ ಜನ ಆಧುನಿಕ ಯಂತ್ರಗಳ ಬಳಕೆಯ ಕಾರಣದಿಂದ ಅಂತಹ ಕಸಬುಗಳಿಂದ ಹೊರಗುಳಿಯುತ್ತಿದ್ದಾರೆ. ಅಂದರೆ ಒಟ್ಟಾರೆ ದೇಶದ ಗ್ರಾಮೀಣ ಜನತೆ ಕೋಟಿಗಟ್ಟಲೆಯಲ್ಲಿ ಜೀವನ ನಡೆಸಲು ಬಂಡವಾಳಗಾರರಿಂದ ಪಡೆಯುವ ಕೂಲಿಯನ್ನು ಮಾತ್ರವೇ ಅವಲಂಬಿಸಿ ಬದುಕುವ ಸ್ಥಿತಿಗೆ ಒಳಗಾಗುತ್ತಿದ್ದಾರೆ. ಉತ್ಪಾದನೆಯ ಸಲಕರಣೆಗಳ ಮೇಲೆ ಯಾವುದೇ ಒಡೆತನವಿಲ್ಲದೆ, ಪಾರಂಪರಿಕವಾಗಿ ಪಡೆದ ಕುಶಲತೆಯನ್ನು ಬಳಸಲಾರದೆ, ಶ್ರಮ ಶಕ್ತಿಯನ್ನು ಮಾರಿಕೊಂಡರೆ ಮಾತ್ರವೇ ಬದುಕು ನಡೆಸಲು ಸಾಧ್ಯ ಅನ್ನುವಂತಹ ದುಡಿಯುವ ವರ್ಗವಾಗಿ ಬೆಳೆಯುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಪೂರೈಕೆಯಾಗುವ ಶ್ರಮಶಕ್ತಿಗೆ ಅನುಗುಣವಾಗಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ. ಉದ್ಯೋಗ ರಹಿತವಾದ ಅರ್ಥಿಕ ಬೆಳವಣಿಗೆಯನ್ನು ದೇಶವು ನೋಡುತ್ತಿದೆ. 80ರ ದಶಕಗಳಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆ ಹಾಗು ಉದ್ಯೋಗ ಅವಕಾಶಗಳ ಪ್ರಮಾಣವು ಪ್ರತಿ 7ಲಕ್ಷ ರೂಪಾಯಿಗೆ ಒಂದು ಉದ್ಯೋಗ ಎಂಬ ರೀತಿಯಲ್ಲಿತ್ತು. 2015-16 ರಲ್ಲಿ 4.75 ಕೋಟಿಗೆ ಒಂದು ಉದ್ಯೋಗ ಎಂದು ಬದಲಾಗಿದೆ.

ಜ್ಞಾನ-ಬುದ್ಧಿ ಶಕ್ತಿಯಿಂದ ಹಾಗು ದೈಹಿಕ ದುಡಿಮೆ ಮೂಲಕ ಉತ್ಪಾದನಾ ಹಾಗು ಸೇವಾವಲಯಗಳಲ್ಲಿ, ರಸ್ತೆ ಕಟ್ಟಡ ನಿರ್ಮಾಣ, ಬೀದಿ ಬದಿ ವ್ಯಾಪಾರ, ವಾಹನ ಚಾಲನೆ, ಗೃಹ ಕೆಲಸ ಮುಂತಾದ ಕೆಲಸಗಳಲ್ಲಿ ಮೌಲ್ಯ ಹೆಚ್ಚಳ ಹಾಗು ಲಾಭದ ಸೃಷ್ಟಿಗೆ ಕೊಡುಗೆ ನೀಡುತ್ತಿದ್ದಾರೆ.

ಬೃಹತ್ ಸಂಖ್ಯೆಯಲ್ಲಿ ಬೆಳೆಯುತ್ತಿರುವ ದುಡಿಯುವ ವರ್ಗ ಸಂಘಟಿತರಾದರೆ ಆಗಬಹುದಾದ ಪರಿಣಾಮಗಳನ್ನು ವಿದೇಶಿ ಹಾಗು ಸ್ವದೇಶಿ ಕಾರ್ಪೊರೇಟ್ ಬಂಡವಾಳವು ಚೆನ್ನಾಗಿ ಅರ್ಥಮಾಡಿ ಕೊಂಡಿದೆ.

ಆದ್ದರಿಂದಲೇ ಈ ವರ್ಗವು ಸಂಘಟಿತವಾಗುವುದನ್ನು ತಡೆಯುವುದು ಸರ್ಕಾರದ ನೀತಿಗಳ ಪ್ರಮುಖ ಗುರಿಯಾಗಿದೆ. ಸತತವಾಗಿ ಯಾವುದೇ ಅಡೆತಡೆಯಿಲ್ಲದೆ ಉಲ್ಲಂಘನೆ ಆಗುತ್ತಿರುವ ಈಗಿನ ಕಾರ್ಮಿಕ ಕಾನೂನುಗಳನ್ನು ಬದಲಾವಣೆ ಮಾಡಲು ಪ್ರಯತ್ನ ನಡೆಯುತ್ತಿದೆ. ಮಾಲಿಕರು ಯಾವುದೇ ಮುಜುಗರವಿಲ್ಲದೆ ಮಾಡುತಿದ್ದ ಕಾನೂನು ಉಲ್ಲಂಘನೆಗಳನ್ನೇ ಕಾನೂನುಬದ್ಧಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ.

ಸಂಘ ರಚನೆ ಮಾಡುವ ಹಕ್ಕಿನ ಮೇಲೆ ದಾಳಿ:

ಕಾರ್ಮಿಕರು ಸಂಘಟಿತರಾಗುವುದನ್ನು ಪ್ರೋತ್ಸಾಹಿಸದೆ, ಹಾಗು ಕಾರ್ಮಿಕರ ಸಂಘಟಿತ ಶಕ್ತಿಯನ್ನು ಗಣನೆಗೆ ತೆಗೆದುಕೊಳ್ಳದೆ ಯಾವುದೇ ಪ್ರಜಾಪ್ರಭುತ್ವ ಸಮಾಜವು ಆರೋಗ್ಯಕರ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಲ್ಲ. ಆದರೆ ಮಾಲಿಕರಿಗೆ "ವ್ಯಾಪಾರವನ್ನು ಸುಲಲಿತಗೊಳಿಸುವ" (ಈಸ್ ಆಫ್ ಬಿಸಿನೆಸ್) ಖಾತ್ರಿ ನೀಡುವ ಸಲುವಾಗಿ ಕಾರ್ಮಿಕರು ತಮ್ಮ ಆಯ್ಕೆಯ ಅನುಸಾರ ಸಂಘಟನೆ ರಚಿಸಿಕೊಳ್ಳುವ ಹಕ್ಕಿನ ಮೇಲೆ ಪ್ರಹಾರ ಮಾಡಲಾಗುತ್ತಿದೆ. ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡಲು ಮಾಲಿಕರು ನಿರಾಕರಿಸುತ್ತಿದ್ದರು. ಕರ್ನಾಟಕ ರಾಜ್ಯ ಹಾಗು ದೇಶದಲ್ಲಿ ಖಾಸಗಿ ಬಹುರಾಷ್ಟ್ರೀಯ ಘನ ಕೈಗಾರಿಕೆಗಳಲ್ಲಾಗಲಿ, ಮಧ್ಯಮ ಹಾಗು ಸಣ್ಣ ಕೈಗಾರಿಕೆಗಳಲ್ಲಾಗಲಿ ಕಾರ್ಮಿಕ ಸಂಘಕ್ಕೆ ಮಾನ್ಯತೆ ಪಡೆಯಲು ಕಾರ್ಮಿಕರು ತೀವ್ರವಾದ ಹೋರಾಟಗಳನ್ನು ಮಾಡುತ್ತಿದ್ದಾರೆ. ಸಂಘಟನೆ ರಚನೆಮಾಡಿದ ಕಾರಣಕ್ಕಾಗಿ ಕ್ರಿಮಿನಲ್ ಮೊಕ್ಕದಮೆಗಳಿಗೆ ಗುರಿಯಾಗಿ ಜೈಲು ವಾಸ ಅನುಭವಿಸುತ್ತಿರುವ ಹಾಗು ಕೆಲಸದಿಂದ ವಜಾ, ಅಮಾನತ್ತು, ಗೂಂಡಾಗಳ ದಾಳಿಗೆ ಕಾರ್ಮಿಕರು ಒಳಗಾಗುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಸಂಘದ ಮಾನ್ಯತೆಗೆ ಹಾಗು ಸಂಘ ರಚನೆ ಮಾಡಿಕೊಳ್ಳುವ ಹಕ್ಕನ್ನು ಉಳಿಸಿಕೊಳ್ಳಲು ನಡೆದ ಪ್ರಮುಖ ಹೋರಾಟ ಬಿ.ಪಿ.ಎಲ್ ಕಾರ್ಮಿಕರ ಹೋರಾಟ. ಬಂಡವಾಳ ಹಾಗು ದುಡಿಮೆಯ ನಡುವಿನ ಸಮರಶಿಲ ಸಂಘರ್ಷಕ್ಕೆ ಬಿಪಿಎಲ್ ಕಾರ್ಮಿಕರ ಹೋರಾಟ ಒಂದು ಉತ್ತಮ ಉದಾಹರಣೆ. ಹೋರಾಟದ ಮುಂಚೂಣಿ ನಾಯಕರಾದ ಕಾಂ. ಆರ್.ಶ್ರೀನಿವಾಸ್ ಹಾಗು ಕಾಂ. ಟಿ.ಕೆ.ಎಸ್ ಕುಟ್ಟಿಯವರನ್ನು ಒಳಗೊಂಡಂತೆ ಐದು ಜನ ಮುಖಂಡರು ಒಂದುವರೆ ದಶಕಗಳಿಗೂ ಹೆಚ್ಚು ಸೆರೆವಾಸ ಅನುಭವಿಸಬೇಕಾಯಿತು. ಅದೇ ರೀತಿಯಲ್ಲಿ ಪೋರೆಸ್ಸೆಸ್ ಕಾರ್ಮಿಕರ ಹೋರಾಟ, ಟಯೋಟ ಕಿರ್ಲೋಸ್ಕರ್ ಹಾಗು ಅದರ ಉಪ ಘಟಕಗಳಿಗೆ ಸೇರಿದ ಕಾರ್ಮಿಕರು ನಡೆಸಿದ ಹೋರಾಟ ಒಳಗೊಂಡಂತೆ ರಾಜ್ಯಾದ್ಯಂತ ಹಲವು ಕಾರ್ಖಾನೆಗಳ ಕಾರ್ಮಿಕರು ಹಾಗೂ ಗುತ್ತಿಗೆ ಕಾರ್ಮಿಕರು ನಡೆಸಿದ ಹೋರಾಟಗಳ ಅನುಭವಗಳು ಮಾಲಿಕರ ಸಂಘ-ವಿರೋಧಿ ಧೋರಣೆಗಳಿಗೆ ಮಾತ್ರವಲ್ಲ, ಸರ್ಕಾರಿ ಯಂತ್ರವನ್ನು ದೇಶದ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಮೇಲೆ ದಾಳಿಮಾಡಲು ಬಳಸಿಕೊಳ್ಳಲು ಆಳುವ ವರ್ಗಗಳಿಗೆ ಇರುವ ಸಾಧ್ಯತೆಯನ್ನು ಸಾರುವ ನಿದರ್ಶನಗಳಾಗಿವೆ.

ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐ.ಎಲ್.ಓ) ಸಂಘಟನೆ ರಚಿಸಿಕೊಳ್ಳುವ ಹಾಗು ಮಾನ್ಯತೆ ನೀಡುವ ಕುರಿತು ಮಾಡಿದ ತ್ರಿಪಕ್ಷೀಯ ತೀರ್ಮಾನಗಳಲ್ಲಿ ಭಾರತವು ಕೂಡ ಭಾಗಿಯಾಗಿದ್ದರೂ ಕೂಡ, ಈ ಹಕ್ಕನ್ನು ಮತ್ತಷ್ಟು ವಿಸ್ತಾರಗೊಳಿಸುವ ಬದಲು ಮೊಟಕುಗೊಳಿಸುವ ಪ್ರಯತ್ನಗಳು ಮಾತ್ರವೇ ಉದಾರೀಕರಣದ ನೀತಿಗಳು ಜಾರಿಯಾದ ಈ 25 ವರ್ಷಗಳಲ್ಲಿ ನಡೆದಿದೆ. ಯಾವುದೇ 7 ಕಾರ್ಮಿಕರು ಕಾರ್ಮಿಕ ಸಂಘಟನೆಯನ್ನು ರಚನೆಮಾಡಿಕೊಳ್ಳಲು ಹಾಗು ನೊಂದಣಿ ಮಾಡಲು ಅರ್ಜಿ ಸಲ್ಲಿಸಬಹುದು ಎಂಬ ಕಾರ್ಮಿಕ ಸಂಘಗಳ ನಿಯಮಕ್ಕೆ ತಿದ್ದುಪಡಿ ತರಲಾಗಿದೆ. ಈ ತಿದ್ದುಪಡಿಯು, ಯಾವುದೇ ಕೈಗಾರಿಕೆಯಲ್ಲಿನ ಕನಿಷ್ಟ 10% ಅಥವಾ 100 ಜನರು (ಇದರಲ್ಲಿ ಯಾವುದು ಕಡಿಮೆಯೋ ಆ ಸಂಖ್ಯೆಯ ಕಾರ್ಮಿಕರು) ಸದಸ್ಯರಾಗಿದ್ದಲ್ಲಿ ಮಾತ್ರ ಸಂಘಟನೆ ರಚನೆಮಾಡಿಕೊಳ್ಳಲು ಸಾಧ್ಯ ಎಂಬ ನಿರ್ಬಂಧವನ್ನು ತರಲಾಯಿತು.

ಈ ಬದಲಾವಣೆಯನ್ನು ತೋರಿಸಿ ಕೈಗಾರಿಕಾ ಪ್ರದೇಶಗಳಲ್ಲಿ, ಜಿಲ್ಲಾ ಅಥವಾ ಸ್ಥಳೀಯ ಮಟ್ಟದ ಸಾಮಾನ್ಯ ಕಾರ್ಮಿಕ ಸಂಘಟನೆಗಳನ್ನು ರಚನೆ ಮಾಡಿ ನೊಂದಾಯಿಸಲು ಅವಕಾಶವನ್ನು ನಿರಾಕರಿಸಲಾಗುತ್ತಿದೆ. ವಿವಿದ ಕೈಗಾರಿಕೆಗಳಿಗೆ ಸೇರಿದ ಕಾರ್ಮಿಕರು ಸ್ಥಳೀಯ ಮಟ್ಟದಲ್ಲಿ ಜನರಲ್ ಕಾರ್ಮಿಕರ ಸಂಘಟನೆಗಳನ್ನು ಮಾಡಲು ಅವಕಾಶವಿಲ್ಲದಂತಾಗಿದೆ. ಆದರೆ ಈ ನಿರ್ಬಂಧವೂ ಮಾಲಿಕರಿಗೆ ಸಮಾಧಾನ ತರಲಿಲ್ಲ. ಆದ್ದರಿಂತಲೇ ಈಗಿನ ಸರ್ಕಾರ ತರಲು ಉದ್ದೇಶಿಸಿರುವ ತಿದ್ದುಪಡಿಯು ಇನ್ನಷ್ಟು ನಿರ್ಬಂಧಗಳನ್ನು ಹೇರುತ್ತಿದೆ. ಕಾರ್ಖಾನೆ ಹಾಗು ಸಂಸ್ಥೆಯ ಮಟ್ಟದಲ್ಲಿನ ಕಾರ್ಮಿಕ ಸಂಘಗಳಲ್ಲಿ, ಉದ್ಯೋಗಿ ಅಲ್ಲದಿರುವ ಹೊರಗಡೆಯ ವ್ಯಕ್ತಿಗಳನ್ನು ಸಂಘದಲ್ಲಿ ಗೌರವ ಸದಸ್ಯರನ್ನಾಗಿ ಮಾಡಲು ಇರುವ ಅವಕಾಶವನ್ನು ರದ್ದುಗೊಳಿಸಲು ಸೂಚನೆ ನೀಡಲಾಗಿದೆ. ಅಂದರೆ, ಕಾರ್ಮಿಕರು ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳಿಗೆ ಸಂಘವನ್ನು ಸಂಯೋಜನೆ ಮಾಡುವ ಅವಕಾಶವನ್ನು ಪರೋಕ್ಷವಾಗಿ ತಡೆಹಿಡಿಯುವ ಪ್ರಯತ್ನ ಮಾತ್ರವಲ್ಲ ಇದು. ಕಾರ್ಮಿಕರು ಒಂದು ವರ್ಗವಾಗಿ ಸಂಘಟಿತರಾಗುವುದನ್ನು ತಡೆಯುವ ಹುನ್ನಾರವಾಗಿದೆ.

ಗುತ್ತಿಗೀಕರಣ, ಅಸಂಘಟಿತರ ಸಂಘಟನೆ

ಮತ್ತೊಂದು ಪ್ರಮುಖವಾದ ಬೆಳವಣಿಗೆಯೆಂದರೆ, ವ್ಯವಸ್ಥಿತವಾಗಿ ಮಾಲಿಕ-ಕಾರ್ಮಿಕ ಎಂಬ ಸಂಬಂದಗಳನ್ನು ಕಣ್ಮರೆ ಮಾಡುತ್ತಿರುವುದು. ಉತ್ಪಾದನಾ ಪ್ರಕ್ರಿಯೆಗಳನ್ನು ಹೊರಗುತ್ತಿಗೆ ಮಾಡುವುದರ ಮೂಲಕ ವೆಚ್ಚ ಕಡಿಮೆ ಮಾಡಿಕೊಳ್ಳುವ ನೆಪದಲ್ಲಿ ಕಾರ್ಮಿಕರ ಮೇಲೇ ತೀವ್ರ ಶೋಷಣೆಯನ್ನು ಕಾರ್ಪೋರೇಟ್ ಕಂಪನಿಗಳು ಮಾಡುವಾಗಲೇ, ಸರಕುಗಳನ್ನು ಉತ್ಪಾದನೆ ಮಾಡುವ ದುಡಿಮೆಗೂ ಬಂಡವಾಳಕ್ಕೂ ನೇರ ಸಂಬಂಧವಿಲ್ಲದಂತೆ ಮಾಡಲಾಗುತ್ತಿದೆ. ಜತೆಗೆ ಗುತ್ತಿಗೆ ಕಾರ್ಮಿಕ ಪದ್ಧತಿ ವ್ಯಾಪಕವಾಗುತ್ತಿರುವುದರಿಂದ ಕೆಲಸದ ಭದ್ರತೆ ಇಲ್ಲದೆ ದುಡಿಯುವ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಒಬ್ಬನೇ ಕಾರ್ಮಿಕ ಹಲವು ಕೆಲಸಗಳನ್ನು ಮಾಡಿದರೇ ಮಾತ್ರ ಬದುಕಲು ಸಾಧ್ಯವೆಂಬ ಪರಿಸ್ಥಿತಿಯು ವ್ಯಾಪಕವಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಕಾರ್ಮಿಕನಾಗಿಯೂ ಹಾಗು ಇತರೆ ಕುಶಲ ಕಾರ್ಮಿಕನಾಗಿಯೂ ಏಕ ಕಾಲದಲ್ಲಿ ಕೆಲಸ ಮಾಡುವ ಅಥವಾ ಸಿಕ್ಕ ಕೆಲಸ ನಿರ್ವಹಿಸುವ ಕಾರ್ಮಿಕರು ಹೆಚ್ಚಾಗುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಏಕಕಾಲದಲ್ಲಿ ಆಗುತ್ತಿರುವ ಈ ಉದ್ಯೋಗ ಸಂಬಂಧಗಳಲ್ಲಿನ ಬದಲಾವಣೆಗಳನ್ನು ಅರ್ಥಮಾಡಿಕೊಂಡು ಸಂಘಟನಾ ವ್ಯೂಹ ಹಾಗು ಸ್ವರೂಪಗಳನ್ನು ರೂಪಿಸಲು ಕಾರ್ಮಿಕ ಚಳುವಳಿ ಗಂಭೀರವಾಗಿ ಪ್ರಯತ್ನಿಸಬೇಕು.

ಬಟ್ಟೆ, ಗಾರ್ಮೆಂಟ್, ಎಲೆಕ್ಟ್ರಾನಿಕ್ಸ್ ಮುಂತಾದ ಖಾಸಗಿ ಹಾಗು ಸಾರ್ವಜನಿಕ ಉದ್ದಿಮೆಗಳು ಒಳಗೊಂಡ ಸಂಘಟಿತ ಸ್ವರೂಪದ ಉದ್ಯೋಗಗಳಲ್ಲಿ ಅಸಂಘಟಿತರಾಗಿರುವ ಕಾರ್ಮಿಕರನ್ನು ಸಂಘಟಿಸಲು ಮಾಡಿದ ಪ್ರಯತ್ನ ಮತ್ತು ನಡೆಸಿದ ಹೋರಾಟಗಳು ಹಾಗು ಅದರ ಅನುಭವಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಲು ಕಾರ್ಮಿಕ ಚಳುವಳಿ ಪ್ರಯತ್ನಿಸಬೇಕು. ಅದೇ ರೀತಿಯಲ್ಲಿ ಸರ್ಕಾರಿ ಸೇವೆಯಲ್ಲಿ ಗುತ್ತಿಗೆ ಕಾರ್ಮಿಕರನ್ನಾಗಿ ತೊಡಗಿಸಿಕೊಂಡಿರುವ ಗ್ರಾಮ ಪಂಚಾಯಿತಿ, ನಗರ ಹಾಗು ಪುರಸಭೆಗಳಲ್ಲಿನ ಕಾರ್ಮಿಕರು, ಅಂಸಂಘಟಿತ ವಲಯದಲ್ಲಿನ ಬೀಡಿ, ಹಮಾಲಿ, ಕಟ್ಟಡ, ಆಟೋ ಚಾಲಕರು, ಖಾಸಗಿ ವಾಹನ ಚಾಲಕರು, ಸರ್ಕಾರಿ ಯೋಜನೆಗಳಲ್ಲಿ ಕೆಲಸಮಾಡುವ ಸ್ಕೀಂ ಕಾರ್ಮಿಕರು ಮುಂತಾದ ಹಲವು ಅಸಂಘಟಿತ ಕಾರ್ಮಿಕರ ಚಳುವಳಿಗಳು ಹಾಗು ಅದರ ಅನುಭವಗಳನ್ನು ಗ್ರಹಿಸಲೇ ಬೇಕು. ಕಾರ್ಮಿಕ ಚಳುವಳಿ ಹಾಗು ಸಂಘಟನೆಯ ಸ್ವರೂಪದಲ್ಲಿ ತುರ್ತಾಗಿ ಮಾಡಲೇ ಬೇಕಾದ ಬದಲಾವಣೆಗಳು ಹಾಗು ಅವುಗಳನ್ನು ಸಂಘಟನೆಯ ದಿನನಿತ್ಯದ ಕೆಲಸಗಳಲ್ಲಿ ಜಾರಿ ಮಾಡುವಾಗ ಎದುರಾಗುವ ಸವಾಲುಗಳನ್ನು ಗುರುತಿಸುವುದು ಅಗತ್ಯವಾಗಿದೆ.

ಕಾರ್ಖಾನೆ ಅಥವಾ ಸಂಸ್ಥೆಗಳ ಆಧಾರದಲ್ಲಿ ಪ್ರತ್ಯೇಕವಾಗಿ ಸಂಘಟಿತರಾಗುವಾಗ ಪ್ರಮುಖ ಕಾರ್ಯಕರ್ತರನ್ನು ಬಲಿಪಶು ಮಾಡುವ ಕ್ರಮಗಳನ್ನು ಮಾಲಿಕರು ತೆಗೆದುಕೊಳ್ಳುತ್ತಾರೆ. ಸಂಘಟನೆಗೆ ಮಾನ್ಯತೆ ಪಡೆಯುವ ಸಮರಶೀಲ ಹೋರಾಟಗಳಲ್ಲಿ ಸಂಘಟನೆಯನ್ನು ಕ್ರೋಢೀಕರಣ

ಪುಟ 18 ಕ್ಕೆ

ಎಸ್. ವರಲಕ್ಷ್ಮಿ

1994ರಲ್ಲಿ ಸ್ಥಾಪಿಸಿದ ಅಂಗನವಾಡಿ ನೌಕರರ ಸಂಘಟನೆ ಹಲವಾರು ಹೋರಾಟಗಳ ನಂತರ ಈಗ ರಾಜ್ಯದಲ್ಲಿ 127 ಯೋಜನೆಗಳಲ್ಲಿ ಸದಸ್ಯತ್ವ ಹೊಂದಿದೆ. 1995ರಲ್ಲಿ 300 ಜನ ಸದಸ್ಯತ್ವ ಪ್ರಾರಂಭವಾಗಿ ಇಂದು 50,100 ಸದಸ್ಯತ್ವ ಮಾಡಿಸಲು ಸಾಧ್ಯವಾಗಿದೆ. ಅಂದಿನಿಂದ ಇಂದಿನ ವರೆಗೂ ಅತ್ಯಂತ್ಯ ಬಲಿಷ್ಟವಾಗಿ, ನಿರಂತರವಾದ ಮತ್ತು ದೀರ್ಘಕಾಲಿಕ ಹೋರಾಟಗಳನ್ನು ಸತತವಾಗಿ ನಡೆಸಿದೆ.
2004ರಲ್ಲಿ ಸ್ಥಾಪಿಸಿದ ಬಿಸಿಯೂಟ ನೌಕರರ ಸಂಘಟನೆಗೆ ಈ ನೌಕರರ ಬೇಡಿಕೆಗಳನ್ನಿಟ್ಟುಕೊಂಡು ಸತತವಾಗಿ ಹಲವು ಹಂತದ ಹೋರಾಟಗಳನ್ನು ಸಂಘಟಿಸುತ್ತಾ ಹಲವು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿದೆ. ಈಗ 'ಹಣ ಕೊಡಿರಿ, ಸೇವೆ ಪಡೆಯಿರಿ' ಎಂದು ಸರ್ಕಾರ ಜನತೆಯ ಕಲ್ಯಾಣದ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಇಂತಹ ಸರ್ಕಾರದ ಉದಾರೀಕರಣ ನೀತಿಗಳ ವಿರುದ್ಧ ಹೋರಾಡಬೇಕಾಗಿದೆ.

ಕರ್ನಾಟಕದಲ್ಲಿ ಸ್ಕೀಮ್ ನೌಕರರು

"ಕಲ್ಯಾಣ ಭಾರತ"ದ ಭಾಗವಾಗಿ ಭಾರತ ಸರ್ಕಾರ ತನ್ನ ಪ್ರಜೆಗಳಿಗೆ ಆಹಾರ, ಆರೋಗ್ಯ, ವಸತಿ, ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸುವ ಬದಲಿಗೆ ಇವನ್ನೆಲ್ಲ ಕಲ್ಯಾಣ ಕಾರ್ಯಕ್ರಮಗಳ ಭಾಗವಾಗಿಯೇ ನೋಡಲಾಗುತ್ತದೆ. ಇದರ ಆಧಾರದಲ್ಲಿಯೇ ಮುಖ್ಯವಾಗಿ ICDS, NRHM (ಆಶಾ) ಬಿಸಿಯೂಟ, ಏಡ್ಸ್, ನ್ಯಾಕೋ, ಕ್ಷಯಕೇಂದ್ರಗಳು, ಶಿಕ್ಷಣ ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನ, ಕಸ್ತೂರಿಬಾ ವಿದ್ಯಾಲಯಗಳು, ಸಾಕ್ಷರ ಭಾರತ, ಕೃಷಿ ತಂತ್ರಜ್ಞಾನ ನಿರ್ವಹಣೆ ಏಜೆನ್ಸಿಯಲ್ಲಿರುವ ಕೃಷಿಕ ನೀತಿಗಳು ಮುಂತಾದ 73 ಸ್ಕೀಂಗಳಿವೆ. ಈ ಯೋಜನೆಗಳು ಸುಮಾರು 20–30 ವರ್ಷಗಳಿಂದಿವೆ. ಈ ಯೋಜನೆಗಳಲ್ಲಿ ಸುಮಾರು ಒಂದು ಕೋಟಿಗಿಂತ ಹೆಚ್ಚು ಜನರು ತಳಹಂತದಲ್ಲಿ ದುಡಿಯುತ್ತಿದ್ದಾರೆ. ಪೌಷ್ಟಿಕಾಂಶ, ಆರೋಗ್ಯ & ಸಾಕ್ಷರತೆಗಳಿಗಾಗಿ ಲಕ್ಷಾಂತರ ಮಂದಿ ಅವಲಂಬಿತರಾಗಿದ್ದಾರೆ. ಅವರಲ್ಲಿ ಬಹಳಷ್ಟು ಜನರು ಅಸಂಘಟಿತ ವರ್ಗದ ಕಾರ್ಮಿಕರು, ಕೃಷಿ ಕಾರ್ಮಿಕರು, ಸಣ್ಣ ರೈತರು ಮತ್ತು ಬಡ ಕುಟುಂಬಗಳಿಗೆ ಸೇರಿದವರು ಅದರಲ್ಲಿಯೂ ಬಹಳಷ್ಟು ಜನ ಸಾಮಾಜಿಕವಾಗಿ ಶೋಷಿತರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ. ಕೇಂದ್ರ ಸರ್ಕಾರ ಈ ಎಲ್ಲಾ ಯೋಜನೆಗಳಿಗೂ ಅನುದಾನವನ್ನು ಕಡಿತ ಮಾಡುತ್ತಲೇ ತಾನು ಬಡವರ ಪರವಾದ ಸರ್ಕಾರ ಎಂಬ ಹೇಳಿಕೆಗಳನ್ನು ನೀಡುತ್ತದೆ.

ಭಾರತ ಸರ್ಕಾರದಡಿಯಲ್ಲಿರುವ ತ್ರಿಪಕ್ಷೀಯ ಸಮಿತಿಯಾದ "ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ). ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಸಭೆಯಲ್ಲಿ "ಸ್ಕೀಂಗಳಲ್ಲಿ ದುಡಿಯುವವರನ್ನು ಕೆಲಸಗಾರರೆಂದು ಪರಿಗಣಿಸಬೇಕು, ಕನಿಷ್ಠ ವೇತನ ಮತ್ತು ನಿವೃತ್ತಿ ಸೌಲಭ್ಯಗಳನ್ನೊದಗಿಸಬೇಕು" ಎಂದು ನಿರ್ದೇಶನ ನೀಡುತ್ತ ಬಂದಿದೆ. ಆದರೆ ಕೇಂದ್ರ ಸರ್ಕಾರ 45ನೇ ಐಎಲ್‌ಸಿ ಯ ಶಿಫಾರಸ್ಸುಗಳನ್ನು ಸ್ವೀಕರಿಸುವ ಬದಲಿಗೆ "ಹಣ ಕೊಡಿ, ಸೇವೆ ಪಡೆಯಿರಿ" ಎಂಬ ಉದಾರೀಕರಣದ ನೀತಿಗಳ ಫಲವಾಗಿ ಯೋಜನಾ ಆಯೋಗವನ್ನು ಮುಚ್ಚಿ ನೀತಿ ಆಯೋಗವನ್ನು ರಚಿಸಿದೆ. ಈ ನೀತಿ ಆಯೋಗ "ಸಮಾಜ ಕಲ್ಯಾಣವು ಮಾರುಕಟ್ಟೆಯಲ್ಲಿ ಮಾರಾಟವಾಗುವ ವಸ್ತು" ಎಂಬಂತೆ ಯೋಜನೆಗಳಿಗೆ ಕೇಂದ್ರ ಸರ್ಕಾರಗಳು ಕೊಡುತ್ತಿದ್ದ ಅನುದಾನಗಳಲ್ಲಿ 30% ರಿಂದ 50% ರಷ್ಟು ಕಡಿತ ಮಾಡಿ ಯೋಜನೆಗಳಿಗೆ ಬೇಕಾದ ಅನುದಾನಗಳನ್ನು ರಾಜ್ಯ ಸರ್ಕಾರಗಳೇ ನಿರ್ವಹಿಸಬೇಕೆಂದೂ ತಿಳಿಸುತ್ತಾ ಎಲ್ಲಾ ಯೋಜನೆಗಳಲ್ಲಿಯೂ ಖಾಸಗಿ ಸಂಸ್ಥೆಗಳ ಸಹಭಾಗಿತ್ವವನ್ನು ಹಂತ ಹಂತವಾಗಿ ಮತ್ತು ಅಪ್ರತ್ಯಕ್ಷವಾಗಿ ಪ್ರತಿಪಾದಿಸುತ್ತದೆ.

ಇಂತಹ ಸರ್ಕಾರದ ನೀತಿಗಳ ವಿರುದ್ಧ ಎಲ್ಲ ಸ್ಕೀಂ ಕಾರ್ಮಿಕರನ್ನು ಸಂಘಟಿಸುವ ಯೋಜನೆಗಳನ್ನು ಉಳಿಸುವ ಮತ್ತು ಈ ಯೋಜನೆಗಳ ಮೇಲೆ ಅವಲಂಬಿತರಾದ ಫಲಾನುಭವಿಗಳ ಹಕ್ಕನ್ನು ರಕ್ಷಣೆ ಮಾಡುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಇಂದಿನ ಕಾರ್ಮಿಕ ಚಳುವಳಿಯ ಕರ್ತವ್ಯವಾಗಿದೆ.

ಕರ್ನಾಟಕದ ಕಾರ್ಮಿಕ ಚಳುವಳಿಗಳಲ್ಲಿ ಸ್ಕೀಂ ಕಾರ್ಮಿಕರ ಹೋರಾಟ ಅದರಲ್ಲಿ ಪ್ರಮುಖವಾಗಿ ಅಂಗನವಾಡಿ, ಬಿಸಿಯೂಟ ನೌಕರರ ಹೋರಾಟಗಳು ಮೈಲುಗಲ್ಲುಗಳಾಗಿವೆ.

1994 ರ ಮುಂಚೆ ಕರ್ನಾಟಕದಲ್ಲಿ ಬೀಡಿ ಕಾರ್ಮಿಕರ, ನೇಕಾರರ, ಪ್ಲಾಂಟೇಶನ್ ಕಾರ್ಮಿಕರ, ಪವರ್ ಲೂಂ ಇತ್ಯಾದಿ ಕಾರ್ಮಿಕರ ಹೋರಾಟಗಳು, ಚಳುವಳಿಗಳು ನಡೆಯುತ್ತಿದ್ದವು. 1993–94 ರಲ್ಲಿ ಬೀಡಿ ಕಾರ್ಮಿಕ ಚಳುವಳಿಯ ಸಂಸ್ಥಾಪಕರುಗಳು ಹಾಗೂ ಹಿರಿಯ ನಾಯಕರಾದ ಕಾಂ. ಸೂರಿ, ಮಾಸ್ತ್ರ(ಕಾಂ.ರಾಮಚಂದ್ರರಾವ್) ಕಾಂ. ಎನ್.ಕೆ. ಉಪಾಧ್ಯಾಯ, ಕಾಂ. ವಿಜೆಕೆ ನಾಯರ್ ರಂತಹ ಘಟಾನುಘಟಿಗಳು ಕಬ್ಬನ್ ಉದ್ಯಾನದಲ್ಲಿ ಒಂದು ವಾರ ಕಾಲ ಬೀಡಿ ಮಹಿಳೆಯರು ರಾತ್ರಿ – ಹಗಲಿನ ಹೋರಾಟ ನಡೆಸಿದ್ದರೂ ರಾಜ್ಯ ಸರ್ಕಾರ ಸರಿಯಾಗಿ ಸ್ಪಂದಿಸದಿರುವುದನ್ನು ವಿರೋಧಿಸಿ ಕೆ.ಆರ್. ಸರ್ಕಲ್‌ನಲ್ಲಿ ಉಪವಾಸ ಕುಳಿತಿದ್ದರು.

ಅಂಗನವಾಡಿ ನೌಕರರ ಸಂಘಟನೆ

"ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ರಾಜ್ಯ ಸಮನ್ವಯ ಸಮಿತಿ"ಯನ್ನು 1994 ಜುಲೈನಲ್ಲಿ ಬಳ್ಳಾರಿಯಲ್ಲಿದ್ದ ಸಿಐಟಿಯು ಕಛೇರಿಯಲ್ಲಿ 3 ಜಿಲ್ಲೆಗಳಿಂದ ಬಂದಿದ್ದ ಸಂಗಾತಿಗಳನ್ನಿಟ್ಟು ಕೊಂಡು ರಚಿಸಲಾಗಿತ್ತು. ಈ ಸಮಿತಿಯ ರಚನೆಗೆ ಗುಲ್ಬರ್ಗಾ, ಗೌರಿಬಿದನೂರು, ಹೊಸಪೇಟೆಯ ಅಂಗನವಾಡಿ ಸಂಗಾತಿಗಳೊಟ್ಟಿಗೆ ಕಾಂ. ಸಿದ್ದಗಂಗಪ್ಪ, ಕಾಂ. ಎಸ್. ಪ್ರಸನ್ನಕುಮಾರ್ ಮುಂತಾದವರಿದ್ದರು.



ಕರ್ನಾಟಕದಲ್ಲಿ ಮೊದಲೇ ಅಂಗನವಾಡಿ ಕಾರ್ಯಕರ್ತೆಯ & ಸಹಾಯಕಿಯರ ಮಧ್ಯೆ 4 ಬಲಿಷ್ಠ ಸಂಘಟನೆಗಳಿದ್ದವು. ಆದರೆ ಈ ಸಂಘಟನೆಗಳು ಅಂಗನವಾಡಿ ನೌಕರರ ಮೂಲ ಬೇಡಿಕೆಗಳನ್ನು ಸಾಧಿಸಲು ಬೇಕಾದ ಮಾರ್ಗಗಳನ್ನು ಅನುಸರಿಸುತ್ತಿರಲಿಲ್ಲ–ಕೆಲವರು ವೀರಾವೇಶದ ಒಂದೊಂದು ದಿನದ ಪ್ರತಿಭಟನೆ, ಇನ್ನು ಕೆಲವರು ಕೋರ್ಟು ಎನ್ನುತ್ತಿದ್ದರು. 1997 ರಲ್ಲಿ ಕರ್ನಾಟಕ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯೂನಲ್ "ಕೂಡಲೇ ರಾಜ್ಯ ಸರ್ಕಾರ ಒಂದು ಆಯೋಗವನ್ನು ರಚಿಸಿ, ಇವರನ್ನು ಖಾಯಂ ಮಾಡಿ, ಕನಿಷ್ಠ ಸವಲತ್ತುಗಳನ್ನು ಕೊಡಬೇಕು" ಎಂಬ ತೀರ್ಪಿತ್ತಿತ್ತು.

ಆದರೆ ಈ ತೀರ್ಪನ್ನು ರಾಜ್ಯ ಸರ್ಕಾರದಿಂದ ಜಾರಿ ಮಾಡಿಸಲು ಬೇಕಾದ ವಿಧಾನಗಳು ಹಾಗೂ ತೀವ್ರತರವಾದ ಹೋರಾಟಗಳನ್ನು ನಡೆಸಲಿಲ್ಲ. ಅಂದಿನ ಜೆ.ಹೆಚ್. ಪಾಟೀಲ್ ಸರ್ಕಾರ ಸುಪ್ರೀಂಕೋರ್ಟಿಗೆ ಮೇಲ್ಮನವಿ ಹೋಯಿತು. ರಾಜ್ಯದಲ್ಲಿ ಹಾಗಲೇ ಇದ್ದ ಸಂಘಟನೆಗಳು ಅದಕ್ಕೆ ಪ್ರತಿ ತಂತ್ರದ ಹೋರಾಟಗಳನ್ನು ರೂಪಿಸಲಿಲ್ಲ.

ಅಂದು ಅಂಗನವಾಡಿ ಕಾರ್ಯಕರ್ತೆಗೆ 300, ಸಹಾಯಕಿಗೆ 150 ರೂಗಳ ಗೌರವಧನ, ಅತ್ಯಂತ ಶೋಷಣೆಗೊಳಗಾಗಿ, ಯಾವುದೇ ಇನ್ನಿತರ ಸವಲತ್ತುಗಳಿಲ್ಲದೆ ಬಳಲುತ್ತಿದ್ದರು. ವಿಪರೀತವಾದ ಸಾಮಾಜಿಕ ದಬ್ಬಾಳಿಕೆ, ದೈಹಿಕ ಹಲ್ಲೆಗಳು, ಅತ್ಯಾಚಾರದ ಪ್ರಯತ್ನಗಳು, ಅತ್ಯಂತ ಹೀನಾಯವಾದಂತಹ ಪದಬಳಕೆಗಳನ್ನು ಮಾಡಲಾಗುತಿತ್ತು.

ಇಂತಹ ಸಂದರ್ಭದಲ್ಲಿ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ & ಸಹಾಯಕಿಯರ ಫೆಡರೇಷನನ್ನು 1989 ರಲ್ಲಿ ಕಾಂ. ವಿಮಲಾ ರಣದಿವೆಯವರ ನೇತೃತ್ವದಲ್ಲಿ ಸಿಐಟಿಯು ಕೇಂದ್ರ ಸಮಿತಿ ಸ್ಥಾಪನೆ ಮಾಡಿ ದೇಶದಾದ್ಯಂತ ಅಂಗನವಾಡಿ ನೌಕರರನ್ನು ಸಂಘಟಿಸಲು ಪ್ರಯತ್ನಗಳನ್ನು ನಡೆಸಲಾಗುತಿತ್ತು. ಕೇಂದ್ರ ಸಮಿತಿಯ ತೀರ್ಮಾನದಂತೆ ರಾಜ್ಯದಲ್ಲಿಯೂ ಇವರನ್ನು ಸಂಘಟಿಸಲು ಸಿಐಟಿಯು ರಾಜ್ಯ ಸಮಿತಿ ಸಂಪೂರ್ಣ ಮುತುವರ್ಜಿ ವಹಿಸಿತು ಮತ್ತು ಆದ್ಯತೆಯಾಗಿ ಭಾವಿಸಿತ್ತು.

ರಾಜ್ಯದಲ್ಲಿ ಕೇವಲ 3–4 ತಾಲೂಕುಗಳಲ್ಲಿ ಸಂಘಗಳನ್ನು ಹೊಂದಿದ್ದ ನಮ್ಮ ಸಮನ್ವಯ ಸಮಿತಿ ತೀರ್ಮಾನಗಳನ್ನು ಜಾರಿ ಮಾಡಿಸಲು ತುಂಬಾ ಪರಿಶ್ರಮ ವಹಿಸಬೇಕಿತ್ತು.

ನಿರಂತರ ಮತ್ತು ಕಠಿಣವಾದ ಪ್ರವಾಸಗಳನ್ನು ಮಾಡುವ ಮುಖಾಂತರ ಗ್ರಾಮಾಂತರ ಪ್ರದೇಶದಲ್ಲಿದ್ದಂತಹ ಈ ಮಹಿಳೆಯರನ್ನು ಸಂಘಟಿಸುವುದರಲ್ಲಿ ಹಾಗೂ ಯೋಜನಾ ಬದ್ಧವಾದ, ನಿರಂತರವಾದಂತಹ ಹೋರಾಟಗಳ ಮುಖಾಂತರ ಒಂದೊಂದು ಹೆಜ್ಜೆಯನ್ನು ಮುಂದಿಡಲು ಸಾಧ್ಯವಾಯಿತು.

ಈಗ 204 ಯೋಜನೆಗಳ ಪೈಕಿ 127 ಯೋಜನೆಗಳಲ್ಲಿ ನಮ್ಮ ಸಂಘಟನೆಯಿದೆ. ಒಟ್ಟು ಅಂಗನವಾಡಿ ನೌಕರರಲ್ಲಿ 80ಸಾವಿರದಷ್ಟು ನೌಕರರ ಸಂಘದಡಿಯಲ್ಲಿದ್ದಾರೆ. 1995ರಲ್ಲಿ 300ಜನ ಸದಸ್ಯತ್ವ ಪ್ರಾರಂಭವಾಗಿ ಇಂದು 50,100 ಸದಸ್ಯತ್ವ ಮಾಡಿಸಲು ಸಾಧ್ಯವಾಗಿದೆ.

ಅಂಗನವಾಡಿ ನೌಕರರ ಸಂಘಟನೆ ಪ್ರಾರಂಭ ಮಾಡಿದಾಗಿನಿಂದ ಇದುವರೆಗೂ ಅತ್ಯಂತ್ಯ ಬಲಿಷ್ಠವಾಗಿ, ನಿರಂತರವಾದ ಮತ್ತು ದೀರ್ಘಕಾಲಿಕ ಹೋರಾಟಗಳನ್ನು ಸತತವಾಗಿ ನಡೆಸಿದೆ.

ಕೇಂದ್ರದಲ್ಲಿಯೂ ಕೂಡಾ ಹಲವು ತರಹದ ಹೋರಾಟಗಳನ್ನು ನಿರಂತರವಾಗಿ ನಡೆಸಿದೆ. ಅದರ ಒಟ್ಟು ಸಾಧನೆಗಳು ಕೆಳಕಂಡಂತಿವೆ.

- 1975ರಲ್ಲಿ ಇದ್ದ ಗೌರವಧನ 125–50 ರೂಗಳು. ಈಗ 300–6000 ರೂಗಳು. ಅಂಗನವಾಡಿ ಕೇಂದ್ರಕ್ಕೆ ಆಹಾರ, ಮೂಲ ಪರಿಕರಗಳ ಸರಬರಾಜು
- 1994ರಲ್ಲಿ ಪ್ರಾಜೆಕ್ಟ್‌ನಿಂದ ಪ್ರಾಜೆಕ್ಟ್‌ಗೆ ವರ್ಗಾವಣೆ ಆದೇಶ
- 1996ರಲ್ಲಿ ಒಂದು ಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ ಆದೇಶ
- 2000ರಲ್ಲಿ ಮರಣ ಮತ್ತು ಖಾಯಿಲೆ ಪರಿಹಾರ ನಿಧಿ
- 2001ರಲ್ಲಿ 7 ದಿನ ಬೇಸಿಗೆ ರಜೆ.
- 2004 ಅಂಗನವಾಡಿ ಕಾರ್ಯಕರ್ತೆಯರ ಭೀಮಾ ಯೋಜನೆ. ಮೇಲ್ವಿಚಾರಕಿಯ ಹುದ್ದೆಗೆ 45% ಆಯ್ಕೆ.
- 2007ರಲ್ಲಿ ಅಂಗನವಾಡಿ ಕಾರ್ಯಕರ್ತೆಯ ಮತ್ತು ಸಹಾಯಕಿ ಮಾರ್ಗಸೂಚಿ.
- 2010ರಲ್ಲಿ 180 ದಿನಗಳ ಹೆರಿಗೆ ರಜೆ, ಗರ್ಭಪಾತ ರಜೆ.
- 2011ರಲ್ಲಿ ನಿವೃತ್ತ ಸೌಲಭ್ಯ, 7 ದಿನದಿಂದ 15 ದಿನಗಳ ಬೇಸಿಗೆ ರಜೆ ವಿಸ್ತರಣೆ.
- 2012ರಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯ ಆಯ್ಕೆಯ ಮಾರ್ಗಸೂಚಿ, 2012ರಲ್ಲಿ ಎಸ್.ಎಸ್.ಎಲ್.ಸಿ ಓದಿದ ಸಹಾಯಕಿಯರಿಗೆ ಕಾರ್ಯಕರ್ತೆಯಗಿ ಮುಂಬಡ್ತಿ.
- 2013–14 ರಲ್ಲಿ 50 ಸಾವಿರಕ್ಕೆ ಮರಣ ಪರಿಹಾರ ಏರಿಕೆ.
- 2015 ರಾಜ್ಯ ಕೇಂದ್ರ ಸರ್ಕಾರದ ಗೌರವಧನ ಒಂದೇ ಬಾರಿ ಕೊಡಲು ಆದೇಶ.

ಇದರೊಟ್ಟಿಗೆ ಅಂಗನವಾಡಿ ಕೇಂದ್ರಗಳ ಸ್ಥಾನಮಾನವೂ ಸಮಾಜದಲ್ಲಿ ಬದಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈಗ ಅಭಿವೃದ್ಧಿ ಇಲಾಖೆಯಾಗಿ ಮಾರ್ಪಟ್ಟಿದೆ. ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿದ್ದ ಅಂಗನವಾಡಿ ಮಹಿಳೆಯರು ಇಂದು ತಮ್ಮ ಹಕ್ಕಿನ ಭಾಗವಾಗಿ ಬದುಕನ್ನು ಹೆಮ್ಮೆಯಿಂದ ನಡೆಸುತ್ತಿದ್ದಾರೆ.

ಅಂಗನವಾಡಿ ಕೇಂದ್ರಗಳನ್ನು ಶಿಶು ವಿಹಾರ ಕೇಂದ್ರಗಳಾಗಿ ಪರಿವರ್ತಿಸಿ, ನೌಕರರನ್ನು ಸಿ–ಡಿ ಗ್ರೂಪ್ ನೌಕರರೆಂದೂ ಪರಿಗಣಿಸಬೇಕೆಂದೂ ಒತ್ತಾಯಿಸುತ್ತಿರುವಾಗಲೇ ಕೇಂದ್ರದ ನರೇಂದ್ರ ಮೋದಿ ಸರ್ಕಾರ 50% ಅನುದಾನ ಕಡಿತ ಮಾಡುವ ಮುಖಾಂತರ ಈ ಯೋಜನೆಯನ್ನು ರೋಗಗ್ರಸ್ತಗೊಳಿಸಲು, ಖಾಸಗೀಕರಿಸುವ ಪ್ರಯತ್ನ ನಡೆಸುತ್ತಿದೆ. ಇದರ ರಾಜ್ಯ ಮತ್ತು ಅಖಿಲ ಭಾರತ ಸಮ್ಮೇಳನಗಳಲ್ಲಿ ಮುಂದಿನ ಹಂತದ ಹೋರಾಟವನ್ನು ರೂಪಿಸಲಾಗುತ್ತದೆ.

ಬಿಸಿಯೂಟ ನೌಕರರ ಸಂಘಟನೆ

ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು ಎಂಬ ಕಣ್ಣೋಟದೊಂದಿಗೆ 2001 ರಲ್ಲಿ ಸುಪ್ರೀಂಕೋರ್ಟ್ ತನ್ನ ಮಧ್ಯಂತರ ತೀರ್ಪಿನಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಕೊಡಲು ಆದೇಶಿಸಿತು. ಈ ಆದೇಶ ಬಹಳ ಪ್ರಮುಖವಾಗಿ "ಶಾಲೆಗಳಿಗೆ ಬರುವ ಮಕ್ಕಳ ಶೈಕ್ಷಣಿಕ ಪ್ರಗತಿ ಸಾಧಿಸಲು ಗೈರು ಹಾಜರಾತಿ ಕಡಿಮೆ ಮಾಡಬೇಕು. ಲಿಂಗತಾರತಮ್ಯವನ್ನು ತಗ್ಗಿಸಲು ಹೆಣ್ಣು ಮಕ್ಕಳ ಸಮಖ್ಯೆಯ ದಾಖಲಾತಿ ಹೆಚ್ಚಬೇಕು. ಮಕ್ಕಳ ಮನಸ್ಸು ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯನ್ನು ಸಾಧಿಸಬೇಕು. ಮಧ್ಯಾಹ್ನದ ನಂತರದಲ್ಲಿ ಶಾಲಾ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳಬೇಕೆಂಬುದು ಈ ಯೋಜನೆಯ ಮಹತ್ವಾಕಾಂಕ್ಷೆ.

ಈ ಯೋಜನೆಗೆ ಪ್ರಾರಂಭದಲ್ಲಿಯೇ 13,215 ಕೋಟಿ ರೂಗಳನ್ನು ಖರ್ಚು ಮಾಡಿ ಪ್ರಾರಂಭಿಸಲಾಯಿತು. ಸುಮಾರು 26 ಲಕ್ಷ ಮಹಿಳೆಯರನ್ನು 12 ಕೋಟಿ ಮಕ್ಕಳಿಗೆ ಅಹಾರ ಬೇಯಿಸಲು ಕೆಲಸಕ್ಕೆ ನೇಮಿಸಲಾಯಿತು.

ಯೋಜನೆಯ ಉದ್ದೇಶ ಮಹತ್ವ ಪಡೆದುಕೊಂಡಿದ್ದರೂ, ಈ ಯೋಜನೆಯನ್ನು ಧಾರ್ಮಿಕ – ಜಾತಿಯ ಸಂಸ್ಥೆಗಳಿಗೆ ಕೊಡಿಸಬಾರದೆಂಬ ಎನ್‌ಪಿ–

ಪುಟ 18 ಕ್ಕೆ

ಫೆದರ್‌ಲೈಟ್‌ನಿಂದ ಬಿಪಿಎಲ್ ವರೆಗೆ

–ಕಾಂ.ಆರ್.ಶ್ರೀನಿವಾಸ್ ಅವರೊಂದಿಗೆ ಒಂದು ಸಂದರ್ಶನ

•ನೀವು ಟ್ರೇಡ್ ಯೂನಿಯನ್ ಚಳುವಳಿಗೆ ಹೇಗೆ ಬಂದಿರಿ? ಕಾರ್ಮಿಕ ಸಂಘಟನೆಯ ಕೆಲಸ ಯಾವಾಗ ಆರಂಭಿಸಿದಿರಿ?

ನಾನು 1965ರ ಸುಮಾರಿಗೆ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಮೆಶಿನ್‌ಗಳ ಪ್ಯಾಟರ್ನ್ ಮೇಕಿಂಗ್ ಒಬ್ಬರು ಕಲಿಸಿದರು. ಆ ಕೆಲಸ ಮಾಡಿ ಕೊಡುತ್ತಿದ್ದೆ. ಚೆನ್ನಾಗಿಯೇ ನಡೆಯುತ್ತಿತ್ತು. ಆದರೆ ಹಣಕಾಸು ಪರಿಸ್ಥಿತಿ ಚೆನ್ನಾಗಿಲ್ಲವಾದ್ದರಿಂದ ನೌಕರಿ ಮಾಡಲೇಬೇಕಾಗಿತ್ತು. ಒಬ್ಬರ ಸಹಾಯದಿಂದ ಮೈಸೂರು ರಸ್ತೆಯಲ್ಲಿದ್ದ ಫೆದರ್‌ಲೈಟ್‌ನಲ್ಲಿ ಕೆಲಸ ಸಿಕ್ಕಿತು, 1968ರಲ್ಲಿ. ಅದನ್ನು ರಾಮನಾರಾಯಣ ಚೆಲ್ಲಾರಾಮ್ ಕುಟುಂಬದವರು ನಡೆಸುತ್ತಿದ್ದರು. ಅವರ ಮಗ ನೋಡಿಕೊಳ್ಳುತ್ತಿದ್ದ. ಕಾರ್ಮಿಕರಿಗೆ ಸಂಘ ಮಾಡದಂತೆ ತೊಂದರೆ ಕೊಡುತ್ತಿದ್ದ. ಒಂದು ವರ್ಷದ ನಂತರ ಒಳ್ಳೆ ಕೆಲಸ ಹುಡುಕೋಣ ಅಂತ ಕೆಲಸ ಬಿಟ್ಟೆ. ಆದರೆ ನಾನು ನುರಿತ ಕೆಲಸಗಾರನಾದ್ದರಿಂದ ಮಾಲಿಕ ಮತ್ತೆ–ಮತ್ತೆ ಕರೆದ. ಆ ಹೊತ್ತಿಗೆ ಇದೇ ಪರವಾಗಿಲ್ಲ ಅಂತ ಮತ್ತೆ ಸೇರಿದೆ. ಅಲ್ಲಿ ಒಂದು ಕಾರ್ಮಿಕ ಸಂಘ ಇತ್ತು. ಆ ಕಾರ್ಖಾನೆಯದ್ದೇ ಸಂಘ ಅಲ್ಲ, ಎಐಟಿಯುಸಿ ನೇತೃತ್ವದಲ್ಲಿದ್ದ ಜನರಲ್ ವರ್ಕರ್ಸ್ ಯೂನಿಯನ್. ಅವರ ಕೆಲಸದ ವಿಧಾನ ನನಗೆ ಸರಿ ಬರುತ್ತಿರಲಿಲ್ಲ. ನನಗೇನೂ ಗೊತ್ತಿಲ್ಲದಿದ್ದರೂ ನನ್ನ ಕಾಮನ್ ಸೆನ್ಸ್‌ಗೆ ಹಾಗನಿಸುತ್ತಿತ್ತು. ಅದರ ಮುಖಂಡರಿಗೆ ಕೆಲಸದ ಒತ್ತಡ ಬಹಳ ಇದ್ದಂತೆ ಕಾಣುತ್ತದೆ. ಆಗಷ್ಟೇ ರಚಿಸಿದ್ದ ಇಂಜಿನಿಯರಿಂಗ್ ವೇಜ್ ಬೋರ್ಡ್‌ನ ಸಭೆಗಳಿಗೂ ಅವರಿಗೆ ಹಾಜರಾಗಲು ಆಗುತ್ತಿರಲಿಲ್ಲ. ಇದರ ಪ್ರಯೋಜನ ಪಡೆದು ಮಾಲಿಕ ಅವರ ವಕೀಲರ ತರಲೆ ಸಲಹೆಗಳಂತೆ ಪ್ರತಿದಿನ ಯಾರನ್ನಾದರೂ ಡಿಸ್‌ಮಿಸ್ ಮಾಡುತ್ತಿದ್ದ. ಆಗ ನಮ್ಮದೇ ಸಂಘ ಕಟ್ಟಿಕೊಳ್ಳಬೇಕು ಎಂದು ಹಲವರಿಗೆ ಅನಿಸಿತು. ಆಗಿದ್ದ ಸಂಘದ ಕೆಲಸದ ವಿಧಾನ ಸರಿಯಿಲ್ಲ ಎನ್ನುತ್ತಿದ್ದ ನನಗೇ ಫೆದರ್‌ಲೈಟ್ ಕಾರ್ಮಿಕರ ಸಂಘ ರಿಜಿಸ್ಟರ್ ಮಾಡುವ ಜವಾಬ್ದಾರಿ ವಹಿಸಿದರು. ನಾರಾಯಣರಾವ್ ಎಂಬ ಎಡಪಂಥೀಯ ಮುಖಂಡರೊಬ್ಬರು ಸಂಘ ರಿಜಿಸ್ಟರ್ ಮಾಡಲು ಸಹಾಯ ಮಾಡಿದರು. ನಾನು ಈ ಸಂಘದಲ್ಲಿ ಪದಾಧಿಕಾರಿಯಾಗಲಿಲ್ಲ. ಹಿಂದೆ ಯೂನಿಯನ್ ಮಾಡಲು ಬಿಡದೇ ಇದ್ದ ಮಾಲಿಕ ಈಗ ಸುಮ್ಮನೇ ಬಿಟ್ಟ. ಅದು ಅವನ ತಂತ್ರವಾಗಿತ್ತು. ಹೊಸ ಪದಾಧಿಕಾರಿಗಳನ್ನು ಕರೆದು ಅರ್ಧ ಗಂಟೆಯಲ್ಲೇ ಸಂಬಳ ಇತ್ಯರ್ಥ ಮಾಡಿಯೇ ಬಿಟ್ಟ. ಇತ್ಯರ್ಥ ಏನೂ ಚೆನ್ನಾಗಿರಲಿಲ್ಲ. ಆದರೆ ಮುಖಂಡರು ಒಪ್ಪಿಕೊಂಡೇ ಬಿಟ್ಟರು. ನಾನು ಅದನ್ನು ಬಾಯ್ಕಾಟ್ ಮಾಡಿದೆ. ಸ್ವಲ್ಪ ಸಮಯದಲ್ಲೇ ಮಾಲಿಕ ತನ್ನ ನಿಜ ಬುದ್ಧಿ ತೋರಿಸಿದ. ಸ್ಟೋರ್‌ನಲ್ಲಿ ಏನೋ ಕಳವಾಗಿದೆ ಎಂದು ಅದರ ಆರೋಪವನ್ನು ಮುಖಂಡರ ಮೇಲೆ ಹಾಕಿದ. ಪೋಲೀಸ್ ಕಂಪ್ಲೇಂಟ್ ಕೊಟ್ಟ. ಮುಖಂಡರನ್ನು ಪೋಲೀಸ್ ಸ್ಟೇಶನಿಗೆ ಒಯ್ಯಲಿಕ್ಕೆ ಬಂದರು. ಇನ್ನು ಸುಮ್ಮನಿರುವುದು ಸರಿಯಲ್ಲ ಎಂದನಿಸಿತು. ಪೋಲೀಸ್ ಸಬ್ ಇನ್ಸ್‌ಪೆಕ್ಟರನ್ನು ಮೊಂಡು ಧೈರ್ಯ ತಗೊಂಡು ತಡೆದು ಹೇಗೆ ಕರ್ಕೊಂಡು ಹೋಗ್ತೀರಾ ಎಂದು ಕೇಳಿದೆ. ಆಗ ಪೋಲೀಸ್ ಕಮಿಶನರ್ ಆಗಿದ್ದವರು ಮಾಲಿಕನ ಪರ ಇದ್ದಂತೆ ಕಾಣುತ್ತದೆ. ಸಬ್ ಇನ್ಸ್‌ಪೆಕ್ಟರ್ ಕರ್ಕೊಂಡೇ ಹೋದ. ನಾನು 50 ಕಾರ್ಮಿಕರನ್ನು ಜತೆಗೆ ಕರ್ಕೊಂಡು ಪೋಲಿಸ್ ಸ್ಟೇಶನ್ನಿಗೇ ಹೋದೆ. ಸಬ್ ಇನ್ಸ್‌ಪೆಕ್ಟರ್ ಕಮಿಶನರ್‌ಗೆ ತಿಳಿಸಿದ. ಆರೋಪ ಹಾಕುವುದ ಕಷ್ಟ ಎಂದನಿಸಿ ಮುಖಂಡರನ್ನು ಬಿಟ್ಟು ಬಿಟ್ಟರು. ಇದರ ನಂತರ ಕಾರ್ಮಿಕರು ನಾನೇ ಮುಖಂಡತ್ವ ವಹಿಸಿಕೊಳ್ಳಬೇಕೆಂದರು. ನಂತರ ಹಿಂದಿನ ಮುಖಂಡರ ಮೇಲಿನ ವಿಚಾರಣೆಯಲ್ಲಿ ನನ್ನನ್ನೇ ಕೋ–ವರ್ಕರ್ ಆಗಿ ಅಪಾಯಿಂಟ್ ಮಾಡಿಕೊಂಡರು. ನನಗೇನೂ ಗೊತ್ತಿರಲಿಲ್ಲ. ಆದರೂ ಕಾಮನ್ ಸೆನ್ಸ್‌ನಿಂದ ಎದುರಿಸಿದೆ. ಒಂದು ವರ್ಷದ ನಂತರ ಮಾಲಕ ಆರೋಪ ಹಿಂತೆಗೆದುಕೊಂಡ. ಹೀಗೆ ಆರಂಭವಾದದ್ದು ನನ್ನ ಕಾರ್ಮಿಕ ಸಂಘಟನೆಯ ಚಟುವಟಿಕೆ.

ಈ ಹೊತ್ತಿಗೆ ಇಂದಿರಾಗಾಂಧಿ ವೇಜ್ ಫ್ರೀಜ್ ತಂದರು, ಅಂದರೆ ಸಂಬಳ ಹೆಚ್ಚಿಸಿದರೆ ಬೆಲೆಗಳು ಹೆಚ್ಚುತ್ತವೆ, ಆದ್ದರಿಂದ ಹೆಚ್ಚಿಸಿದ ಸಂಬಳದ ಅರ್ಧದಷ್ಟನ್ನು ಪಿಎಫ್‌ಗೆ ಹಾಕಬೇಕು ಎಂದರು. ಬೆಲೆಗಳು ಏರುತ್ತಿದ್ದವು. ಸಂಬಳ ಸಾಲುತ್ತಿರಲಿಲ್ಲ. ಈ ಹಿಂದೆ ನಮ್ಮಲ್ಲಿ ಆದ ಇತ್ಯರ್ಥದಲ್ಲಿ ವಿಡಿಎ ಇರಲಿಲ್ಲ. ಆದ್ದರಿಂದ ಈ ಇತ್ಯರ್ಥ ಸರಿಯಿಲ್ಲ, ಅದನ್ನು ರದ್ದು ಮಾಡಬೇಕು ಎಂದು ಬೇಡಿಕೆ ಇಟ್ಟೆವು. ಆಗಷ್ಟೇ ದಾವಣಗೆರೆಯಲ್ಲಿ ಸುಳ್ಳು ಕೇಸಿನಲ್ಲಿ ಜೈಲಿನಲ್ಲಿದ್ದ ಸೂರ್ಯನಾರಾಯಣರಾವ್ ಬಿಡುಗಡೆ ಆಗಿ ಬಂದಿದ್ದರು. ಕಾರ್ಮಿಕರ ಒಪ್ಪಿಗೆಯಿಂದ ಅವರು ನಮ್ಮ ಸಂಘದ ಅಧ್ಯಕ್ಷರಾಗಿ ನಾನು ಕಾರ್ಯದರ್ಶಿಯಾಗಿ ಹೋರಾಟ ಆರಂಭಿಸಿದೆವು. ಕೊನೆಗೂ ಹೊಸ ಸೆಟ್ಲ್‌ಮೆಂಟ್ ಆಯಿತು.

ಅದೇ ವೇಳೆಗೆ 1974ರ ರೈಲ್ವೆ ಮುಷ್ಕರ ಆರಂಭವಾಯಿತು. ಅದಕ್ಕೆ ಬೆಂಬಲವಾಗಿ ನಮ್ಮ ಸಂಘದಿಂದ ಪ್ರತಿದಿನ ಸುಮಾರು ನೂರು ಜನ ರೈಲ್ವೆ ಕ್ವಾರ್ಟರ್ಸ್‌ನಲ್ಲಿ ಪ್ರತಿಭಟನೆಗೆ ಹೋಗುತ್ತಿದ್ದೆವು. ಅದೊಂದು ಕಾಲಘಟ್ಟ. ನಂತರ ಎಮರ್ಜೆನ್ಸಿ ಬಂತು. ಈ ಎಮರ್ಜೆನ್ಸಿಯಲ್ಲೇ ಮೈಸೂರು ರಸ್ತೆಯಲ್ಲಿರುವ ಇನ್ನೆರಡು ಕಡೆ, ಸುಮಾರು 100 ಕಾರ್ಮಿಕರಿದ್ದ ಮೈಸೂರ್ ಎಸ್ಬೆಸ್ಟೋಸ್, 60 ದಲಿತ ಕಾರ್ಮಿಕರೇ, ಅದರಲ್ಲಿ ಸುಮಾರು 40 ಮಹಿಳೆಯರೇ ಇದ್ದ ರಾಮಚಂದ್ರ ಪೆಸ್ಟಿಸೈಡ್‌ನಲ್ಲಿ ಸಂಘ ಕಟ್ಟಿದೆವು. ಅಲ್ಲಿಯ ಮಹಿಳಾ ಕಾರ್ಮಿಕರು ಮಾಲಕನ ದರ್ಪ–ದಬ್ಬಾಳಿಕೆಯನ್ನು ಎದುರಿಸಿದ ರೀತಿ ಅಪೂರ್ವ. ಮುಷ್ಕರಗಳನ್ನೂ ನಡೆಸಿದೆವು. ಪೋಲೀಸ್ ದಬ್ಬಾಳಿಕೆಗಳನ್ನೂ ಎದುರಿಸಿದೆವು.

ಮುಂದೆ ಕೈಗಾರಿಕಾ ಮತ್ತು ಜನರಲ್ ಕಾರ್ಮಿಕ ಸಂಘ ರಚನೆ ಆಯ್ತು–ಸೂರಿ ಅಧ್ಯಕ್ಷರಾಗಿದ್ದರು, ವಿಜೆಕೆ ನಾಯರ್ ಕಾರ್ಯದರ್ಶಿ. ಇದರ ಅಡಿಯಲ್ಲಿ 1980ರಿಂದ 1987ರ ನಡುವೆ ಕ್ವಾಲಿಟಿ ಬಿಸ್ಕೆಟ್ಸ್, ವಿಟ ಬಿಸ್ಕೆಟ್ಸ್ ಮೈಸೂರ್ ಫೀಡ್ಸ್, ಕ್ರಿಸ್ಪ್ ಬಿಸ್ಕೆಟ್ಸ್, ಟೊರಿನೊ(ಈಗ ಕೊಕಾಕೋಲ), ಕೃಷ್ಣ ಫ್ಲೋರ್‌ಮಿಲ್ಸ್ ಮುಂತಾದ ಕಡೆಗಳಲ್ಲಿ ಸಂಘ ಕಟ್ಟಿದೆವು, ದೀರ್ಘ ಕಾಲದ ಹೋರಾಟಗಳನ್ನು ನಡೆಸಿದೆವು. ಕನಿಷ್ಟ ಕೂಲಿ ಹೋರಾಟ ನಡೆಯಿತು. ಕ್ರಿಸ್ಪ್ ಬಿಸ್ಕತ್‌ನಲ್ಲಿ ಮಾಲಕನ ದಬ್ಬಾಳಿಕೆ ಎದುರಿಸಲು ಕ್ವಾಲಿಟಿ ಬಿಸ್ಕತ್ ಸಂಘದ ಕಾರ್ಯಕರ್ತರು ನೆರವಾದರು. ಇದರಲ್ಲಿ ಆಲ್ಲಿನ ಸಂಗಾತಿಗಳ ಜತೆ ಸುಮಾರು ಎರಡು ತಿಂಗಳು ಸುಳ್ಳು ರಯಟಿಂಗ್ ಕೇಸಿನಲ್ಲಿ ನನಗೆ ಜೈಲುವಾಸವೂ ಆಯಿತು. ಫೆದರ್‌ಲೈಟ್‌ನಲ್ಲಿ 18 ತಿಂಗಳ ದೀರ್ಘ ಲಾಕೌಟ್ ಕೂಡ ನಡೆದು, ಅದರಲ್ಲಿ ಗೆದ್ದೆವು. ಈ ನಡುವೆ ಬೇರೆ ಕಾರ್ಮಿಕ ಸಂಘಟನೆಯ ಕೆಲಸದ ಹೊರೆ ಹೆಚ್ಚಿದ್ದರಿಂದ ಫೆದರ್‌ಲೈಟ್ ಕೆಲಸಕ್ಕೆ ರಾಜೀನಾಮೆ ಕೊಟ್ಟು 1986ರಲ್ಲಿ ಪೂರ್ಣ ಕಾಲ ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡೆ. ಬಿನ್ನಿ ಮಿಲ್‌ನಲ್ಲಿ ಕೆ.ಎಸ್.ಸುಬ್ರಮಣಿ ಸ್ಟಾಫ್ ಯೂನಿಯನ್ ಕಟ್ಟಿದರು. ನಂತರ ಬಿನ್ನಿ ಕಾರ್ಮಿಕರ ನಡುವೆ ಕೆಲಸ ಆರಂಭಿಸಿದೆ. 8000 ಕಾರ್ಮಿರಿಕರಿದ್ದರು. ಹಲವು ಹೋರಾಟಗಳು ನಡೆದವು. ನಾನು ಹಲವು ಬಾರಿ ಅರೆಸ್ಟ್ ಆಗಿದ್ದೆ.

•ತೊಂಬತ್ತರ ದಶಕದಲ್ಲಿ ಜಾಗತೀಕರಣದ ಆರಂಭದಲ್ಲಿ ಕಾರ್ಮಿಕ ಸಂಘಟನೆ ಹೇಗೆ ನಡೆಯಿತು?

ಪರಿಸ್ಥಿತಿ ಬದಲಾವಣೆ ಆಗಿತ್ತು. ನರಸಿಂಹರಾವ್ ಸರಕಾರ ಬಂದಿತ್ತು. ಮನಮೋಹನ್‌ಸಿಂಗ್ ಉದಾರೀಕರಣದ ವಿರುದ್ಧ, ಗ್ಯಾಟ್ ಒಪ್ಪಂದದ ವಿರುದ್ಧ ದೊಡ್ಡ ಹೋರಾಟ ನಡೆಸಿದೆವು. ಈ ಹೊತ್ತಿಗೆ ನಾನು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯಾಗಿ ನಗರದಲ್ಲಿ ಕಾರ್ಮಿಕ ಸಂಘಟನೆಯನ್ನು ಸ್ಟ್ರೀಮ್‌ಲೈನ್ ಮಾಡುವ ಕೆಲಸಕ್ಕೆ ತೊಡಗಿದೆ. ಗಾರ್ಮೆಂಟ್ ವಲಯದಲ್ಲಿ ಬಹಳಷ್ಟು ಕಾರ್ಮಿಕರಿದ್ದಾರೆ. ಅವರ ಸಂಘಟನೆಯ ಬಗ್ಗೆ ಯೋಚನೆ ಮಾಡಿದೆವು.

•ಗಾರ್ಮೆಂಟ್ ಕ್ಷೇತ್ರದಲ್ಲಿ ನೀವು ಸಂಘಟನೆ ಮಾಡಿದ್ದೀರಿ. ಇದನ್ನು ಹೇಗೆ ಮಾಡಿದಿರಿ?

ಅದಾಗಲೇ ಕೆಲವು ಗಾರ್ಮೆಂಟ್ ಕಂಪನಿಗಳಲ್ಲಿ ಹೋರಾಟಗಳು ನಡೆದು ಲೀಲಾವತಿ, ಗೌರಮ್ಮ, ಯಶೋಧಾ, ರಾಧ, ಮುಂತಾದವರು ಬಂದಿದ್ದರು. ಇವರನ್ನೆಲ್ಲ ಸೇರಿಸಿ ಗಾರ್ಮೆಂಟ್ ಕಂಪನಿಗಳ ಬಗ್ಗೆ ಅಲ್ಲಿ ಕೆಲಸ ಮಾಡುವ ಕಾರ್ಮಿಕರು, ಅವರ ಸಮಸ್ಯೆಗಳು, ಕೂಲಿ ಮೊದಲಾದ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದೆವು. ಈ ಆಧಾರದಲ್ಲಿ ಯೋಜನೆ ಹಾಕಿದವು. ಈ ಮಾಹಿತಿಗಳನ್ನು ಸಂಗ್ರಹಿಸುತ್ತಿರುವಾಗಲೇ ಕಾರ್ಮಿಕರು ನಮ್ಮ ಬಳಿ ಬಂದರು. ಯೂನಿಯನ್ ಕೆಲಸ ಆರಂಭವಾಯಿತು. ಈ ಹಿಂದೆ 1988ರಲ್ಲಿ ಒಂದು ಕಂಪೆನಿಯ ಕಾರ್ಮಿಕರಿಗಾಗಿ ರಚಿಸಿದ ಬೆಂಗಳೂರು ಜಿಲ್ಲಾ ಗಾರ್ಮೆಂಟ್ ಕಾರ್ಮಿಕರ ಸಂಘದ ಅಡಿಯಲ್ಲೇ ಕೆಲಸ ಆರಂಭವಾಯಿತು.

ಮೊದಲು ಸಮ್ರಾಟ್ ಅಶೋಕ್‌ನಲ್ಲಿ. ಇದು 15–16 ಯೂನಿಟ್‌ಗಳಿದ್ದ 8–10 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದ ಕಂಪನಿ. ದೇಶದ 50 ಪರ್ಸೆಂಟ್ ಗಾರ್ಮೆಂಟ್ ರಫ್ತು ಇವನೇ ಮಾಡುತ್ತಿದ್ದ. ಅಲ್ಲಿ ಯೂನಿಯನ್ ಮಾಡದಂತೆ ಗೂಂಡಾಗಳನ್ನು ಬಳಸಲು ಪ್ರಯತ್ನಿಸಿದ. ಇನ್ನೂ ಹಲವು ತಂತ್ರಗಳನ್ನು ಮಾಡಿದ. ಆದರೆ ಅವನ ಕೆಲವು ತಂತ್ರಗಳೇ ನಮಗೆ ಪ್ರಯೋಜನಕ್ಕೆ ಬಂತು. ಕನಿಷ್ಟ ಕೂಲಿ ಕೊಡುತ್ತಿಲ್ಲ, ಲೈಂಗಿಕ ಕಿರುಕುಳ ಇತ್ಯಾದಿ ಬೇಡಿಕೆಗಳ ಮೇಲೆ ಹೋರಾಟಗಳನ್ನು ನಡೆಸಿದವು. ಇದರ ಪ್ರಭಾವ ಬೇರೆ ಗಾರ್ಮೆಂಟ್, ಉದಾಹರಣೆಗೆ ಮೋಹನ್ ಗಾರ್ಮೆಂಟ್ಸ್, ಟೆಕ್ಸಾಸ್ ಇತ್ಯಾದಿ. ಈ ಹೋರಾಟಗಳ ಫಲವಾಗಿ ಕನಿಷ್ಟ ಕೂಲಿ ಕೊಡದ ಹಲವು ಕಡೆಗಳಲ್ಲಿ ಕೂಲಿ ಹೆಚ್ಚಾಯಿತು, ವರ್ಕ್‌ಲೋಡ್ ಕಡಿಮೆಯಾಯಿತು. 1996ರಲ್ಲಿ ಗಾರ್ಮೆಂಟ್ ಕಾರ್ಮಿಕರ ಸಮಾವೇಶ ನಡೆಯಿತು. ಅದರಲ್ಲಿ ಕಾರ್ಮಿಕ ಇಲಾಖೆಯ ರಾಜ್ಯಮಂತ್ರಿ ಸತ್ಯನಾರಾಯಣ ಬಂದಿದ್ದರು, ಲೇಬರ್ ಕಮಿಶನರ್ ಕೂಡ ಬಂದಿದ್ದರು. ಗಾರ್ಮೆಂಟ್ ಕ್ಷೇತ್ರದ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದು ಒಂದು ತ್ರಿಪಕ್ಷೀಯ ಸಮಿತಿ ರಚಿಸಲಾಯಿತು. ಅದರಲ್ಲಿ ಕಾರ್ಮಿಕರ ಪರವಾಗಿ ನಾನೂ ಒಬ್ಬ ಮೆಂಬರ್. ಲೇಬರ್ ಕಮಿಶನರ್ ಅದಕ್ಕೆ ಕಾರ್ಯದರ್ಶಿಯಾಗಿದ್ದರು. ಈ ಸಮಿತಿ ಎಲ್ಲ ಕಂಪನಿಗಳಿಗೆ ಭೇಟಿ ಕೊಟ್ಟಿತು. ಈ ನಡುವೆ ಸಮ್ರಾಟ್ ಕಂಪನಿ ದುರಾಡಳಿತದಿಂದ ಮುಚ್ಚಿ ಹೋಗಿದ್ದರೂ ಚಳುವಳಿಗೆ ಬಹಳ ಹಿನ್ನೆಡೆಯಾಗಿಲ್ಲ



•ಈ ವರ್ಷ ಇದ್ದಕ್ಕಿದ್ದಂತೆ ಗಾರ್ಮೆಂಟ್ ಕಾರ್ಮಿಕರ ಆಕ್ರೋಶ ಭುಗಿಲೆದ್ದಿತು– ಮುಖಂಡತ್ವ ಇಲ್ಲದೆಯೇ.

ಗಾರ್ಮೆಂಟ್ ಕಾರ್ಮಿಕರಿಗೆ ಕೆಲವೊಮ್ಮೆ ಮುಖಂಡತ್ವವೇ ಬೇಕಿಲ್ಲ. ಇವರು ಬಹಳ ಒತ್ತಡದಲ್ಲಿ, ಲೈಂಗಿಕ ಕಿರುಕುಳದ ಅಡಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆಕ್ರೋಶ ಬಂದರೆ ಒಟ್ಟಾಗಿ ಹೊರಗೆ ಬಂದು ಬಿಡುತ್ತಾರೆ. ಅವರ ಮನೆ ಬಾಡಿಗೆ ಇತ್ಯಾದಿ ಕಷ್ಟದ ಪರಿಸ್ಥಿತಿಗಳಿಂದಾಗಿ ಐದು ವರ್ಷ ಆದ ಕೂಡಲೇ ಪಿಎಫ್ ತಗೊಂಡು ಬಿಡ್ತಾರೆ. ಮೆನೇಜ್‌ಮೆಂಟ್ ವಂತಿಗೆಯನ್ನೂ ಸೇರಿಸಿಕೊಂಡು ತಗೊಂಡರೆ ಅವರಿಗೆ ಯಾವುದಕ್ಕಾದರೂ ಉಪಯೋಗಕ್ಕೆ ಬರುತ್ತದೆ, ಮತ್ತೆ ಹೊಸದಾಗಿ ಕೆಲಸ ಮುಂದುವರಿಸ್ತಾರೆ, ಅದೇ ಕಂಪನಿಯಲ್ಲಿ ಅಥವ ಕೆಲವೊಮ್ಮೆ ಆ ಹೊತ್ತಿಗೆ ಆ ಕಂಪನಿಯ ಹೆಸರೂ ಬದಲಾಗ್ತದೆ. ಅವರ ನಡುವೆ ನಿಕಟವಾಗಿ ಕೆಲಸ ಮಾಡಿದರೆ ಇವನ್ನೆಲ್ಲ ತಿಳಿದುಕೊಂಡು ಸಂಘಟನೆ ನಡೆಸಬಹುದು.

•ಈಗ ಸುಮಾರು 15 ವರ್ಷ ಆಗಿದೆ. ಈ ಕ್ಷೇತ್ರದ ಸ್ವರೂಪ ಬದಲಾಗಿದೆಯೇ, ಮೊದಲಿನ ರೀತಿಯಲ್ಲೇ ಸಂಘಟನೆ ಮಾಡಲು ಸಾಧ್ಯ ಅನ್ನುತ್ತೀರಾ? ಅದೂ ಐದು ವರ್ಷ ಆದ ಕೂಡಲೇ ಪಿಎಫ್ ತಗೊಳ್ಳಲಿಕ್ಕೆ ಕೆಲಸ ಬಿಡುವಂತಹ ಪರಿಸ್ಥಿತಿಯಲ್ಲಿ.

ಬಹಳ ಬದಲಾವಣೆ ಆದ ಹಾಗೆ ಅನಿಸುವುದಿಲ್ಲ. ಐದು ವರ್ಷದ ನಂತರ ಕೆಲಸ ಬಿಡುವುದಿಲ್ಲ, ಬೇರೆ ಕಡೆ ಕೆಲಸ ಮಾಡುತ್ತಾರಷ್ಟೇ. ಆದ್ದರಿಂದ ಕಾಮನ್ ಡಿಮಾಂಡುಗಳನ್ನು ರೂಪಿಸಬೇಕು. ಹಿಂದಿನ ತ್ರಿಪಕ್ಷೀಯ ಸಮಿತಿಯ ಮೂಲಕ ಕನಿಷ್ಟ ಕೂಲಿ ಜಾರಿ ಮಾಡಲು ಪ್ರಯತ್ನಿಸಿದ್ದೆ. ನನಗೆ ಕಾಣ್ತದೆ. ಬಹುಶಃ ಯೂನಿಯನ್ ಅಂತ ಹೋದರೆ ಕಷ್ಟವಾಗಬಹುದೇನೋ. ಈ ಬಗ್ಗೆ ಕೂತು ಯೋಚಿಸಬೇಕು. ಪ್ರದೇಶವಾರು ಮಾಡಬಹುದು. ಮೊನ್ನೆ ಜೈಲಿಗೆ ಹಾಕಿದವರಲ್ಲಿ ಬಹಳಷ್ಟು ಮಂದಿಯನ್ನು ಸಂಪರ್ಕಿಸಿದ್ದೆ. ನಿಜ ಹೊಸದಾಗಿ ಸಂಘಟಿಸುವಲ್ಲಿ ರಿಸ್ಕ್ ಇದೆ. ಆದರೂ ನಿಕಟ ಸಂಪರ್ಕ, ಸಾಮಾಜಿಕ ಸಂಬಂಧ ಬೆಳೆಸಿಕೊಂಡು ನಾವು ಗಟ್ಟಿಯಾಗಿ ನಿಂತರೆ ಸಾಧ್ಯ ಇದೆ. ಅವರ ವಸತಿ ಸಮಸ್ಯೆ ಮುಂತಾದವುಗಳನ್ನು ಎತ್ತಿಕೊಳ್ಳಬೇಕು. ಈ ಕೆಲಸ ಮಾಡಲು ಕಾರ್ಯಕರ್ತರನ್ನು ಹುಡುಕಿಕೊಳ್ಳಬೇಕು. ಇದೂ ಸಾಧ್ಯವಿಲ್ಲ ಅಂತೇನೂ ಅಲ್ಲ. ತೀವ್ರವಾಗಿ ಸಮಸ್ಯೆಗಳು ಬರಬಹುದು. ಅದನ್ನು ಎದುರಿಸಲು ಸಿದ್ಧರಾಗಿರಬೇಕು. ಸುಮಾರು 500 ಯೂನಿಟ್‌ಗಳಿದ್ದು 5ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಾರೆ. ಹೆಚ್ಚಿನವರು ಹಳ್ಳಿಯವರು. ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರೆ ಸಂಘಟನೆ ಬೆಳೆಸಲು ಸಾಧ್ಯ ಎಂದು ನನ್ನ ಅಭಿಪ್ರಾಯ.

•16 ವರ್ಷಗಳ ನಂತರ ಹಿಂತಿರುಗಿ ನೋಡುವಾಗ ಬಿಪಿಎಲ್ ಹೋರಾಟದ ಮಹತ್ವ ಏನು ಎಂದು ನಿಮಗೆ ಅನಿಸುತ್ತಿದೆ?

ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ ಹೋರಾಟ ತುಂಬ ಅಗತ್ಯ ಇತ್ತು. ಅದನ್ನು ತಾರ್ಕಿಕ ಅಂತ್ಯದ ವರೆಗೆ ತಗೊಂಡು ಹೋಗಿದ್ದೇವೆ ಎಂದು ಹೇಳಬಲ್ಲೆ. ಮಾಲಕ ನಮ್ಮನ್ನು ಜೈಲಿಗೆ ಕಳಿಸಿದರೂ ಇದನ್ನು ತಡೆಯಲಾಗಲಿಲ್ಲ. ಇದು ಕೇವಲ ಸಂಬಳಕ್ಕಾಗಿ ನಡೆದ ಹೋರಾಟವಲ್ಲ. ಕಾರ್ಮಿಕರ ಹಕ್ಕುಗಳಿಗಾಗಿ ನಡೆದ ಹೋರಾಟ. ಇದರಲ್ಲಿ ಬಿಪಿಎಲ್ ಮಾತ್ರವಲ್ಲ ಎಲ್ಲ ಕಾರ್ಮಿಕರ ಸಾರ್ವತ್ರಿಕ ಪ್ರಶ್ನೆಗಳು, ಅಂ

ಪುಟ 17 ನೋಡಿ

'371(ಜೆ) ಕಲಂ ಜಾರಿ' ವಿಚಾರ ಸಂಕಿರಣ

'ಹಮ್ ಲಡೆಂಗೆ, ರೋಯೆಂಗೆ ನಹಿ' : ಯೆಚುರಿ



"ಬಡತನ, ಹಸಿವು, ಪ್ರಾದೇಶಿಕ ಅಸಮಾನತೆ– ಎಲ್ಲಕ್ಕೂ ಜನಾಂದೋಲನವೇ ಉತ್ತರ ಎಂದರು ಸಿ.ಪಿ.ಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ. ಸೀತಾರಾ ಯೆಚೂರಿ. ಕನ್ನಡ–ತೆಲುಗು ಭಾಷೆಗಳಲ್ಲಿರುವ 'ಮಗು ಅತ್ತರೆ ಮಾತ್ರ ತಾಯಿ ಹಾಲುಣಿಸುತ್ತಾಳೆ' ಎಂಬ ನಾಣ್ಣುಡಿಯನ್ನು ಉಲ್ಲೇಖಿಸುತ್ತಾ ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಸಂಘಟಿತ ಪ್ರಯತ್ನಬೇಕು ಎಂದರು. 'ಹಮ್ ರೋಯೆಂಗೆ ನಹಿ, ಲಡೆಂಗೆ' ಎಂದು ಹೇಳುತ್ತಾ, ಸಂವಿಧಾನದ ಪರಿಚ್ಛೇದ 371(ಜೆ)ಯ ಪರಿಣಾಮಕಾರಿ ಅನುಷ್ಠಾನವು ಜನರ ಸಂಘಟಿತ ಪ್ರಯತ್ನವಿಲ್ಲದಿದ್ದರೆ ಯಶಸ್ವಿಯಾಗುವುದಿಲ್ಲ ಎಂದು ಹೇಳಿದರು. ಕಾ. ಯೆಚೂರಿ ಅವರು "371(ಜೆ) ಕಲಂ ಜಾರಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ: ವರ್ತಮಾನದ ಪ್ರಶ್ನೆಗಳು" ಈ ವಿಷಯವನ್ನು ಕುರಿತಂತೆ 371(ಜೆ) ಕಲಂ ಜಾರಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಆಂದೋಲನ ಸಮಿತಿಯು ಆಗಸ್ಟ್ 27 ಮತ್ತು 28, 2016ರಂದು ಕಲಬುರಗಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವೊಂದನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಉದ್ಘಾಟನೆಗೆ ಮೊದಲು ಪ್ರಾಸ್ತಾವಿಕ ಮಾತನಾಡಿದ ಕಾ. ಮಾರುತಿ ಮಾನ್ಪಡೆ ಅವರು ಸಂವಿಧಾನದ ಕಲಂ 371 (ಜೆ)ನ ಅನುಷ್ಠಾನ ಹೇಗೆ ದಾರಿ ತಪ್ಪಿದೆ ಎಂಬುದನ್ನು ವಿವರಿಸಿದರು. ಮಾನವ ಅಭಿವೃದ್ಧಿಯಲ್ಲಿ ಹೈ.ಕ.ಪ್ರದೇಶದ ಜಿಲ್ಲೆಗಳು ಎಷ್ಟು ಹಿಂದುಳಿದಿವೆ ಎಂಬುದನ್ನು ವಿವರಿಸಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಲಿಂಗ ಸಮಾನತೆ, ದಲಿತರ ಅಭಿವೃದ್ಧಿ ಮುಂತಾದ ಜನರ ಧಾರಣಾ ಸಾಮರ್ಥ್ಯವನ್ನು ಉತ್ತಮ ಪಡಿಸುವ ಸಂಗತಿಗಳ ಮಹತ್ವವನ್ನು ಒತ್ತಿ ಹೇಳಿದರು. ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಎಸ್. ಕೆ. ಕಾಂತ, ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಅವರು ಭಾಗವಹಿಸಿದ್ದರು.



ಎರಡು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ 4 ಗೋಷ್ಠಿಗಳಲ್ಲಿ 371(ಜೆ) ಕಲಂ ಜಾರಿಯ ವಿವಿಧ ಆಯಾಮಗಳ ಬಗ್ಗೆ ವಿವರವಾದ ನಿರೂಪಣೆ–ಸಂವಾದಗಳು ನಡೆದವು. ಶ್ರೀರಾಮರೆಡ್ಡಿ ಅಧ್ಯಕ್ಷತೆ ವಹಿಸಿದ್ದ 'ಕೃಷಿ ಬಿಕ್ಕಟ್ಟು ಹಾಗೂ ಪರಿಹಾರ ಮಾರ್ಗಗಳು' ಗೋಷ್ಠಿಯಲ್ಲಿ ಕೃಷಿ ಬಗ್ಗೆ ಡಾ. ಚಿದಾನಂದ ಮನ್ಸೂರ್. ಹೈನುಗಾರಿಕೆ ಬಗ್ಗೆ ಡಾ. ಪಿ.ಎನ್.ಸಜ್ಜನ, ವಿಷಯ ಮಂಡನೆ ಮಾಡಿದರು. 'ಉದ್ಯೋಗ ಸೃಷ್ಟಿ ಮತ್ತು ಕೈಗಾರಿಕೆ' ಗೋಷ್ಠಿಯಲ್ಲಿ ಮುಖ್ಯ ವಿಷಯದ ಬಗ್ಗೆ ಡಾ. ಗುರುನಾಥ ಕುಲಕರ್ಣಿ, 'ಹೈದರಾಬಾದ್ ಕರ್ನಾಟಕದ ಕೈಗಾರಿಕೆಗಳು' ಬಗ್ಗೆ ಸೋಮಶೇಖರ ಟೆಂಗಳಿ ವಿಷಯ ಮಂಡನೆ ಮಾಡಿದರು. ಕಾ. ವಿ.ಜೆ. ಕೆ.ನಾಯರ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

'ಮಹಿಳಾ ಅಭಿವೃದ್ಧಿ, ಶಿಕ್ಷಣ, ಆರೋಗ್ಯ' ಬಗ್ಗೆ ಎರಡನೇ ದಿನದ ಮೊದಲ ಗೋಷ್ಠಿ ಇತ್ತು. ಅಧ್ಯಕ್ಷತೆಯನ್ನು ಡಾ. ಎ.ಎಚ್. ರಾಜಾಸಾಬ್ (ಕುಲಪತಿಗಳು, ತುಮಕೂರು ವಿ.ವಿ.) ವಹಿಸಿದ್ದರು. ಗೋಷ್ಠಿಯಲ್ಲಿ ಶಾರದ ಗೋಪಾಲ್ 'ಮಹಿಳಾ ಅಭಿವೃದ್ಧಿ' ಬಗ್ಗೆ, 'ದಲಿತ ಸಂವೇದನೆ' ಬಗ್ಗೆ ಡಾ. ರಾಜೇಂದ್ರ ಚೆನ್ನಿ, ಆರೋಗ್ಯದ ಬಗ್ಗೆ ಡಾ. ಎಸ್. ಎಸ್. ಗುಬ್ಬಿ, ವಿಷಯ ಮಂಡನೆ ಮಾಡಿದರು.

ಕೊನೆಯ ಗೋಷ್ಠಿ 'ಹೈದರಾಬಾದ್ ಕರ್ನಾಟಕದ ಮಾನವ ಅಭಿವೃದ್ಧಿ'ಯ ಅಧ್ಯಕ್ಷತೆಯನ್ನು ಡಾ. ಎಸ್.ಆರ್. ನಿರಂಜನ್ (ಕುಲಪತಿಗಳು, ಗುಲ್ಬರ್ಗ ವಿ.ವಿ.) ವಹಿಸಿದ್ದರು. ಈ ಗೋಷ್ಠಿಯಲ್ಲಿ 'ಡಿ.ಎಂ. ನಂಜುಂಡಪ್ಪ ವರದಿ' ಬಗ್ಗೆ ಡಾ. ಟಿ.ಆರ್. ಚಂದ್ರಶೇಖರ್, 'ಕಲಂ 371(ಜೆ) ಜಾರಿ' ಬಗ್ಗೆ ಡಾ. ಉಸ್ತಾದ್ ರಜಾಕ್, 'ಹೈದರಾಬಾದ್ ಕರ್ನಾಟಕದ ಮಾನವ ಅಭಿವೃದಿ ಅನುಸರಿಸಬೇಕಾದ ಮಾರ್ಗೋಪಾಯಗಳು' ಬಗ್ಗೆ ಜಿ.ಟಿ.ಬಾಗಲಕೋಟ ವಿಷಯ ಮಂಡನೆ ಮಾಡಿದರು.

ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್ ಅವರು ಹೈ.ಕ.ಪ್ರ.ದ ಅಭಿವೃದ್ಧಿಗೆ ಮತ್ತು ಕಲಂ 371(ಜೆ) ಜಾರಿಗೆ ಏನೆಲ್ಲ ಪ್ರಯತ್ನ ನಡೆಯುತ್ತಿದೆ ಎಂಬುದನ್ನು ವಿವರಿಸಿದರು. ಕಲಂ 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರ ನೇಮಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಭಿವೃದ್ಧಿ ಸಚಿವರಾದ ಶ್ರೀ ಎಚ್.ಕೆ. ಪಾಟೀಲರ ಅಧ್ಯಕ್ಷತೆಯಲ್ಲಿನ ಸಮಿತಿಯು ಮಾಡಿರುವ ಶಿಫಾರಸ್ಸುಗಳೆಲ್ಲವನ್ನು ಒಪ್ಪಿಕೊಂಡು ಜಾರಿಗೆ ತರಬೇಕು ಎಂಬ ವಿಚಾರ ಸಂಕಿರಣದ ನಿರ್ಣಯದ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು. ವಿಚಾರ ಸಂಕಿರಣದ ನಿರ್ಣಯಗಳನ್ನು ಕಾ. ಮಾರುತಿ ಮಾನ್ಪಡೆ ಅವರು ಮಂಡಿಸಿದರು.

ಈ ವಿಚಾರ ಸಂಕಿರಣದಲ್ಲಿ ಹೈ.ಕ.ಪ್ರ.ದ ಕಾಲೇಜು/ವಿ.ವಿ.ಗಳ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು, ಆರು ಜಿಲ್ಲೆಗಳ ಎಡಪಂಥೀಯ ಕಾರ್ಯಕರ್ತರು ಮತ್ತು ಇತರ ಆಸಕ್ತರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಾಮಾಜಿಕ ಕಾರ್ಯಕರ್ತರಾದ ಪ್ರೊ. ಎಸ್.ಎಲ್ ಪಾಟೀಲ, ಡಾ. ಅಂಬಾರಾಯ ಹಾಗರಿಗಿ, ಡಾ. ಅಜೀಮ್ ಪಾಶ, ಚನ್ನಬಸಪ್ಪ ಮಮಶೆಟ್ಟಿ, ಡಾ. ಕೆ.ಎಚ್.ಮಲ್ಲಿಕಾರ್ಜುನ, ಶಂಕರಯ್ಯ ಘಂಟಿ ಮತ್ತು ಡಾ.ಶಿವಗಂಗಾ ರುಮ್ಮ ಮುಂತಾದವರ ಅವಿರತ ಶ್ರಮದ ಫಲವಾಗಿ ಎರಡು ದಿನಗಳ ವಿಚಾರ ಸಂಕಿರಣ ಯಶಸ್ವಿಯಾಗಿ ನಡೆಯಿತು.

ನಿರ್ಣಯಗಳು

- 371(ಜೆ) ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚನೆ ಮಾಡಬೇಕು
- 371(ಜೆ) ಅನುಷ್ಠಾನದಲ್ಲಿ ಇರುವ ಕಾನೂನು ತೊಡಕುಗಳನ್ನು ನಿವಾರಿಸಲು ಮುಖ್ಯಮಂತ್ರಿ ಮಧ್ಯೆ ಪ್ರವೇಶಿಸಿ ಕ್ರಮ ಕೈಗೊಳ್ಳಬೇಕು
- ಸಚಿವ ಎಚ್.ಕೆ.ಪಾಟೀಲ್ ಅಧ್ಯಕ್ಷತೆಯ ಸಚಿವ ಸಂಪುಟ ಉಪಸಮಿತಿ ನೀಡಿರುವ 20 ಅಂಶಗಳ ವರದಿಯನ್ನು ಸಂಪೂರ್ಣ ಅನುಷ್ಠಾನ ಮಾಡಬೇಕು
- ಹೈದರಾಬಾದ್ ಕರ್ನಾಟಕ ಭಾಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಪಡೆಯುವುದಕ್ಕಾಗಿ ದೆಹಲಿಗೆ ನಿಯೋಗ ತೆರಳಬೇಕು
- ಸರ್ಕಾರದ ಮೇಲೆ ಒತ್ತಡ ಹೇರಲು ಹೋರಾಟ, ಚಳುವಳಿ ರೂಪಿಸಬೇಕು

371(ಜೆ) ಕಲಂ ಜಾರಿ

(ಆಶಯ ಪ್ರಬಂಧದ ಆಯ್ದ ಭಾಗಗಳು)

ಡಾ. ಟಿ.ಆರ್.ಚಂದ್ರಶೇಖರ್

ಕಳೆದ 60 ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿ ನಡೆದಿದೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳು ರಾಜ್ಯಮಟ್ಟದ ಅಭಿವೃದ್ಧಿ ಸೂಚಿಗಳಿಗೆ ಹೋಲಿಸಿದರೆ ಅತ್ಯಂತ ಹಿಂದುಳಿದಿರುವ ಸಂಗತಿ ತಿಳಿಯುತ್ತದೆ. ಕರ್ನಾಟಕ ಸರ್ಕಾರವು ಮೇ 3, 1980ರಂದು ಶ್ರೀ ಧರ್ಮಸಿಂಗ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಸರ್ಕಾರಕ್ಕೆ ನೀಡಿದ ವರದಿಯ ಪರಿಣಾಮವಾಗಿ 1991ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಅಸ್ತಿತ್ವಕ್ಕೆ ಬಂತು. ತದನಂತರ ಇದನ್ನು ಡಾ. ಡಿ. ಎಂ. ನಂಜುಂಡಪ್ಪ ಸಮಿತಿ ವರದಿ(2002), ಕರ್ನಾಟಕ ಮಾನವ ಅಭಿವೃದ್ಧಿ ವರದಿ(2005), ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು(2014), ಜನಗಣತಿ ವರದಿಗಳು(2011), ಸರ್ಕಾರದ ಪ್ರಕಟಣೆಗಳು ಖಚಿತ ಪಡಿಸುತ್ತಿವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಭಿವೃದ್ಧಿ ನಡೆದಿದೆ. ಅದರ ಜೊತೆಯಲ್ಲಿ ಬಡತನ ಜನರ ಬದುಕಿನಲ್ಲಿ ಹಾಸುಹೊಕ್ಕಲಾಗಿದೆ, ಅಸಮಾನತೆ ತಾಂಡವವಾಡುತ್ತಿದೆ. ಜನರು, ಹಿಂದುಳಿದ ವರ್ಗದ ಜನರು, ಪ.ಜಾ, ಪ.ಪಂ., ಅಲ್ಪಸಂಖ್ಯಾತರ ಬದುಕು ಉಳ್ಳವರಿಗೆ ಹೋಲಿಸಿದರೆ ಯಾತನಾಮಯವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ.ಜಾ, ಪ.ಪಂ ಮತ್ತು ಅಲ್ಪಸಂಖ್ಯಾತರ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ.45ಕ್ಕಿಂತ ಅಧಿಕವಿದೆ. ಒಟ್ಟು ದುಡಿಮೆಗಾರರಲ್ಲಿ(2011) ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ರಾಜ್ಯಮಟ್ಟದಲ್ಲಿ ಶೇ.26ರಷ್ಟಿದ್ದರೆ ಇಲ್ಲಿ ಅದು ಶೇ.40ಕ್ಕಿಂತ ಅಧಿಕವಾಗಿದೆ.

ಡಾ.ಡಿ.ಎಂ.ನಂಜುಂಡಪ್ಪ ಸಮಿತಿ ವರದಿ

ನಮ್ಮ ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆ ಕುರಿತಂತೆ ಸರ್ಕಾರ 2000ದಲ್ಲಿ ನೇಮಿಸಿದ್ದ ಪ್ರಾದೇಶಿಕ ಅಸಮಾನತೆ ಅಧ್ಯಯನದ ಉನ್ನತಾಧಿಕಾರ ಸಮಿತಿಯು ನೀಡಿದ ವರದಿಯು ಅತ್ಯಂತ ವೈಜ್ಞಾನಿಕವಾಗಿ ಪ್ರಾದೇಶಿಕ ಅಸಮಾನತೆಯ ಆಳ–ಹರಹುಗಳನ್ನು ಮಾಪನ ಮಾಡಿ ಪ್ರಾದೇಶಿಕ ಅಸಮಾನತೆಯ ಪ್ರಮಾಣವನ್ನು ತೋರಿಸಿಕೊಟ್ಟಿತು. ಈ ಸಮಿತಿಯು ರೂಪಿಸಿದ್ದ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ ಎಂಬ ಮಾಪನದ ಆಧಾರದಲ್ಲಿ 114 ತಾಲ್ಲೂಕುಗಳು ರಾಜ್ಯದಲ್ಲಿ ಹಿಂದುಳಿದಿವೆ ಎಂದು ಗುರುತಿಸಿತು. ಸಮಿತಿಯು ಹಿಂದುಳಿದಿರುವ 114 ತಾಲ್ಲೂಕುಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಿತು. ಸಮಿತಿಯ ವರದಿ ಪ್ರಕಾರ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ 39. ಈ 39ರಲ್ಲಿ 21 ತಾಲ್ಲೂಕುಗಳು(ಶೇ.53.86) ಕಲಬುರಗಿ ವಿಭಾಗಕ್ಕೆ ಸೇರಿವೆ. ಅಂದರೆ ಕಲಬುರಗಿ ವಿಭಾಗದ 31 ತಾಲ್ಲೂಕುಗಳ ಪೈಕಿ 21 ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿವೆ. ಡಾ. ಡಿ. ಎಂ. ನಂಜುಡಪ್ಪ ಸಮಿತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು ದುಸ್ಥಿತಿ ಸೂಚ್ಯಂಕ 20.26. ಇದರಲ್ಲಿ ಕಲಬುರಗಿ ವಿಭಾಗದ ಪಾಲು 8.06(ಶೇ40). ಅಂದರೆ ರಾಜ್ಯದ ಒಟ್ಟು ಹಿಂದುಳಿದಿರುವಿಕೆಯಲ್ಲಿ ಕಲಬುರಗಿ ವಿಭಾಗದ ಪಾಲು ಶೇ40. ಈ ವರದಿಯ ವೈಜ್ಞಾನಿಕ ಮತ್ತು ವಸ್ತುನಿಷ್ಠ ಅಧ್ಯಯನದಿಂದಾಗಿ ರಾಷ್ಟ್ರಮಟ್ಟದಲ್ಲಿ ಸಂವಿಧಾನಾತ್ಮಕ ನೆರವು ದೊರೆಯುವುದು ಸಾಧ್ಯವಾಯಿತು. ಅದೇ ಅನುಚ್ಛೇದ 371 (ಜೆ). ಈ ಅನುಚ್ಛೇದದ ಪ್ರಕಾರ ಕಲಬುರಗಿ ವಿಭಾಗದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ಪ್ರಾಪ್ತವಾಯಿತು. ಈ ಅನುಚ್ಛೇದ 371(ಜೆ) ಅಡಿಯಲ್ಲಿ ವಿಭಾಗದ ದುಡಿಮೆಗಾರರಿಗೆ ಮೀಸಲಾತಿ ಸೌಲಭ್ಯ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶದಲ್ಲಿ ವಿಶೇಷ ಅವಕಾಶ ದೊರೆಯುವಂತಾಯಿತು.

ಇತ್ತೀಚಿಗೆ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು ನಾಡಿನ ಜಿಲ್ಲಾ ಪಂಚಾಯತಿಗಳ ಜೊತೆ ಸೇರಿಕೊಂಡು ಪ್ರಕಟಿಸಿರುವ ಎಲ್ಲ 30 ಜಿಲ್ಲೆಗಳ ಮಾನವ ಅಭಿವೃದ್ಧಿ ವರದಿಗಳು(2014) ಇನ್ನಿಲ್ಲದಂತೆ ನಾಡನ್ನು ಕಾಡುತ್ತಿರುವ ಪ್ರಾದೇಶಿಕ ಅಸಮಾನತೆಯನ್ನು ದೃಢಪಡಿಸಿವೆ.

ಕೋಷ್ಟಕದಲ್ಲಿನ (ಕೋಷ್ಟಕ 1) ಮೌಲ್ಯಗಳ ನಡುವಿನ ಅಸಮಾನತೆಯನ್ನು ವಿವರಿಸುವ ಅಗತ್ಯವಿಲ್ಲ. ಮಾನವ ಅಭಿವೃದ್ಧಿಯ ಸಂಭಾವ್ಯ ಸೂಚ್ಯಂಕ ಮೌಲ್ಯ 1.00. ಅದರಿಂದ ದೂರವಿದ್ದಷ್ಟು ದುಸ್ಥಿತಿ ಅಧಿಕವೆಂತಲೂ, ಅದಕ್ಕೆ ಹತ್ತಿರವಿದ್ದಷ್ಟು ಸುಸ್ಥಿತಿ–ಸಮೃದ್ಧತೆ ಎಂತಲೂ ತಿಳಿಯಬಹುದು.

ನಮ್ಮ ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆ ಜಾರಿಗೆ

ಪುಟ 18 ಕ್ಕೆ

ಕೋಷ್ಟಕ 1: ಕರ್ನಾಟಕದಲ್ಲಿ ಮುಂದುವರಿದ ಜಿಲ್ಲೆಗಳ ಮತ್ತು ಹಿಂದುಳಿದ ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕ 2014

ಕ್ರ.ಸಂ.	ಹಿಂದುಳಿದ ಜಿಲ್ಲೆಗಳು	ಮಾನವ ಅಭಿವೃದ್ಧಿ ಸೂಚ್ಯಂಕ 2014	ಮುಂದುವರಿದ ಜಿಲ್ಲೆಗಳು	ಮಾನವ ಅಭಿವೃದ್ಧಿ ಸೂಚ್ಯಂಕ 2014
1	ರಾಯಚೂರು	0.165	ದಕ್ಷಿಣ ಕನ್ನಡ	0.691
2	ಯಾದಗೀರ್	0.196	ಚಿಕ್ಕಮಗಳೂರು	0.627
3	ಕೊಪ್ಪಳ	0.280	ಧಾರವಾಡ	0.610
4	ಬೀದರ್	0.430	ಉಡುಪಿ	0.675
5	ಬಳ್ಳಾರಿ	0.354	ಬೆಂಗಳೂರು ಗ್ರಾಮಾಂತರ	0.603
6	ಕಲಬುರಗಿ	0.407	ಶಿವಮೊಗ್ಗ	0.596

ಮೂಲ: ಕರ್ನಾಟಕ ಸರ್ಕಾರ. ಸಂಬಂಧಿಸಿದ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು, 2014. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳು.

ಅರ್ಧ ಅವಧಿ ಕಳೆದರೂ ಬಡತನ ಎಷ್ಟಿದೆ ಎಂದು ತಿಳಿಯ ಬಯಸದ 'ಕನಿಷ್ಟ ಆಳ್ವಿಕೆ'!



ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು 'ಒಳ್ಳೆಯ ದಿನಗಳ' ವಚನವಿತ್ತು ಅಧಿಕಾರದ ಗದ್ದುಗೆ ಏರಿದ ಸರಕಾರ ನೇಮಿಸಿದ ಕಾರ್ಯಪಡೆ ಬಡತನದ ರೇಖೆ ನಿರೂಪಿಸುವುದು ತನಗಾಗದು, ಅದಕ್ಕೆ ಮತ್ತೊಂದು ಗುಂಪು ನೇಮಿಸಿ ಎಂದು ಹೇಳಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ಹೇಳಿದ್ದಾರೆ.

ಭಾರತದಲ್ಲಿ ಬಡತನದ ಪ್ರಮಾಣ ಎಷ್ಟು? ಇದನ್ನು ನಿರ್ಧರಿಸಲು ಕಳೆದ 11 ವರ್ಷಗಳಲ್ಲಿ ಮೂರು ಸಮಿತಿಗಳನ್ನು ನೇಮಿಸಲಾಗಿದೆ. 2005ರಲ್ಲಿ ಯುಪಿಎ–1 ಸರಕಾರ ನೇಮಿಸಿದ ತೆಂಡುಲ್ಕರ್ ಸಮಿತಿ 2009ರಲ್ಲಿ ಸಲ್ಲಿಸಿದ ವರದಿಯಲ್ಲಿ ನಗರಪ್ರದೇಶಗಳಲ್ಲಿ ದಿನಕ್ಕೆ 33ರೂ.ಗಿಂತ ಹೆಚ್ಚು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 27ರೂ.ಗಳಿಗಿಂತ ಹೆಚ್ಚು ಖರ್ಚು ಮಾಡಬಲ್ಲವರು ಬಡವರಲ್ಲ ಎಂದಿತು. ಇದು ಹಾಸ್ಯಾಸ್ಪದ ಎಂದು ಬಹಳಷ್ಟು ಟೀಕೆ ಬಂದುದರಿಂದ 2012ರಲ್ಲಿ ಮತ್ತೊಂದು ಸಮಿತಿಯನ್ನು ಮಾಜಿ ರಿಝರ್ವ್ ಬ್ಯಾಂಕ್ ಗವರ್ನರ್ ರಂಗರಾಜನ್ ನೇತೃತ್ವದಲ್ಲಿ ಇನ್ನೊಂದು ಸಮಿತಿ ನೇಮಿಸಲಾಯಿತು. ಇದು 2014ರಲ್ಲಿ ನೀಡಿದ ವರದಿ ಈ ಮಿತಿಗಳನ್ನು ತುಸು ಏರಿಸಿತು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅನುಕ್ರಮವಾಗಿ 47ರೂ. ಮತ್ತು 32ರೂ.ಗಿಂತ ಹೆಚ್ಚು ಖರ್ಚುಮಾಡಬಲ್ಲವರು ಬಡವರಲ್ಲ ಎಂದು ನಿರೂಪಿಸಿತು. ತೆಂಡುಲ್ಕರ್ ಸಮಿತಿಯ ನಿರೂಪಣೆಯ ಪ್ರಕಾರ 21.9% ಮಂದಿ ಅಂ–ದರೆ 27 ಕೋಟಿ ಬಡವರು. ರಂಗರಾಜನ್ ಸಮಿತಿಯ ಪ್ರಕಾರ ಇದು 36.3ಕೋಟಿ, ಅಂದರೆ 29.5ಶೇ.ಕ್ಕೇರುತ್ತದೆ.

ಇದರಿಂದ ವಿವಾದ ಬಗೆಹರಿಯಲಿಲ್ಲ, ಮುಂದುವರೆಯಿತು. ಅಧಿಕಾರಕ್ಕೆ ಬಂದ ಕೂಡಲೇ 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಎಂಬ ಅಬ್ಬರದ ಮಾತುಗಳೊಂದಿಗೆ ಯೋಜನಾ ಆಯೋಗವನ್ನೇ ಬರ್ಖಾಸ್ತು ಮಾಡಿದ ಮೋದಿಯವರು ತಾನೇ ಕೈಯಾರೆ ಆರಿಸಿದ 'ನೀತಿ ಆಯೋಗ'ದ ಉಪಾಧ್ಯಕ್ಷ ಅರವಿಂದ ಪನಗರಿಯ ನೇತೃತ್ವದಲ್ಲಿ ಈ ಬಗ್ಗೆ ಒಂದು 16 ಸದಸ್ಯರಿದ್ದ ಕಾರ್ಯಪಡೆಯನ್ನು ನೇಮಿಸಿದರು. ಅದು ಸುಮಾರು ಒಂದೂವರೆ ವರ್ಷ ತಲೆ ಚಚ್ಚಿಕೊಂಡ ನಂತರ ಕಳೆದ ತಿಂಗಳಲ್ಲಿ ಪ್ರಧಾನಿಗಳಿಗೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದು, ಈ ಬಗ್ಗೆ ಒಂದು ಒಮ್ಮತ ಬರಲು ತನಗೆ ಸಾಧ್ಯವಾಗಿಲ್ಲ, ವಿಶೇಷಜ್ಞರ ಇನ್ನೊಂದು ತಂಡಕ್ಕೆ ಈ ಕೆಲಸವನ್ನು ಒಪ್ಪಿಸಬೇಕು ಎಂದು ಸೂಚಿಸಿರುವುದಾಗಿ 'ಹಿಂದುಸ್ತಾನ್ ಟೈಮ್ಸ್"(ಸಪ್ಟಂಬರ್12)ನಲ್ಲಿ ಮೌಷುಮಿ ದಾಸ್‌ಗುಪ್ತ ವರದಿ ಮಾಡಿದ್ದಾರೆ.

ಈ ಕಾರ್ಯಪಡೆ ಈ ಹಿಂದೆ ಒಂದು ಮಧ್ಯಂತರ ವರದಿಯಲ್ಲಿ ಈಗಾಗಲೇ ವ್ಯಾಪಕ ಟೀಕೆಗೆ ಒಳಗಾಗಿರುವ ತೆಂಡುಲ್ಕರ್ ಲೆಕ್ಕಾಚಾರದ ಬಗ್ಗೆ ಒಲವು ತೋರಿತ್ತಂತೆ. ಅದರೆ ಈ ಬಗ್ಗೆ 'ಒಮ್ಮತ' ಮೂಡದ್ದರಿಂದ ಅದನ್ನು ಕೈಬಿಟ್ಟಿತಂತೆ.

ಬಡತನ ರೇಖೆಯನ್ನು ವಸ್ತುನಿಷ್ಟವಾಗಿ ನಿರೂಪಿಸಿದರೆ, ಬಡತನದ ಪ್ರಮಾಣ ದೊಡ್ಡದಾಗಿ ಕಾಣಬಹುದು, ಸರಕಾರ ಸಬ್ಸಿಡಿಗಳಿಗೆ ಹೆಚ್ಚು ಖರ್ಚು ಮಾಡಬೇಕಾಗಬಹುದು, ಸರಕಾರಗಳಿಗೆ ಇದು ಇಷ್ಟವಾಗಲಿಕ್ಕಿಲ್ಲ, ಹಾಗೆಂದು ಅದನ್ನು ಕೆಳಕ್ಕಿಳಿಸಿದರೆ ಹಾಸ್ಯಾಸ್ಪದ ಎಂಬ ಟೀಕೆ ಎದುರಿಸಬೇಕಾಗಬಹುದು ಎಂಬ ತೊಳಲಾಟ ಈ ಪರಿಣಿತರದ್ದು.

"ಒಮ್ಮತ ಇಲ್ಲ ಎಂದು ಹೇಳುವುದು ಹಾಸ್ಯಾಸ್ಪದ. ಈ ಗುಂಪು ಒಂದು ಅಭಿಪ್ರಾಯಕ್ಕೆ ಬರಬೇಕಾಗಿತ್ತು" ಎಂದು ಮೋದಿಯವರು ರದ್ದು ಮಾಡಿದ ಯೋಜನಾ ಆಯೋಗದ ಒಬ್ಬ ಮಾಜಿ ಸದಸ್ಯ ಹಾಗೂ ಪ್ರಖ್ಯಾತ ಆರ್ಥಿಕ ತಜ್ಞ ಪ್ರೊ. ಅಭಿಜಿತ್ ಸೆನ್ ಹೇಳಿರುವುದಾಗಿ ಈ 'ಹಿಂದುಸ್ತಾನ್ ಟೈಮ್ಸ್' ವರದಿ ಹೇಳುತ್ತದೆ. ದೇಶದಲ್ಲಿ ಬಡವರ ಒಟ್ಟು ಸಂಖ್ಯೆ ಎಷ್ಟು ಎಂದು ಹೇಳಬೇಕಾಗಿ ಬಂದಾಗ ಯಾರೂ ಬೆಕ್ಕಿಗೆ ಕಟ್ಟಲು ಮುಂದೆ ಬರದಿರುವುದೇ ಇಲ್ಲಿರುವ ಸಮಸ್ಯೆ ಎಂದವರು ಹೇಳುತ್ತಾರೆ. ಬಡವರಿಗೆ ಸಲ್ಲಬೇಕಾದುದೆಷ್ಟು ಎಂಬುದರ ಹಿಂದಿರುವ ರಾಜಕೀಯವೇ ಪನಗರಿಯ ಪಡೆಯ ಅನಿಶ್ಚಿತತೆಗೆ ಕಾರಣ ಎಂದು ಅವರು ದೂರುತ್ತಾರೆ.

ಈ ವರದಿಯ ಬಗ್ಗೆ ಪನಗರಿಯ ಅವರಿಗೆ ಮಾಡಿದ ಕರೆಗಳಿಗಾಗಲೀ, ಮೊಬೈಲ್ ಸಂದೇಶಗಳಿಗೇ ಆಗಲಿ ಅವರು ಸ್ಪಂದಿಸಿಲ್ಲವಂತೆ! ನಿಜಕ್ಕೂ ಯೆಚೂರಿಯವರು ಹೇಳುವಂತೆ 'ಕನಿಷ್ಟ ಆಳ್ವಿಕೆ'!

ಪ್ರಧಾನಿಗಳು ಕೈಯಾರೆ ಆರಿಸಿದ 'ನೀತಿ ಆಯೋಗ'ಕ್ಕೆ ನಿಜವಾಗಿಯೂ ಭಾರತದಲ್ಲಿ ಬಡವರು ಯಾರು ಎಂದು ನಿರ್ಧರಿಸಲಾಗಿಲ್ಲವೇ, ಅಥವ ಇದು ಭಾರತದ ಬಡವರ ಬಗ್ಗೆ ಬಗ್ಗೆ ಯಾವುದೇ ಚರ್ಚೆಯನ್ನು ಅಂಚಿಗೆ ತಳ್ಳುವ ಒಂದು ಪ್ರಯತ್ನ ಮಾತ್ರವೇ ಇರಬಹುದೇ ಎಂದು ಯೆಚೂರಿಯವರು ಪ್ರಶ್ನಿಸುತ್ತಾರೆ.

ಜಿಡಿಪಿ ಅಂಕಿಗಳನ್ನು ಉಬ್ಬಿಸುವುದು ಮತ್ತು ಬಡವರನ್ನು 'ಅದೃಶ್ಯ'ಗೊಳಿಸುವುದು 'ಜುಮ್ಲಾನೊಮಿಕ್ಸ್"ಅಂದರೆ ಟೊಳ್ಳು ಶಾಸ್ತ್ರದ ಧೋರಣೆ ಎಂದು ಅವರು ವ್ಯಂಗ್ಯವಾಡಿದ್ದಾರೆ.

'ಓಣಂ' ದಿನಗಳಲ್ಲಿ 'ವಾಮನ ಜಯಂತಿ'ಯ ಶುಭಾಶಯ!–ಈ ಬಾರಿ 'ಪೋಮೊನೆ ಷಾಜಿ'!

ಓಣಂ ಕೇರಳದಲ್ಲಿ ಜಾತಿಮತಗಳ ಭೇದವಿಲ್ಲದೆ ಎಲ್ಲರೂ ಆಚರಿಸುವ ಹಬ್ಬ. ಸಮಾನತೆ, ಶಾಂತಿ, ಸೋದರತ್ವದ ಒಂದು ಆಳ್ವಿಕೆಯ ಆಶಯವನ್ನು ನೆನಪಿಸುವ ಹಬ್ಬ. ಇಲ್ಲಿನ ಸ್ಥಳೀಯ ನಂಬಿಕೆಯ ಪ್ರಕಾರ ಮಹಾಬಲಿಯ ಶಾಂತಿ, ಸಮಾನತೆ ಮತ್ತು ಸೋದರತ್ವ ಹರಡಿದ ಆಳ್ವಿಕೆಯಿಂದ ಅಸೂಯೆಗೊಂಡ ದೇವಗಣದ ಕೋರಿಕೆಯ ಮೇರೆಗೆ ವಿಷ್ಣು ಐದನೇ ಅವತಾರವೆತ್ತಿ ಮಹಾಬಲಿಯನ್ನು ಮೋಸದಿಂದ ಪಾತಾಳಕ್ಕೆ ತಳ್ಳಿದ. ಆದರೆ ತನ್ನ ಪ್ರಜೆಗಳ ಮೇಲಿನ ಪ್ರೀತಿಯಿಂದಾಗಿ ಮಹಾಬಲಿ ಪ್ರತಿವರ್ಷ ಬಂದು ತನ್ನ ಜನರನ್ನು ಆಶೀರ್ವದಿಸುವ ಹಬ್ಬವೇ ಓಣಂ.

ಆದರೆ ಅದೇಕೋ ಸುಮಾರು ಎರಡೂವರೆ ವರ್ಷಗಳ 'ಒಳ್ಳೆಯ ದಿನ'ಗಳ ನಂತರ ಇದೀಗ ಬಿಜೆಪಿ ಅಧ್ಯಕ್ಷರಿಗೆ ಇದು ವಾಮನ ಜಯಂತಿ ಎಂಬ ಜ್ಞಾನೋದಯವಾಗಿದೆ. 'ವಾಮನಾವತಾರ:ಭಗವಾನ್ ವಿಷ್ಣುವಿನ ಐದನೇ ಅವತಾರ, ಸಮಸ್ತ ದೇಶವಾಸಿಗಳಿಗೆ ವಾಮನ ಜಯಂತಿಯ ಶುಭಕಾಮನೆಗಳು' ಎಂದು ಅವರು ಈ ವರ್ಷ ಟ್ವೀಟ್ ಮಾಡಿದ್ದಾರೆ.

ಈ ವರ್ಷ ಆರೆಸ್ಸೆಸ್‌ನ ಮಲೆಯಾಳಿ ಪತ್ರಿಕೆಯ ಓಣಂ ಆವೃತ್ತಿಯಲ್ಲಿ ಕೆ.ಉನ್ನಿಕೃಷ್ಣನ್ ನಂಬೂತಿರಿ ಎಂಬವರ "ಓಣಂನ ವಿಚಾರವನ್ನು ತಿರಸ್ಕರಿಸಿ ಮತ್ತು ವಿಷ್ಣುವಿನ ಐದನೇ ಅವತಾರ ವಾಮನನ ಹುಟ್ಟು ಹಬ್ಬ ವಾಮನ ಜಯಂತಿ ಎಂದು ಆಚರಿಸಿ' ಎಂಬ ಕರೆ ಕೊಟ್ಟ ಲೇಖನ ಅವರಿಗೆ ಜ್ಞಾನೋದಯ ಉಂಟು ಮಾಡಿದಂತೆ ಕಾಣುತ್ತದೆ. ಆದರೆ ಸಮಾನತೆ, ಶಾಂತಿ ಮತ್ತು ಸೌಹಾರ್ದತೆ ಓಣಂ ಹಬ್ಬದ ವಿಚಾರ. ಈ ವಿಚಾರವನ್ನು ತಿರಸ್ಕರಿಸುವ ಕರೆಗೆ ಓಗೊಡುವ ಮೂಲಕ ಬಿಜೆಪಿ ಮತ್ತು ಸಂಘ ಪರಿವಾರದ ನಿಜಸ್ವರೂಪ ಇದೇ ಎಂದು ದರ ರಾಷ್ಟ್ರೀಯ ಅಧ್ಯಕ್ಷರೇ ಒಪ್ಪಿಕೊಂಡಂತಾಗಿದೆ ಎಂದು ಅವರಿಗೆ ಹೊಳೆದಂತಿಲ್ಲ.

ಕೇರಳದ ಜನತೆ ಇದನ್ನು ತಮಗೆ ಮಾಡಿರುವ ಅವಮಾನ ಎಂದು ಪ್ರತಿಕ್ರಿಯಿಸಿದ್ದಾರೆ. ಅಮಿತ್ ಷಾ ಟ್ವಿಟರ್‌ಗೆ #ಪೋಮೊನೆಷಾಜಿ(ತೊಲಗು ಮಗನೇ.ಷಾಜಿ) ಎಂಬ ಪ್ರತಿ ಟ್ವಿಟರ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಈ ಹಿಂದೆ ಪ್ರಧಾನ ಮಂತ್ರಿಗಳು ವಿಧಾನ ಸಭಾ ಚುನಾವಣೆಗಳ ಸಂದರ್ಭದಲ್ಲಿ ಕೇರಳವನ್ನು ಸೊಮಾಲಿಯಾದೊಂದಿಗೆ ಹೋಲಿಸುವ ಹಾಸ್ಯಾಸ್ಪದ ಹೇಳಿಕೆ ನಿಡಿದಾಗ ಇದೇ ರೀತಿ ಬಂದ 'ಪೋಮೊನೆಮೋದಿ' ಗೇಲಿಗಳನ್ನು ನೆನಪಿಸಿಕೊಳ್ಳಬಹುದು. ಕೆಲವು ಟ್ವೀಟ್‌ಗಳನ್ನು ನೋಡಿ

* 'ಆರೆಸ್ಸೆಸ್/ಬಿಜೆಪಿ/ಮೋದಿ/ಅಮಿತ್ ಷಾ ತಮ್ಮ ಹೊಲಸು ವಿಭಜನಕಾರಿ ಗುಜರಾತ್‌ಮಾದರಿ ರಾಜಕೀಯವನ್ನು ದಕ್ಷಿಣದಲ್ಲಿ ಆಡಬಯಸುತ್ತಿದ್ದಾರೆ.........ಯಶಸ್ವಿಯಾಗುವದಿಲ್ಲ'
* ಪೊಮೊನೆ ಷಾಜಿ –ಭಾರತ ಕುರಿತ ತನ್ನ ಕುಳ್ಳ ಕಣ್ಣೋಟವನ್ನು ನೈಜ ಸಮ್ಮಿಶ್ರ ಸಂಸ್ಕೃತಿಯ ಮೇಲೆ ಹೊರಿಸಲು ಸಾಧ್ಯವಿಲ್ಲ.
* ಕೇರಳದ ಸುಂದರ ಹಬ್ಬವನ್ನು ನಾಶಪಡಿಸಲು ಪ್ರಯತ್ನಿಸುತ್ತಿದ್ದಾರೆಯೇ? ಸೂರತ್‌ನಲ್ಲಿ ಎಸೆದಾಡಿದ ಒಂದು ಕುರ್ಚಿ ಇವರ ತಲೆಗೆ ತಗುಲಿದೆಯೇ?
* ನಿಮ್ಮ ಒಡೆದು ಆಳುವ ತಂತ್ರ ಕೇರಳದಲ್ಲಿ ನಡೆಯುವುದಿಲ್ಲ.. ನಿಜ ಹೇಳಬೇಕೆಂದರೆ ಎಲ್ಲಿಯೂ ನಡೆದಿಲ್ಲ... ಅಯ್ಯೋ 2019!
* ಒಂದು ಪಕ್ಷ ಮತ್ತು ಅದರ ಮುಖ್ಯಸ್ಥ ಒಂದು ಇಡೀ ರಾಜ್ಯದ ಭಾವನೆಗಳ ವಿರುದ್ಧ ಹೋಗಬಲ್ಲರು ಎಂಬುದು ನಿಜಕ್ಕೂ ನಂಬಲಾಗದ ಸಂಗತಿ.

ಬಿಜೆಪಿ ಮುಖಂಡರು ಕೇರಳದ ಅಪಹಾಸ್ಯ ಮಾಡಿದ್ದಾರೆ, ಈ ವಿವಾದಾತ್ಮಕ 'ಶುಭಾಶಯ'ವನ್ನು ಹಿಂತೆಗೆದುಕೊಳ್ಳಬೇಕು, ಕೇರಳಿಯರ ಕ್ಷಮೆ ಕೋರಬೇಕು ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಓಣಂ ಮಲೆಯಾಳಿಗಳ ರಾಷ್ಟ್ರೀಯ ಹಬ್ಬ, ಜಾತಿ–ಧರ್ಮಗಳ ಗಡಿ ಮೀರಿದ ಮಾನವತೆಯ ಐಕ್ಯತೆಯನ್ನು ಬಿಂಬಿಸುತ್ತದೆ, ಜಗತ್ತಿನಲ್ಲಿ ಒಳ್ಳೆಯತನ ಮತ್ತು ಸಮಾನತೆಗಾಗಿ ಪ್ರಯತ್ನಿಸುತ್ತಿರುವವರೆಲ್ಲರಿಗೂ ಸ್ಫೂರ್ತಿಯ ಚಿಲುಮೆ ಅದು. ಜನತೆಯ ಭಾವನೆಗಳನ್ನು ನೋಯಿಸುವುದು ಜವಾಬ್ದಾರಿಯುತ ರಾಜಕೀಯ ಮುಖಂಡರಿಗೆ ಶೋಭೆ ತರುವುದಿಲ್ಲ, ಅದನ್ನು ಅವರು ಅರಿತು ಜಗತ್ತಿನಾದ್ಯಂತ ಇದನ್ನು ಆಚರಿಸುತ್ತಿರುವ ಮಲೆಯಾಳಿಗಳ ಕ್ಷಮೆ ಕೋರಬೇಕು ಎಂದು ವಿಜಯನ್ ಆಗ್ರಹಿಸಿದ್ದಾರೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಇದು ಬ್ರಾಹ್ಮಣರು ಶ್ರೇಷ್ಠರು ಎಂಬುದರ ಮೇಲೆ ನಿಂತಿರುವ ಹಿಂದೂರಾಷ್ಟ್ರ ಅಜೆಂಡಾವನ್ನು ಹೇರುವುದರ ಭಾಗ ಎಂದು ಟೀಕಿಸಿದ್ದಾರೆ.

ಆರೆಸ್ಸೆಸ್/ಬಿಜೆಪಿ ಕಾರ್ಯಕರ್ತರಿಗೂ ತಮ್ಮ ರಾಷ್ಟ್ರೀಯ ಅಧ್ಯಕ್ಷರ ಈ ಹೇಳಿಕೆ ಮುಜುಗರ ಉಂಟು ಮಾಡಿದೆಯಂತೆ. ತಮ್ಮ ರಾಷ್ಟ್ರೀಯ ಅಧ್ಯಕ್ಷರನ್ನು ಸಮರ್ಥಿಸಿಕೊಳ್ಳಬೇಕಾಗಿರುವ ಬಿಜೆಪಿಯ ರಾಜ್ಯಾಧ್ಯಕ್ಷರು ಕೇರಳದ ಕೆಲವೆಡೆಗಳಲ್ಲಿ ವಾಮನ ಜಯಂತಿಯನ್ನು ಆಚರಿಸಲಾಗುತ್ತಿದೆ, ಇದು ಮಹಾಬಲಿಗೆ ವಿರುದ್ಧವೇನೂ ಅಲ್ಲ ಎಂದು ಹೇಳಿದ್ದಾರೆ. ಕೇರಳದ ಹೊರಗೆ ಓಣಂ ಹಬ್ಬವೇ ಪ್ರಖ್ಯಾತವಾದದ್ದು, ಮತ್ತು ಅದು ಮಹಾಬಲಿಯನ್ನು ಸ್ವಾಗತಿಸುವ ಹಬ್ಬ ಎಂಬುದು ಎಲ್ಲರಿಗೂ ಗೊತ್ತು. ಅಲ್ಲದೆ ಅವರ ಪತ್ರಿಕೆಯೇ ಮೇಲೆ ಹೇಳಿದಂತೆ ಓಣಂನ ವಿಚಾರವನ್ನು ತಿರಸ್ಕರಿಸಿ, ವಾಮನ ಜಯಂತಿ ಆಚರಿಸಿ' ಎಂದು ಕರೆ ನೀಡಿರುವುದರ ಮರ್ಮ ಏನು ಎಂದು ಹೇಳಿಲ್ಲ. ಹಿಂದುತ್ವದ ಕುಖ್ಯಾತ ಪ್ರಚಾರಕಿ ಶಶಿಕಲಾ ಎಂಬವರು ವಾಮನ ಕೇರಳವನ್ನು ಮಹಾಬಲಿಯಿಂದ ವಿಮೋಚನೆಗೊಳಿಸಿದ ಸ್ವಾತಂತ್ರ್ಯ ಹೋರಾಟಗಾರ ಎಂದಿರುವುದಾಗಿಯೂ ವರದಿಯಾಗಿದೆ.

'ಹಿಂದಿ–ಹಿಂದು–ಹಿಂದುಸ್ತಾನ' ಎಂಬ ಅಚಾರಿತ್ರಿಕ ವಿಚಾರದೊಳಕ್ಕೆ ಇಡೀ ದೇಶವನ್ನು ತುರುಕುವ ಕೃತಕ ಪ್ರಯತ್ನ ನಡೆಸಿದಾಗ ಇಂತಹ ಆಭಾಸಗಳು ಸ್ವಾಭಾವಿಕ ತಾನೇ?



ಕೃಪೆ: ಸತೀಶ ಆಚಾರ್ಯ, ಸಿಫಿ.ಕಾಂ

ಈ ಬಾರಿಯೂ ಪಿಎಫ್ ಬಡ್ಡಿದರ 8.6ಶೇ.ಕ್ಕೆ ಇಳಿಸುವ ಪ್ರಯತ್ನ

ಕಳೆದ ಬಾರಿ ಕಾರ್ಮಿಕರ ಭವಿಷ್ಯ ನಿಧಿಯ ಮೇಲೆ ಬಡ್ಡಿದರ ಘೋಷಿಸುವಲ್ಲಿ ನೌಕರರ ಭವಿಷ್ಯ ನಿಧಿ ಸಂಘಟನೆ(ಇಪಿಎಫ್‌ಒ)ಯ ಕೇಂದ್ರೀಯ ಟ್ರಸ್ಟಿ ಮಂಡಳಿ(ಸಿಬಿಟಿ) ನಿರ್ಧಾರ ಮತ್ತು ಕಾರ್ಮಿಕ ಮಂತ್ರಾಲಯದ ಅನುಮೋದನೆಯನ್ನು ನಿರಾಕರಿಸುವ ಹಣಕಾಸು ಮಂತ್ರಾಲಯದ ಸವಾರಿ ನಮ್ಮ ಓದುಗರಿಗೆ ನೆನಪಿರಬಹುದು. ಪ್ರತಿವರ್ಷ ಪಿಎಫ್‌ನ ನಿರೀಕ್ಷಿತ ಆದಾಯ ಮತ್ತು ಪಾವತಿಗಳ ಆಧಾರದಲ್ಲಿ ಸಿಬಿಟಿ ಬಡ್ಡಿದರವನ್ನು ನಿರ್ಧರಿಸುತ್ತದೆ. ಇದನ್ನು ಅದರ ಸಲಹಾ ಸಮಿತಿಯಾದ ಹಣಕಾಸು, ಆಡಿಟ್ ಮತ್ತು ಹೂಡಿಕೆ ಸಮಿತಿ(ಎಫ್‌ಎಐಸಿ)ಯ ಅನುಮೋದನೆಯ ನಂತರ ಹಣಕಾಸು ಮಂತ್ರಾಲಯಕ್ಕೆ ಅನುಮೋದನೆಗೆ ಹೋಗುತ್ತದೆ. ಈ ಹಿಂದೆ ಸಾಮಾನ್ಯವಾಗಿ ಹಣಕಾಸು ಮಂತ್ರಾಲಯ ಅದನ್ನು ಅನುಮೋದಿಸುತ್ತಿತ್ತು. ಆದರೆ ಉದಾರೀಕರಣದ ನಂತರ ಈ ಬಗ್ಗೆ ಜಗ್ಗಾಟ ನಡೆಯಲಾರಂಭಿಸಿದೆ. 'ಒಳ್ಳೆಯ ದಿನ'ಗಳ ರಭಸದ 'ಉದಾರೀಕರಣದ ಪರಿಣಾಮವಾಗಿ ಇದು ಇನ್ನಷ್ಟು ತೀವ್ರಗೊಂಡಿದೆ. ಕಳೆದ ವರ್ಷ ಇಪಿಎಫ್‌ಒಗೆ 8.95ಶೇ. ಬಡ್ಡಿದರ ಕೊಡುವುದು ಸಾಧ್ಯವಿತ್ತು. ಹಾಗೆ ಕೊಟ್ಟಿದ್ದರೂ 100 ಕೋಟಿ ರೂ. ಉಳಿಯುತ್ತಿತ್ತು. ಆದರೆ ಸಿಬಿಟಿ ಈ ಬಗ್ಗೆ ಚರ್ಚಿಸಿ 8.8ಶೇ. ನಿರ್ಧರಿಸಿತು. ಅದರ ಹಿಂದಿನ ವರ್ಷ 8.75ಶೇ.ಕೊಡಲಾಗಿತ್ತು. ಆದರೆ ಹಣಕಾಸು ಮಂತ್ರಾಲಯ ಅದನ್ನು 8.7ಶೇ.ಕ್ಕೆ ಇಳಿಸಿತು. ಇದಕ್ಕೆ ಎಲ್ಲ ಕಡೆಗಳಿಂದ ಕಟು ವಿರೋಧ ವ್ಯಕ್ತವಾದ್ದರಿಂದ ಕೊನೆಗೂ ಹಣಕಾಸು ಮಂತ್ರಾಲಯ 8.8ಶೇ.ಕ್ಕೆ ಒಪ್ಪಿಕೊಳ್ಳಬೇಕಾಯಿತು.

ಈ ಬಾರಿ ಸಿಬಿಟಿ ಇಪಿಎಫ್‌ಒ ಆದಾಯಗಳ ಅಂದಾಜು ಆರಂಭಿಸುವ ಮೊದಲೇ ಹಣಕಾಸು ಮಂತ್ರಾಲಯ ಬಡ್ಡಿದರವನ್ನು 8.6ಶೇ.ಕ್ಕೆ ಇಳಿಸಬೇಕೆಂದು ಕಾರ್ಮಿಕ ಮಂತ್ರಾಲಯದ ಮೇಲೆ ಒತ್ತಡ ಹಾಕಲಾರಂಭಿಸಿದೆ ಎಂದು ವರದಿಯಾಗಿದೆ. ಸರಕಾರದ ಉಳಿತಾಯ ಯೋಜನೆಗಳ ಮೇಲೆ 8.6ಶೇ.ಕ್ಕಿಂತ ಹೆಚ್ಚು ಬಡ್ಡಿದರ ಕೊಡಲಾಗುವುದಿಲ್ಲವಾದ್ದರಿಂದ ಭವಿಷ್ಯನಿಧಿಯ ಮೇಲಿನ ಬಡ್ಡಿದರ ಅದನ್ನು ಮೀರಬಾರದು ಎಂಬುದು ಹಣಕಾಸು ಮಂತ್ರಾಲಯದ ತರ್ಕ. ಇದಕ್ಕೆ ಕಾರ್ಮಿಕ ಸಂಘಗಳ ತೀವ್ರ ವಿರೋಧವಿದೆ. ಭವಿಷ್ಯ ನಿಧಿಯಲ್ಲಿರುವುದು ಕಾರ್ಮಿಕರ ಹಣ, ಅದರಲ್ಲಿ ಬರುವ ಆದಾಯದ ಮೇಲೆ ಸಿಬಿಟಿ ಬಡ್ಡಿದರ ನಿರ್ಧರಿಸುವುದರಿಂದ ಹಣಕಾಸು ಮಂತ್ರಾಲಯ ಇದರಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬುದು ಅವುಗಳ ನಿಲುವು.



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಪಡಿತರ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುತ್ತಿರುವ ‘ಆಧಾರ್’



ಹಸಿವು, ಬರಗಾಲ, ಶಿಕ್ಷಣ, ಮಾಹಿತಿ ಹಕ್ಕು, ಉದ್ಯೋಗಖಾತ್ರಿ ಕಾಯ್ದೆ ಮುಂತಾದ ವಲಯಗಳಲ್ಲಿ ದುಡಿಯುತ್ತಿರುವ **ಜೀನ್ ಡ್ರೀಜ್** ಎಂಬ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು ನಮ್ಮ ದೇಶದ ಪಡಿತರ ವ್ಯವಸ್ಥೆಯನ್ನು ಆಧಾರ್ ಸಂಖ್ಯೆಯೊಂದಿಗೆ ಬೆಸೆಯುವ ಸರ್ಕಾರದ ಯೋಜನೆಯು ತಂದೊಡ್ಡುವ ಅಪಾಯದ ಬಗ್ಗೆ ಒಂದು ಲೇಖನ ಬರೆದಿದ್ದಾರೆ (ದಿ ಹಿಂದೂ, 10.09.2016). ಸಂಶೋಧಕರ ಸಹಯೋಗದೊಂದಿಗೆ, ಪಡಿತರ ವ್ಯವಸ್ಥೆಯ ಕಾರ್ಯವೈಖರಿಯ ಬಗ್ಗೆ ನಡೆಸಿದ ಸಮೀಕ್ಷೆಗಳ ಫಲಿತಾಂಶಗಳನ್ನು ಆಧರಿಸಿ ಬರೆದಿರುವ ಅವರ ಲೇಖನವು ಸುಧಾರಣೆಗಳ ಹೆಸರಿನಲ್ಲಿ ಸರ್ಕಾರವು ಮಾಡುತ್ತಿರುವ ಕೆಲವು ಬದಲಾವಣೆಗಳಿಂದಾಗಿ, ಪಡಿತರ ವ್ಯವಸ್ಥೆಯ ಮೂಲಕ ದೊರೆಯುವ ಆಹಾರ ಧಾನ್ಯಗಳನ್ನೇ ಸಂಪೂರ್ಣವಾಗಿ ಅವಲಂಬಿಸಿರುವ ಕಡು ಬಡ ಕುಟುಂಬಗಳು ಗುರುತರ ಅನ್ಯಾಯಗಳಿಗೆ ಒಳಗಾಗುತ್ತಾರೆ ಎಂಬುದನ್ನು ವಿವರಿಸಿದ್ದಾರೆ.



ಲೇಖನದ ಸಾರಾಂಶ ಇಲ್ಲಿದೆ:

ಅನುವಾದ– ಕೆ.ಎಂ.ನಾಗರಾಜ್

ಲಂಚಗುಳಿತನ ಮತ್ತು ಸೋರುವಿಕೆಗಳಿಂದಾಗಿ ಕೆಲವು ರಾಜ್ಯಗಳಲ್ಲಿ ಶೇ.50ರಿಂದ ಶೇ.80ರ ವರೆಗೂ ನಿಷ್ಪರಿಣಾಮಕಾರಿ ಎನಿಸಿದ್ದ ಪಡಿತರ ವ್ಯವಸ್ಥೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸಾಕಷ್ಟು ಒಳ್ಳೆಯ ಬದಲಾವಣೆಗಳಾಗಿವೆ. ಪಡಿತರ ವ್ಯವಸ್ಥೆಯ ಸುಧಾರಣೆಗಳು ಆರಂಭವಾದದ್ದು ಛತ್ತೀಸ್‌ಘಢ ರಾಜ್ಯದಲ್ಲಿ. ಪಾರದರ್ಶಕತೆ, ಅಚ್ಚುಕಟ್ಟು ಮತ್ತು ಒಳಗೊಳ್ಳುವಿಕೆಗಳಿಂದಾಗಿ ಹೆಚ್ಚು ಕಡಿಮೆ ಎಲ್ಲ ಕುಟುಂಬಗಳಿಗೂ ರೇಷನ್‌ಕಾರ್ಡ್ ದೊರೆತಿದೆ. ಸಕಾಲದಲ್ಲಿ ರೇಷನ್ ಸಿಗುತ್ತಿದೆ. ಈ ಸುಧಾರಣೆಗಳನ್ನು ಉಳಿದ ರಾಜ್ಯಗಳು ಅನುಕರಿಸಿವೆ.

ಮೂರು ವರ್ಷಗಳ ಹಿಂದೆ ಆಹಾರ ರಕ್ಷಣೆ ಕಾಯ್ದೆ ಅಸ್ತಿತ್ವಕ್ಕೆ ಬಂದಿದೆ. ಪ್ರತಿಯೊಬ್ಬರಿಗೂ ಆಹಾರ ರಕ್ಷಣೆ ಒದಗಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಈ ಕಾಯ್ದೆಯಡಿಯಲ್ಲಿ, ಬಡತನ ರೇಖೆಯ ಮೇಲಿರುವ ಕೆಟಗರಿಯನ್ನು ರದ್ದು ಮಾಡಲಾಗಿದೆ. ಈಗ ಎರಡು ಸ್ಪಷ್ಟವಾದ ಕೆಟಗರಿಗಳಿವೆ. (1) ಆದ್ಯತೆಯ ಕುಟುಂಬಗಳು– ಪ್ರತಿ ವ್ಯಕ್ತಿಗೂ ತಿಂಗಳೊಂದಕ್ಕೆ ರಿಯಾಯ್ತಿ ದರದಲ್ಲಿ 5 ಕೆ.ಜಿಧಾನ್ಯ ಒದಗಿಸಲಾಗುವುದು. (2) ಅಂತ್ಯೋದಯ ಕುಟುಂಬಗಳು – ಪ್ರತಿಕುಟುಂಬಕ್ಕೂ ತಿಂಗಳೊಂದಕ್ಕೆ 35 ಕೆ.ಜಿ ಧಾನ್ಯ ಒದಗಿಸಲಾಗುವುದು. ದೇಶದ ಶೇ.75ರಷ್ಟು ಕುಟುಂಬಗಳು ಆಹಾರ ರಕ್ಷಣೆ ಕಾಯ್ದೆಯ ವ್ಯಾಪ್ತಿಯೊಳಗೆ ಬರುತ್ತವೆ. ಹಿಂದೆ ಇದ್ದ ಪರಿಸ್ಥಿತಿಗೆ ಹೋಲಿಸಿದರೆ, ಎಲ್ಲ ರಾಜ್ಯಗಳ ಪಡಿತರ ವ್ಯವಸ್ಥೆಯಲ್ಲಿ ಕೆಲವು ಒಳ್ಳೆಯ ಬದಲಾವಣೆಗಳಾಗಿವೆ.

ಆದರೆ, ಪಡಿತರ ವ್ಯವಸ್ಥೆಯನ್ನು ಆಧಾರ್ ಸಂಖ್ಯೆಯೊಂದಿಗೆ ಬೆಸೆಯುವ ಕೇಂದ್ರ ಸರ್ಕಾರದ ಯೋಜನೆಯಿಂದಾಗಿ ಉತ್ತಮಗೊಳ್ಳುತ್ತಿದ್ದ ಪಡಿತರ ವ್ಯವಸ್ಥೆಯು ಅಸ್ತವ್ಯಸ್ತಗೊಳ್ಳಲಿದೆ. ಇದು ಕಡು ಬಡ ಕುಟುಂಬಗಳಿಗೆ ಸಿಗುತ್ತಿದ್ದ ಅಷ್ಟೋ ಇಷ್ಟೋ ರೇಷನ್‌ಗೂ ಸಂಚಕಾರ ತಂದಿದೆ.

ರೇಷನ್ ಕಾರ್ಡನ್ನು ಆಧಾರ್ ಸಂಖ್ಯೆಯೊಂದಿಗೆ ಬೆಸೆಯುವ ಈ ಯೋಜನೆಯಲ್ಲಿ, ಪ್ರತಿರೇಷನ್ ಅಂಗಡಿಯೂ ಇಂಟರ್‌ನೆಟ್/ಅಂತರ್ಜಾಲದ ಮೂಲಕ ಕಾರ್ಡ್ ಹೊಂದಿರುವ ವ್ಯಕ್ತಿಯ ಬೆರಳಚ್ಚು ಗುರುತಿಸುವ ಯಂತ್ರವನ್ನು ಹೊಂದಿರಬೇಕು. ಅಂ–ದರೆ, ಬೆರಳಚ್ಚು ಗುರುತಿಸುವ ಯಂತ್ರ, ಇಂಟರ್‌ನೆಟ್ ಸೌಕರ್ಯ, ಮೊಬೈಲ್ ನೆಟ್‌ವರ್ಕ್, ಮತ್ತು ಕುಟುಂಬದ ರೇಷನ್‌ಕಾರ್ಡ್ ಮತ್ತು ಅದರ ಸದಸ್ಯರ ಆಧಾರ್ ಸಂಖ್ಯೆಗೆ ಜೋಡಣೆಯಾಗಿರಬೇಕು. ಈ ವಿವರಗಳಲ್ಲಿ ಯಾವುದೇ ಒಂದು ಕೊರತೆ ಇದ್ದರೆ, ಕೆಲಸ ನಡೆಯುವುದಿಲ್ಲ. ಹಾಗಾಗಿ, ಬಡ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ಈ ಮಟ್ಟದ ತಂತ್ರಜ್ಞಾನದ ಬಳಕೆ ಕಷ್ಟಕರವಾಗಿರುತ್ತದೆ. ಏಕೆಂದರೆ, ಇಂಟರ್‌ನೆಟ್ ಸಂಪರ್ಕದ ಸಮಸ್ಯೆ ತೀವ್ರವಾಗಿರುತ್ತದೆ. ಕಳೆದ ಕೆಲವು ತಿಂಗಳುಗಳಲ್ಲಿ ರಾಜಾಸ್ತಾನ ಸರ್ಕಾರವು ಈ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಮಾಡಬೇಕೆಂದು ಒತ್ತಾಯಿಸುತ್ತಿದೆ. ಆದರೆ, ಅಲ್ಲಿನ ಹಳ್ಳಿಗಳಿಂದ ಸಂಗ್ರಹಿಸಿರುವ ಮಾಹಿತಿಯ ಪ್ರಕಾರ, ಹೊಸ ಪದ್ಧತಿಯಡಿಯಲ್ಲಿ ವಿತರಿಸಲಾಗಿರುವ ರೇಷನ್ ಪ್ರಮಾಣವು ಜೂಲೈ2016ರಲ್ಲಿ ಶೇ.61 ಮತ್ತು ಆಗಸ್ಟ್‌ನಲ್ಲಿ ಶೇ.63ರಷ್ಟಿದೆ. ಹಳೇ ರಿಜಿಸ್ಟರ್ ಪದ್ಧತಿಯಡಿಯಲ್ಲಿ ಕೊಂಚ ಭಾಗ ಕಾರ್ಡ್ ಹೊಂದಿದವರಿಗೆ ಹಂಚಿಕೆಯಾಗಿದ್ದರೆ, ಮತ್ತಷ್ಟು ಸದ್ದಿಲ್ಲದೆ ಹೊರ ಹೋಗಿದೆ. ರಿಜಿಸ್ಟರ್ ಪದ್ಧತಿ ಬಳಸಲು ಅವಕಾಶವಿಲ್ಲದಿರುವುದರಿಂದ, ದುರ್ಬಳಕೆಯಾಗಿರುವ ರೇಷನ್ ಪ್ರಮಾಣವನ್ನು ಲೆಕ್ಕ ಹಾಕುವುದು ಕಷ್ಟ. ಹಾಗಾಗಿ, ತಂತ್ರಜ್ಞಾನದ ಅಸಮರ್ಪಕ ಬಳಕೆ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಿದೆ.

ರಾಂಚಿ ನಗರದಿಂದ ತುಸು ದೂರದಲ್ಲಿರುವ ಹಳ್ಳಿಯೊಂದರ ರೇಷನ್ ಅಂಗಡಿಗೆ ಭೇಟಿಕೊಟ್ಟ ಸಂದರ್ಭದಲ್ಲಿ, ಹೊಸ ಪದ್ಧತಿಯಲ್ಲಿ ಎಷ್ಟೊಂದು ನ್ಯೂನತೆಗಳಿವೆ ಎಂಬುದು ತಿಳಿಯಿತು. ಆ ರೇಷನ್ ಅಂಗಡಿಯ ಹೊರಗಡೆ, ಕೆಲವು ತಿಂಗಳುಗಳಿಂದಲೂ ರೇಷನ್ ಪಡೆಯಲಾಗದ ಅನೇಕ ಮಂದಿ ಇದ್ದರು. ಕೆಲವರ ಆಧಾರ್ ಸಂಖ್ಯೆ ರೇಷನ್ ಕಾರ್ಡ್‌ನೊಂದಿಗೆ ಸರಿಯಾಗಿ ಜೋಡಣೆಯಾಗಿರಲಿಲ್ಲ. ಕೆಲವು ಮಂದಿಯ ಬೆರಳಚ್ಚನ್ನು ಗುರುತಿಸುವ ಕೆಲಸವನ್ನು ಯಂತ್ರವು ಸರಿಯಾಗಿ ನಿರ್ವಹಿಸುತ್ತಿರಲಿಲ್ಲ. ವ್ಯಕ್ತಿಗಳನ್ನು ಗುರುತಿಸಿದ ನಂತರದಲ್ಲಿ ಕೆಲವು ತಪ್ಪು ಸಂದೇಶಗಳು ಕಾಣಿಸಿಕೊಳ್ಳುತ್ತಿದ್ದವು. ಎಲ್ಲ ವಿವರಗಳು ಸರಿ ಇವೆ ಎಂದು ತಾಂತ್ರಿಕವಾಗಿ ಗುರುತಿಸಿದ ನಂತರವೂ ಅನೇಕ ಮಂದಿಗೆ ಬೇರೆ ರೀತಿಯಲ್ಲಿ ಅನಾನುಕೂಲತೆಗಳು ಎದುರಾಗುತ್ತಿದ್ದವು. ಅವರು ಅನೇಕ ಬಾರಿ ರೇಷನ್ ಅಂಗಡಿಗೆ ಬರಬೇಕಾಗುತ್ತಿತ್ತು. ತಾಂತ್ರಿಕ ದೋಷಗಳು ನಿವಾರಣೆಯಾಗುವ ವರೆಗೂ ಅವರ ಕುಟುಂಬದ ಇತರ ಸದಸ್ಯರು ಸರದಿಯ ಮೇಲೆ ಬಂದು ಹೋಗುತ್ತಿರಬೇಕಾಗುತ್ತಿತ್ತು. ಈ ಕಾರಣದಿಂದಾಗಿ ಅವರ ಮಕ್ಕಳು ಶಾಲೆಗೆ ಚಕ್ಕರ್ ಹೊಡೆಯ ಬೇಕಾಗುತ್ತಿತ್ತು. ಹಾಗಾಗಿ, ಪ್ರತ್ತಿಯೊಬ್ಬನೂ ಈ ಹೊಸ ವ್ಯವಸ್ಥೆಯಲ್ಲಿ ಅಗಾಧ ಪ್ರಮಾಣದ ಸಮಯ ಹರಣ ಮಾಡಿಕೊಳ್ಳುತ್ತಿದ್ದರು.

ಈ ನ್ಯೂನತೆಗಳ ಬಗ್ಗೆ ಅನೇಕ ಮಂದಿ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದರೂ ಯಾವ ಪ್ರಯೋಜನವೂ ಆಗಿಲ್ಲ. ಬೆರಳಚ್ಚು ಮತ್ತು ಕಣ್ಣಿನ ಪಾಪೆಯ ಮೂಲಕ ವ್ಯಕ್ತಿಯ ಗುರುತನ್ನು ತಿಳಿಸುವ ಆಧಾರ್ ಸಂಖ್ಯೆಯನ್ನು ರೇಷನ್ ಕಾರ್ಡ್‌ನೊಂದಿಗೆ ಜೋಡಿಸುವ ಹೊಸ ಪದ್ಧತಿಯನ್ನು ಹಠಕ್ಕೆ ಬಿದ್ದವರಂತೆ ಸರ್ಕಾರ ಜಾರಿಗೊಳಿಸುತ್ತಿದೆ. ಸಾಂದರ್ಭಿಕವಾಗಿ ಹೇಳುವುದಾದರೆ, ಪಡಿತರ ವ್ಯವಸ್ಥೆಯನ್ನು ಆಧಾರ್ ಸಂಖ್ಯೆಯೊಂದಿಗೆ ಜೋಡಿಸುವುದು ಸುಪ್ರೀಂಕೋರ್ಟ್‌ನ ಆದೇಶಕ್ಕೆ ವ್ಯತಿರಿಕ್ತವಾಗಿದೆ. ಪಡಿತರ ಬಳಕೆದಾರರಿಗೆ ಆಧಾರ್ ಸಂಖ್ಯೆ ಹೊಂದಿರುವಂತೆ ಕಡ್ಡಾಯಗೊಳಿಸುವಂತಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಕಾರ್ಡ್ ಹೊಂದಿರುವ ವ್ಯಕ್ತಿಯ ಮತ್ತು ಕುಟುಂಬದ ಸದಸ್ಯರ ಬೆರಳಚ್ಚು ಗುರುತಿಸುವ ಯಂತ್ರಗಳನ್ನು ರೇಷನ್ ಅಂಗಡಿಯಲ್ಲಿ ಸ್ಥಾಪಿಸುವ ಮೂಲಕ ಪಡಿತರ ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ಕೊನೆಗೊಳಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ. ಆದರೆ, ಈ ನಿರೀಕ್ಷೆಯು ಪಡಿತರ ವ್ಯವಸ್ಥೆಯಲ್ಲಿರುವ ಸೋರಿಕೆಯ ಮೇಲಿನ ತಪ್ಪು ತಿಳುವಳಿಕೆಗಳ ಮೇಲೆ ನಿಂತಿದೆ. ಪಡಿತರ ವ್ಯವಸ್ಥೆಯಲ್ಲಿ ಗುರುತಿಗೆ ಸಂಬಂಧಿಸಿದ ವಂಚನೆಗಳ(ಬೋಗಸ್ ರೇಷನ್ ಕಾರ್ಡ್) ಪ್ರಮಾಣಕ್ಕಿಂತಲೂ ಬಳಕೆದಾರರಿಗೆ ಕೊಡುವ ಧಾನ್ಯಗಳ ತೂಕ/ಅಳತೆ/ಪ್ರಮಾಣ ಮತ್ತು ಗುಣಮಟ್ಟದ ವಂಚನೆಗಳು ಬೃಹದಾಕಾರದಲ್ಲಿವೆ. ಬಳಕೆದಾರರಿಗೆ ಆಗುತ್ತಿರುವ ಈ ಅನ್ಯಾಯ ಮತ್ತು ವಂಚನೆಗಳನ್ನು ಯಂತ್ರಗಳ ಮೂಲಕ ತಪ್ಪಿಸಲು ಸಾಧ್ಯವಿಲ್ಲ. ಗುರುತಿಗೆ ಸಂಬಂಧಿಸಿದ ವಂಚನೆಗಳನ್ನು ಯಂತ್ರಗಳು ಕಡಿಮೆ ಮಾಡುತ್ತವೆ. ನಿಜ. ಆದರೆ, ತಂತ್ರಜ್ಞಾನದ ಅಳವಡಿಕೆಯ ನ್ಯೂನತೆಗಳು ಜನರ ಆಹಾರದ ಹಕ್ಕಿನ ಅಪಹರಣಕ್ಕೆ ಸಮರ್ಥನೆಯಾಗುವುದಿಲ್ಲ.

ಸರ್ಕಾರವು ಆಧಾರ್ ಸಂಖ್ಯೆಯನ್ನು ಬಳಕೆ ಮಾಡಿದ ಪ್ರಕರಣಗಳು ಅನೇಕ ಅನುಮಾನಗಳಿಗೆ ಕಾರಣವಾಗಿದೆ. ಒಂದು ರೀತಿಯ ಹಾನಿಯೂ ತಟ್ಟಿದೆ. ಅದರ ಬಗ್ಗೆ ಸರ್ಕಾರ ಗಮನ ಹರಿಸುತ್ತಿಲ್ಲ. ಅದರ ಬದಲಿಗೆ, ಆಧಾರ್ ಸಂಖ್ಯೆಯ ಬಳಕೆಯಿಂದಾಗಿ ಸರ್ಕಾರಕ್ಕೆ ಹಣ ಉಳಿತಾಯವಾಗಿದೆ ಎಂಬ ಕತೆ ಹೇಳುತ್ತಿದೆ. ಪಡಿತರ ವ್ಯವಸ್ಥೆಯ ಸುಧಾರಣೆಗಳಿಗೂ ಅದೇ ಕತೆಯನ್ನೇ ಹೇಳುತ್ತಿದೆ. ಪಡಿತರ ಬಳಕೆದಾರರು ಅನುಭವಿಸುತ್ತಿರುವ ಕಷ್ಟಗಳ ಅರಿವಿರುವುದು ತಳ ಮಟ್ಟದಲ್ಲಿ ಕೆಲಸ ಮಾಡುತ್ತಿರುವವರಿಗೆ ಮಾತ್ರ. ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದಿದ್ದರೆ, ಸರ್ಕಾರವು ಪಡಿತರ ವ್ಯವಸ್ಥೆಯಲ್ಲಿ ಅಳವಡಿಸಿರುವ ಗುರುತು ಪತ್ತೆ ಹಚ್ಚುವ ಕಾರ್ಯವನ್ನು ತಕ್ಷಣ ನಿಲ್ಲಿಸಬೇಕು.

ಸೋರಿಕೆಗಳನ್ನು ತಡೆಗಟ್ಟಲು ಅನೇಕ ವಿಧಾನಗಳಿವೆ. ಇಂಟರ್‌ನೆಟ್ ಅವಲಂಬನೆ ಇಲ್ಲದ ತಂತ್ರಜ್ಞಾನಗಳಿವೆ. ಅವುಗಳನ್ನು ಬಳಕೆ ಮಾಡಿಕೊಳ್ಳಬಹುದು. ಪಡಿತರದ ಮೂಲಕ ದೊರೆಯುವ ಆಹಾರ ಧಾನ್ಯಗಳನ್ನೇ ಸಂಪೂರ್ಣವಾಗಿ ಅವಲಂಬಿಸಿರುವ ಕಡು ಬಡ ಕುಟುಂಬಗಳ ಮೇಲೆ ಕೆಲಸಕ್ಕೆ ಭಾರದ ತಂತ್ರಜ್ಞಾನವನ್ನು ಹೇರುವುದರಿಂದ ‘ಅವರಿಗೆ ಭಾರಿ ಅನ್ಯಾಯವಾಗುತ್ತದೆ.

ಫೆದರ್‌ಲೈಟ್‌ನಿಂದ ಬಿಪಿಎಲ್ ವರೆಗೆ..... ಪುಟ 14 ರಿಂದ

ದರೆ ಡಿಸ್ಮಿಸಲ್, ಚಾರ್ಟರ್ ಆಫ್ ಡಿಮಾಂಡ್ಸ್ ಇತ್ಯಾದಿಗಳು ಇದ್ದವು. ಇವುಗಳಲ್ಲಿ ಗೆದ್ದಿದ್ದೇವೆ. ಈ ಮುಷ್ಕರ ಕಾನೂನುಬದ್ಧ ಎಂದು ನ್ಯಾಯಾಲಯವೇ ಹೇಳುವಂತಾಗಿದೆ. 50% ಬೇಕ್‌ವೇಜಸ್ ಸಿಕ್ಕಿದೆ. ಇಲ್ಲಿಯ ಕಾರ್ಮಿಕರು ಬಹುಪಾಲು ಇಲ್ಲಿಯವರೇ, ಯುವಜನರು, ಎಸ್‌ಎಸ್‌ಎಲ್‌ಸಿಗಿಂತ ಹೆಚ್ಚು ಓದಿದವರು. 6000 ಕಾರ್ಮಿಕರಲ್ಲಿ 1500 ಮಾತ್ರ ಖಾಯಂ ಅಗಿದ್ದವರು. ಉಳಿದವರೆಲ್ಲ ಟ್ರೈನಿಗಳು, ಪ್ರೊಬೇಶನರಿಗಳು–ಇವರನ್ನೆಲ್ಲ ಈ ಹೋರಾಟದಲ್ಲಿ ತೊಡಗಿಸಿ ಖಾಯಂ ಮಾಡಲು ಸಾಧ್ಯವಾಗಿದೆ. ಆರಂಭದಲ್ಲಿ ಡಿಸ್ಮಿಸ್ ಮಾಡಿದ ಸುಮಾರಾಗಿ ಎಲ್ಲ 200ಕ್ಕೂ ಹೆಚ್ಚು ಖಾಯಂ ಕಾರ್ಮಿಕರಿಗೆ ಪರಿಹಾರ ಕೊಡಿಸಲು ಸಾಧ್ಯವಾಗಿದೆ. 25 ಕಾರ್ಮಿಕರ ಪರವಾದ ರಿಪೋರ್ಟೆಡ್ ಜಡ್ಜ್‌ಮೆಂಟ್‌ಗಳು ಬಂದಿವೆ. ಅಲ್ಲದೆ 12 ದಿನಗಳ ವರೆಗೆ ಜೈಲಿನಲ್ಲಿದ್ದ 800 ಕಾರ್ಮಿಕರ ಮೇಲಿನ ಕೇಸುಗಳು ವಜಾ ಆಗಿವೆ, ಸುಮಾರು 500 ಮಂದಿಯ ಮೆಲೆ ಸುಮಾರು 80 ಕೇಸುಗಳನ್ನು ಹಾಕಿದ್ದರು, ಅವೆಲ್ಲಾ ವಜಾ ಆಗಿವೆ. ಈ ರೀತಿಯಲ್ಲಿ ಇದೊಂದು ಯಶಸ್ವಿ ಹೋರಾಟ ಎಂದು ಹೇಳಬಲ್ಲೆ.

•ಸುಮಾರು ಐದು ದಶಕಗಳ ಹಿಂದಿನ ಫೆದರ್‌ಲೈಟ್ ಹೋರಾಟ, ಸುಮಾರು ಎರಡು ದಶಕಗಳ ಹಿಂದಿನ ಬಿಪಿಎಲ್ ಹೋರಾಟ ಹಾಗೂ ಈಗಿನ ಉದ್ದಿಮೆಗಳ ಸ್ವರೂಪ, ಕಾಂಟ್ರಾಕ್ಟ್, ಕ್ಯಾಶುವಲ್, ಔಟ್‌ಸೋರ್ಸ್ ಮುಂತಾದವುಗಳನ್ನು ನೋಡುವಾಗ ಈ ಹೋರಾಟಗಳಿಗೂ, ಮುಂದಿನ ಹೋರಾಟಗಳಿಗೂ ವ್ಯತ್ಯಾಸ ಇದೆ ಎಂದು ನಿಮಗನಿಸುತ್ತದೆಯೇ?

ನನಗೆ ಬಹಳ ವ್ಯತ್ಯಾಸ ಇದೆ ಎನಿಸುತ್ತಿಲ್ಲ. ಇದು ಮುಖ್ಯವಾಗಿ ಸಂಘಟನೆಯನ್ನು ಬುಡಮೇಲು ಮಾಡುವ ಪ್ರಶ್ನೆ. ಈ ಪ್ರಯತ್ನ ಹಿಂದೆಯೂ ಇತ್ತು. ಅದನ್ನು ಎದುರಿಸಬೇಕು. ಈ ವಿಷಯದಲ್ಲಿ ಕಾರ್ಮಿಕ ಸಂಘಗಳು ಪರ್ಮನೆಂಟ್ ಕಾರ್ಮಿಕರ ಮೇಲೆಯೇ ಗಮನ ಕೇಂದ್ರೀಕರಿಸುವುದರಿಂದಲೂ ಹೀಗಾಗಿದೆ. ‘ಸಮಾನ ಕೆಲಸಕ್ಕೆ ಸಮಾನ ಸಂಬಳ’ ಎಂದು ಹೇಳುವಾಗ ಕಾಂಟ್ರಾಕ್ಟ್, ಕ್ಯಾಶುವಲ್ ಕಾರ್ಮಿಕರ ಸಮಸ್ಯೆಗಳನ್ನೂ ಖಾಯಂ ಕಾರ್ಮಿಕರ ಸಂಘಟನೆಗಳು ತಗೊಳ್ಳಲೇ ಬೇಕು. ಖಾಯಂ ಕಾರ್ಮಿಕರಲ್ಲಿ ಈ ಅರಿವನ್ನು ಮೂಡಿಸದೆ ಪ್ರತ್ಯೇಕ ಸಂಘಟನೆ ಕಟ್ಟುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಈ ಅರಿವು ಮೂಡಿಸುವುದು ನಮ್ಮ ಜವಾಬ್ದಾರಿ.

ಕಾರ್ಮಿಕರು ಹೋರಾಟಕ್ಕೆ ಬರುವುದಿಲ್ಲ ಎಂಬುದು ಸರಿಯಲ್ಲ. ಗಾರ್ಮೆಂಟ್ ಕಾರ್ಮಿಕರು ನಾಯಕತ್ವ ಇಲ್ಲದೆಯೇ ಹೋರಾಟಕ್ಕಿ ಇಳಿದಿದ್ದರೆ, ಸರಿಯಾದ, ಪ್ರಾಮಾಣಿಕ ನಾಯಕತ್ವ ಕೊಟ್ಟರೆ ಏಕೆ ಬರುವುದಿಲ್ಲ? ಹೌದು, ನಮ್ಮ ಕೆಲಸದ ರೀತಿಯ ವಿಮರ್ಶೆ ಮಾಡಿಕೊಳ್ಳಬೇಕು.

•ನಿಮ್ಮ ಜೈಲಿನ ಅನುಭವದ ಬಗ್ಗೆ ಸಂಕ್ಷಿಪ್ತವಾಗಿ ಏನಾದರೂ ಹೇಳಬಯಸುತ್ತಿರಾ?

ಸಂಕ್ಷಿಪ್ತವಾಗಿಯಾದರೆ ಇಷ್ಟು ಹೇಳಬಹುದು– ಹೋರಾಟಗಾರರಿಗೆ ಜೈಲು ತುಂಬಾ ಅಗತ್ಯ, ಅದರ ಅನುಭವ ತುಂಬಾ ಅಗತ್ಯ. ಇದು ನಾನು ಹೇಳುವುದಲ್ಲ, ನೆಲ್ಸನ್ ಮಂಡೆಲಾ ಹೇಳಿದ್ದಾರೆ, 150 ವರ್ಷಗಳ ಹಿಂದೆ ಟಾಲ್‌ಸ್ಟಾಯ್ ಹೇಳಿದ್ದರು– ದೇಶವೆಲ್ಲ ಸುತ್ತಿ ಬರುವುದಕ್ಕಿಂತ ಜೈಲಿನಲ್ಲಿ ಇದ್ದು ಬಾ ಎಂದಿದ್ದರಂತೆ. ಒಬ್ಬ ಇಸ್ರೇಲಿ ಚಿಂತಕ ಕೂಡ ಸತ್ಯ ತಿಳ್ಕೋಬೇಕಾದರೆ ಒಮ್ಮೆ ಕೋರ್ಟಿಗೆ ಹೋಗಿ ಬಾ, ಜೈಲು ಕಂಡು ಬಾ ಅಂತ. ಹೋರಾಟಗಳಿಂದ ಜೈಲುಶಿಕ್ಷೆಯಾದವರು ಬಿಟ್ಟು ಬೇರೆಲ್ಲರೂ ಕ್ರಿಮಿನಲ್‌ಗಳು ಎಂದು ಭಾವಿಸುವುದೂ ಸರಿಯಲ್ಲ. ಸಾಮಾನ್ಯವಾಗಿ ಹಾರ್ಡ್‌ಕೋರ್ ಕ್ರಿಮಿನಲ್‌ಗಳಿಗೆ ಶಿಕ್ಷೆಯಾಗುವುದಿಲ್ಲ, ಏಕೆಂದರೆ ಅವರ ವಿರುದ್ಧ ಸಾಕ್ಷಿ ಹೇಳುವವರು ಇರುವುದಿಲ್ಲ.

(ಆರ್‌ಎಸ್‌ರವರ 16 ವರ್ಷಗಳ ಜೈಲುವಾಸವೂ ಬಹಳಷ್ಟು ಸಹ – ಜೈಲುವಾಸಿಗಳ ಒಳಿತಿಗಾಗಿ ನಡೆಸಿದ ಚಟುವಟಿಕೆಗಳಿಂದ ಕೂಡಿತ್ತು, ಈ ಬಗ್ಗೆ ನಮ್ಮ ಸಂದರ್ಶನದಲ್ಲಿ ಕೆಲವು ಉದಾಹರಣೆಗಳನ್ನೂ ನೀಡಿದರು. ಸ್ಥಳಾಭಾವದಿಂದ ಅವನ್ನು ಇಲ್ಲಿ ಪ್ರಕಟಿಸಲಾಗುತ್ತಿಲ್ಲ.)

ಸಂದರ್ಶನ: ವೇದರಾಜ್ ಮತ್ತು ವಿನೋದ ಶ್ರೀರಾಮಪುರ

ಕರ್ನಾಟಕದಲ್ಲಿ ಸ್ಕೀಮ್ ನೌಕರರು........ ಪುಟ 13 ರಿಂದ

ಎನ್‌ಎಸ್‌ಪಿಇ ಯ ಮಾರ್ಗದರ್ಶಿ ಸೂತ್ರಗಳು ಸ್ಪಷ್ಟ ನಿರ್ದೇಶನವಿದೆ.

ಕರ್ನಾಟಕದಲ್ಲಿ 2001 ರಲ್ಲಿ ಈ ಯೋಜನೆ ಅಧಿಕೃತವಾಗಿ ಪ್ರಾರಂಭವಾಗಿ ಇಂದು 1.19 ಸಾವಿರ ಮಹಿಳೆಯರು ಸುಮಾರು 6 ಲಕ್ಷ ಮಕ್ಕಳಿಗೆ ಅಪಾರ ಬೇಯಿಸುತ್ತಿದ್ದಾರೆ.

ರಾಜ್ಯದಲ್ಲಿ 2004-5 ರಲ್ಲಿ ಈ ಯೋಜನೆಗೆ ಇಸ್ಕಾನ್, ಅದಮ್ಯ ಚೈತನ್ಯ, ಸ್ತ್ರೀಶಕ್ತಿ ಗುಂಪುಗಳಿಗೆ ಕೊಡಲಾಯಿತು. ಸಿಐಟಿಯು ನೇತೃತ್ವದಲ್ಲಿ 2004, ಸೆಪ್ಟಂಬರ್ 1 ರಂದು ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಿ "ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘವನ್ನು" ರಚಿಸಲಾಯಿತು.

ಈ ನೌಕರರ ಬೇಡಿಕೆಗಳನ್ನಿಟ್ಟುಕೊಂಡು ಸತತವಾಗಿ ಹಲವು ಹಂತದ ಹೋರಾಟಗಳನ್ನು ಸಂಘಟಿಸುತ್ತಾ ಹಲವು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿದೆ.

ಈ ಹೋರಾಟಗಳಲ್ಲಿ ಪ್ರಮುಖವಾದವು 2007ನೇ ಇಸವಿಯಿಂದ 2014 ರ ತನಕ ರಾಜ್ಯದಲ್ಲಿ 6-7 ಬಾರಿ ಹೋರಾಟಗಳನ್ನು ನಡೆಸಿದೆ. 2013 ಡಿಸೆಂಬರ್ ನಲ್ಲಿ 5 ರಾತ್ರಿ 6 ಹಗಲಿನ ಹೋರಾಟವನ್ನು ಬಿಸಿಯೂಟ ಬಂದ್ ಮಾಡಿ ಸುಮಾರು 5 ಸಾವಿರ ಮಹಿಳೆಯರು ಬೀದಿಗಳಲ್ಲಿದ್ದರು.

ಹೀಗೆ, ಇವರನ್ನು ಸಂಘಟಿಸಲು ನಿರಂತರ ಪ್ರಯತ್ನಗಳನ್ನು ನಡೆಸುತ್ತಾ 350-450-600 ರೂಗಳಿದ್ದ ಸಂಭಾವನೆ 1900-2000 ರೂಗಳಾಗಿವೆ. ಅಡುಗೆ ಮಾಡುವ ಸ್ಥಳಗಳಲ್ಲಿ ಅಪಘಾತಗಳಾದರೆ 30,000 ದಿಂದ 1 ಲಕ್ಷದವರೆಗಿನ ಪರಿಹಾರ, ಇವರನ್ನು ಪ್ರತಿ ವರ್ಷ ಮುಂದುವರಿಸಬೇಕು, ಬ್ಯಾಂಕ್ ಮುಖಾಂತರ ಸಂಭಾವನೆ, ಜನಶ್ರೀ ವಿಮಾ ಯೋಜನೆ ಜಾರಿಯಾದ್ದರಿಂದ ಸುಮಾರು 25 ಲಕ್ಷ ರೂ. ಸ್ಕಾಲರ್‌ಶಿಪ್ ಕೊಡಿಸಲು ಸಾಧ್ಯವಾಗಿದೆ. ಖಾಸಗೀಕರಣ ಪ್ರಕ್ರಿಯೆ ತಡೆಯಲು ಸಾಧ್ಯವಾಗಿದೆ. ಏಕಾಏಕಿ ಕೆಲಸದಿಂದ ವಜಾ ಮಾಡಲು ಸಾಧ್ಯವಾಗದ ಪರಿಸ್ಥಿತಿಯ ನಿರ್ಮಾಣ ಮಾಡಲು ಸಾಧ್ಯವಾಗಿದೆ.

ಈ ಎಲ್ಲ ಸಾಧನೆಗಳನ್ನು ಉಳಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಮೇಲೆ ಹೇಳಿರುವಂತೆ 'ಹಣ ಕೊಡಿರಿ, ಸೇವೆ ಪಡೆಯಿರಿ' ಎಂಬ, ಸರ್ಕಾರ ಜನತೆಯ ಕಲ್ಯಾಣದ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಇಂತಹ ಸರ್ಕಾರದ ಉದಾರೀಕರಣ ನೀತಿಗಳ ವಿರುದ್ಧ ಹೋರಾಡಬೇಕಾಗಿದೆ. ಇದಕ್ಕಾಗಿ ಎಲ್ಲ ಸ್ಕೀಂ ಕಾರ್ಮಿಕರನ್ನು ಸಂಘಟಿಸುವ ಯೋಜನೆಗಳನ್ನು ಉಳಿಸುವ ಮತ್ತು ಈ ಯೋಜನೆಗಳ ಮೇಲೆ ಅವಲಂಬಿತರಾದ ಫಲಾನುಭವಿಗಳ ಹಕ್ಕನ್ನು ರಕ್ಷಣೆ ಮಾಡುವ ಹೊಣೆಗಾರಿಕೆಯನ್ನು ನಿರ್ವಹಿಸುವುದು ಇಂದಿನ ಕಾರ್ಮಿಕ ಚಳುವಳಿಯ ಕರ್ತವ್ಯವಾಗಿದೆ. ●

371(ಜೆ) ಕಲಂ ಜಾರಿ.................. ಪುಟ 15 ರಿಂದ

ಬಂದು 25 ವರ್ಷಗಳಾದವು. ಈ ಅವಧಿಯಲ್ಲಿ ಶಿಕ್ಷಣದ, ಪ್ರಾಥಮಿಕ ಶಿಕ್ಷಣದ ಖಾಸಗೀಕರಣ ಹೇಗೆ ನಡೆದಿದೆ ಎಂಬುದು ಆತಂಕಕಾರಿಯಾಗಿದೆ. ರಾಜ್ಯಮಟ್ಟದಲ್ಲಿ ಖಾಸಗಿ ಶಾಲೆಗಳ ಪ್ರಮಾಣ 2006-07ರಲ್ಲಿ ಶೇ. 24.33ರಷ್ಟಿದ್ದುದು 2015-16ರಲ್ಲಿ ಅದು ಶೇ.34ರಷ್ಟಕ್ಕೇರಿದೆ. ಅದೇ ರೀತಿಯಲ್ಲಿ ಕಲಬುರಗಿ ವಿಭಾಗದಲ್ಲಿ ಖಾಸಗಿ ಶಾಲೆಗಳ ಪ್ರಮಾಣ 2006-07ರಲ್ಲಿ ಶೇ.23.83ರಷ್ಟಿದ್ದುದು 2015-16ರಲ್ಲಿ ಅದು ಶೇ.35.37ರಷ್ಟಾಗಿದೆ. ರಾಜ್ಯಮಟ್ಟದಲ್ಲಿ 2011ರಲ್ಲಿ ಅನಕ್ಷರಸ್ಥರ ಪ್ರಮಾಣ 2001-2011ರ ಅವಧಿಯಲ್ಲಿ ಶೇ.12.98ರಷ್ಟು ಇಳಿದಿದ್ದರೆ ಕಲಬುರಗಿ ವಿಭಾಗದಲ್ಲಿ ಅದು ಕೇವಲ ಶೇ.7.42ರಷ್ಟು ಇಳಿದಿದೆ. ಈ ಪ್ರಕ್ರಿಯೆಯು ಬಡವರ, ವಂಚಿತರ, ಅಂಚಿನಲ್ಲಿರುವವರ ಬದುಕನ್ನು ತೀವ್ರ ದುಸ್ಥಿತಿಗೆ ತಳ್ಳಿದೆ. ಇದೇ ರೀತಿಯಲ್ಲಿ ಆರೋಗ್ಯ, ಕುಡಿಯುವ ನೀರಿನ ಸರಬರಾಜು, ಆಹಾರ ವಿತರಣೆ, ಸಾರಿಗೆ -- ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಖಾಸಗೀಕರಣದ ಅಟ್ಟಹಾಸ ಮೆರೆದಿದೆ. ಈ ಎಲ್ಲ ಬೆಳವಣಿಗೆಯ ಪರಿಣಾಮವಾಗಿ ಅಸಮಾನತೆ, ಪ್ರಾದೇಶಿಕ ಅಸಮಾನತೆ, ಉಲ್ಬಣಗೊಳ್ಳುತ್ತಿದೆ. ಅನಿವಾರ್ಯವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದ ದುಡಿಮೆಗಾರರು ನಗರಗಳಿಗೆ ಮಕ್ಕಳನ್ನು, ಹೆಂಗಸರನ್ನು ಕಟ್ಟಿಕೊಂಡು ಗುಳೆ ಹೋಗುತ್ತಿದ್ದಾರೆ. ಇದನ್ನು ಉಳ್ಳವರು 'ವಲಸೆ' ಎಂದು ಕರೆಯುತ್ತಾರೆ. ಆದರೆ ಬಡವರ ಸಂದರ್ಭದಲ್ಲಿ ಇದು ಗುಳೆಯೇ ವಿನಾ ವಲಸೆಯಲ್ಲ.

ಏಕೆ ಹೀಗೆ? ಅಸಮಾನತೆಯು ಏಕೆ ತಗ್ಗುತ್ತಿಲ್ಲ?

ಕಲಬುರಗಿ ವಿಭಾಗದ ಹಿಂದುಳಿದಿರುವಿಕೆ ಮೂಲತಃ ರಾಚನಿಕ (ಸ್ಟ್ರಕ್ಚರಲ್) ಸಮಸ್ಯೆ. ಇದು ಸಾಂಸ್ಥಿಕ (ಸಿಸ್ಟಮಿಕ್)ಸಮಸ್ಯೆ. ಇದು ಸಾಮಾಜಿಕ ಸಮಸ್ಯೆ. ನಮ್ಮ ರಾಜಕಾರಣಿಗಳು ಸಮಸ್ಯೆಯ ಬೇರುಗಳನ್ನು ಹುಡುಕಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯಾಗಿ ಭೌತಿಕ ಸಂಗತಿಗಳ ನಿರ್ಮಾಣಕ್ಕೆ ಆದ್ಯತೆ ನೀಡುತಿದ್ದಾರೆ. ಕಲಬುರಗಿ ವಿಭಾಗದಲ್ಲಿ ಅಗತ್ಯವಾಗಿರುವುದು ಜನರ ಧಾರಣಾ ಸಾಮರ್ಥ್ಯವನ್ನು ದಷ್ಟಪುಷ್ಟಿಗೊಳಿಸುವ ಕ್ರಮಗಳು. ಈ ಬಗ್ಗೆ ಜನಪ್ರತಿನಿಧಿಗಳು ಗಮನ ಹರಿಸುವಂತೆ ಜನರು ಒತ್ತಡ ರೂಪಿಸುವ ಅಗತ್ಯವಿದೆ. ಇದಕ್ಕೆ ಸಾಮಾಜಿಕ ಆಂದೋಳನವೊಂದೇ ದಾರಿ. ನಾಗರಿಕ ಸಮಾಜ ಎಚ್ಚೆತ್ತುಕೊಳ್ಳಬೇಕು. ಅನಕ್ಷರತೆ, ಹಸಿವು, ಲಿಂಗ ತಾರತಮ್ಯ, ಗುಳೆ, ಅಪೌಷ್ಟಿಕತೆ, ಉದ್ಯೋಗದ ಕೊರತೆ ಮುಂತಾದವು ಸಾಮಾಜಿಕ ವೈಫಲ್ಯದ ಸೂಚಿಗಳು. ಇಂದು ಸಮಾನತೆ ಮೌಲ್ಯದ ಬಗ್ಗೆ ಸಮಾಜ ಅಣಕವಾಡುತ್ತಿದೆ. ಸಾಮಾಜಿಕ ನ್ಯಾಯ ಅನ್ನುವುದು ಅಪಹಾಸ್ಯದ ಸಂಗತಿಯಾಗಿದೆ. ಲಿಂಗ ಸಮಾನತೆ ಅನ್ನುವುದು ಪಶ್ಚಿಮದ್ದಾಗಿ ಟೀಕೆಗೆ-ತಿರಸ್ಕಾರಕ್ಕೆ ಒಳಗಾಗಿದೆ. ಜನರ ಧಾರಣ ಶಕ್ತಿಯನ್ನು ಉತ್ತಮ ಪಡಿಸುವುದಕ್ಕೆ ಪ್ರತಿಯಾಗಿ ವರಮಾನದ ಏರಿಕೆಗೆ, ಉತ್ಪಾದನೆ ಹೆಚ್ಚಳಕ್ಕೆ, ಬಂಡವಾಳದ, ವಿದೇಶಿ ಬಂಡವಾಳದ ಹೂಡಿಕೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಉತ್ಪಾದನೆ ಮೊದಲು: ನಂತರ ವಿತರಣೆ ಅನ್ನುವುದು ನಿಯಮವಾಗಿ ಬಿಟ್ಟಿದೆ. ಈ ಕ್ರಮಗಳು ಉಳ್ಳವರ ಹಿತಾಸಕ್ತಿಯನ್ನು ಕಾಪಾಡಬಹುದೇ ವಿನಾ ಬಡವರ, ವಂಚಿತರ, ಅಂಚಿನಲ್ಲಿರುವವರ ಹಿತಾಸಕ್ತಿಯನಲ್ಲ.

ನಾವೇನು ಮಾಡಬೇಕು-ಮಾಡಬಹುದು?

ನಮ್ಮ ಮುಂದಿರುವ ಪ್ರಶ್ನೆಗೆ-ಸವಾಲುಗಳಿಗೆ ಇರುವ ಏಕೈಕ ಉತ್ತರವೆಂದರೆ ಜನಾಂದೋಲನ. ದಲಿತರು, ಹಿಂದುಳಿದವರು, ಮಹಿಳೆಯರು, ಕಾರ್ಮಿಕರು, ರೈತರು ಮತ್ತು ವಿದ್ಯಾರ್ಥಿಗಳು ಸಂಘಟಿತರಾಗಿ ಹೋರಾಟ ನಡೆಸಬೇಕು. ಜಾಗತೀಕರಣ ಪ್ರೇರಿತ ಬಂಡವಾಳಶಾಹಿ ವ್ಯವಸ್ಥೆಯು ನಮ್ಮ ಜನರ ಬದುಕನ್ನು ಹೈರಾಣವಾಗಿಸಿದೆ. ಅದನ್ನು ಸೋಲಿಸುವ ಅಗತ್ಯವಿದೆ. ವರಮಾನ, ಬಂಡವಾಳ, ಉತ್ಪಾದನೆಗಳಿಗಿಂತ ಜನರ, ಮಹಿಳೆಯರ, ಕಾರ್ಮಿಕರ, ಹಸಿದವರ ಬದುಕು ಮುಖ್ಯ. ಆರ್ಥಿಕತೆ-ಯು ಸಮೃದ್ಧವಾಗಿ ಬಿಟ್ಟರೆ ಸಾಲದು. ಜನರ ಬದುಕು ಸಮೃದ್ಧವಾಗಬೇಕು. ಅಕ್ಷರ, ಆರೋಗ್ಯ, ಆಹಾರ, ಶಿಕ್ಷಣಗಳು ಅಭಿವೃದ್ಧಿಯ ಆಧಾರ ಬಿಂದುಗಳಾಗಬೇಕು. ಈ ಕುರಿತಂತೆ ವಿಸ್ತೃತ ಚರ್ಚೆ ನಡೆಯಬೇಕು. ಸಂವಿಧಾನದ ಅನುಚ್ಛೇದ 371(ಜೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು. ಇದು ಜನಾಂದೋಲನದಿಂದ ಮಾತ್ರ ಸಾಧ್ಯ.

ಸಂಪ್ರದಾಯಗಳ ಪುನರುತ್ಥಾನದಿಂದ ಬಡತನವನ್ನು, ಹಸಿವನ್ನು, ಅಸಮಾನತೆಯನ್ನು, ದಲಿತರ ಬವಣೆಯನ್ನು ತೊಡೆದು ಹಾಕುವುದಾಗುವುದಿಲ್ಲ. ವೈಚಾರಿಕ, ವೈಜ್ಞಾನಿಕ, ತರ್ಕಶುದ್ಧ ಚಿಂತನೆಯಿಂದ ಮಾತ್ರ ಸಮಾನತೆ ಮೌಲ್ಯವನ್ನು ಆಧರಿಸಿದ ಸಮಾಜವನ್ನು ಕಟ್ಟುವುದು ಸಾಧ್ಯ. ನಾವೆಲ್ಲರೂ ದಲಿತರ ಬಗ್ಗೆ, ಹೆಚ್ಚುತ್ತಿರುವ ಅಸಮಾನತೆ ಬಗ್ಗೆ, ಅಸಹಿಷ್ಣುತೆ ಬಗ್ಗೆ, ಅಲ್ಪಸಂಖ್ಯಾತರ ಮೇಲಿನ ಹಿಂಸೆಯ ಬಗ್ಗೆ ಚಿಂತಿಸಬೇಕು. ●

ಕಾರ್ಮಿಕ ಸಂಘಗಳನ್ನು ಕಟ್ಟುವ ಸವಾಲುಗಳು...... ಪುಟ 12 ರಿಂದ

ಮಾಡುವುದು ಸವಾಲಿನ ಕೆಲಸವಾಗುತ್ತಿದೆ. ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿ, ಕಾನೂನು ಬದ್ಧ ಸೌಲಭ್ಯಗಳನ್ನು ಹಾಗು ಉದ್ಯೋಗ ಸಂಬಂಧಗಳನ್ನು ಸಕ್ರಮಗೊಳಿಸುವುದೇ ಪ್ರಮುಖ ಬೇಡಿಕೆಯಾಗಿದ್ದ ಹಾಗು ಇರುವ ಹಲವು ಹೋರಾಟಗಳನ್ನು ನಡೆಸಿದ್ದೇವೆ ಹಾಗು ನಡೆಸುತ್ತಿದ್ದೇವೆ. ಈ ಹೋರಾಟಗಳು ಸುದೀರ್ಘವಾಗಿ ನಡೆಯುತ್ತವೆ ಹಾಗೂ ಹಲವು ಪ್ರಾಯೋಗಿಕ ಸವಾಲುಗಳನ್ನು ಎದುರಿಸುತವೆ.

ಇಂತಹ ಸಂದರ್ಭಗಳಲ್ಲಿ ಕಾರ್ಮಿಕರ ಜತೆಗೆ ಸಂಘಟನಾ ಸಂಬಂಧಗಳನ್ನು ನಾವು ಕಳೆದುಕೊಂಡಿರುವ ಅನುಭವಗಳು ಹಲವು ಸಂದರ್ಭಗಳಲ್ಲಿ ಆಗಿದೆ. ಸಕ್ರಿಯ ಕಾರ್ಯಕರ್ತರು ಕೂಡ ಕ್ರಮೇಣ ಚಳುವಳಿಯ ಪ್ರಭಾವದಿಂದ ದೂರ ಉಳಿಯುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಪ್ರಮುಖ ಕಾರಣ ಚಳುವಳಿಯ ಚಟುವಟಿಕೆಗಳು ಕೇವಲ ಕೆಲಸದ ಸ್ಥಳದ ವ್ಯಾಪ್ತಿಗೆ ಸೀಮಿತ ಗೊಳ್ಳುವುದೇ ಆಗಿದೆ.

ವಾಸ ಸ್ಥಳ ಆಧಾರಿತ ಸಂಘಟನೆ

ಇದನ್ನು ಮನಗಂಡ ಸಿಐಟಿಯು ಸಂಘಟನೆ, ಕಾರ್ಮಿಕ ಚಳುವಳಿಯನ್ನು ಕೆಲಸದ ಸ್ಥಳದ ವ್ಯಾಪ್ತಿಯನ್ನು ಮೀರಿ ವಾಸ ಸ್ಥಳಗಳಿಗೆ ವಿಸ್ತರಿಸುವುದು ಮಾತ್ರವಲ್ಲ, ಚಳುವಳಿಯ ಸಂಪರ್ಕದಲ್ಲಿರುವ ಪ್ರತಿ ಕಾರ್ಮಿಕರನ್ನು ವಾಸ ಸ್ಥಳಗಳಲ್ಲೇ ವರ್ಗವಾಗಿ ಸಂಘಟಿಸಲು ಅಗತ್ಯವಾದ ಸಂಘಟನಾ ಕ್ರಮವನ್ನು ಜಾರಿಮಾಡಲು ಯೋಜನಾಬದ್ಧವಾಗಿ ಕ್ರಮ ವಹಿಸಿದೆ.

ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಸಂಘಟನೆಗಳ ಮುಖಂಡರ ಪ್ರತಿನಿಧಿತ್ವ ಇರುವ ಜಿಲ್ಲಾ ಸಮಿತಿಗಳ ರಚನೆ, ಅದೇ ಸ್ವರೂಪದ ತಾಲೂಕು ಸಮಿತಿಗಳ ರಚನೆ ಮಾಡಲು ನಿರಂತರ ಪ್ರಯತ್ನಗಳನ್ನು ಮಾಡಲಾಗಿದೆ. ಈ ಸಮಿತಿಗಳು ಅದರ ವ್ಯಾಪ್ತಿಯಲ್ಲಿನ ದುಡಿಯುವ ಜನರ ನಡುವೆ ಸಂಘಟನೆಯನ್ನು ಸ್ಥಾಪಿಸಲು ಯೋಜನಾ ಬದ್ಧ ಕ್ರಮಗಳು ಹಾಗು ಅಗತ್ಯ ಸೌಹಾರ್ದ ಬೆಂಬಲವನ್ನು ಅಣಿ ನೆರೆಸುವುದು, ಸಂಘಟನೆಯ ಕ್ರೋಡೀಕರಣ, ಎರಡನೇ ಹಂತದ ನಾಯಕತ್ವ ಬೆಳವಣಿಗೆ ಮುಂತಾದವು ಈ ಸಮಿತಿಗಳ ಪ್ರಮುಖ ಸಂಘಟನಾ ಗುರಿಯಾಗಿದೆ. ಈ ರೀತಿಯಲ್ಲಿ ಕ್ರಮ ಬದ್ಧವಾಗಿ ಸಮಿತಿಗಳು ಕೆಲಸ ಮಾಡಿದ ಪ್ರದೇಶಗಳಲ್ಲಿ ಸಂಘಟನೆಯ ವಿಸ್ತರಣೆಯನ್ನು, ಚಳುವಳಿಯ ವಿಸ್ತರಣೆಯನ್ನು ಹಾಗು ಕಾರ್ಯಕರ್ತರಲ್ಲಿ ಐಕ್ಯ ಕಾರ್ಯಾಚರಣೆಯ ವಿಧಾನಗಳು ದೃಢವಾಗಿ ಬೆಳೆಯುವುದನ್ನು ಚಳುವಳಿ ಕಾಣುತ್ತಿದೆ.

ಈ ಅನುಭವದ ವಿಸ್ತಾರವೇ ಕರ್ನಾಟಕ ರಾಜ್ಯದಲ್ಲಿ ಪಂಚಾಯಿತಿ ಮಟ್ಟದ ಹಾಗು ನಗರ ಪ್ರದೇಶಗಳಲ್ಲಿ ವಾರ್ಡು ಮಟ್ಟಗಳಲ್ಲಿ ಕಾಮಿಕ ಚಳುವಳಿಯ ಸಮಿತಿಗಳನ್ನು ಮಾಡಲು ಮಾಡಿದ ತೀರ್ಮಾನ. ಈ ತೀರ್ಮಾನದ ಜಾರಿಯ ಅನುಭವಗಳು ಮತ್ತಷ್ಟು ಸವಾಲುಗಳನ್ನು ಕಾರ್ಮಿಕ ಚಳುವಳಿ ಗುರುತಿಸಿಕೊಳ್ಳಲು ಅವಕಾಶ ನೀಡಿದೆ.

ಈ ಚಳುವಳಿಯ ಸಮಿತಿಗಳು ಸಂಘಟನೆಗೆ ಸೇರಿದ ಕಾರ್ಮಿಕರನ್ನು ಹಾಗು ಅವರ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಗಳು. ಸಾಮಾನ್ಯ ಕಾರ್ಮಿಕರಲ್ಲಿ ಪ್ರಬಲವಾಗಿರುವ ರಂಗ ಭಾವನೆಗಳು, ಜಂಟಿ ಚಳುವಳಿಗಳಲ್ಲಿ ಬಾಗಿಯಾಗುವಾಗ ತಮ್ಮ ರಂಗದ ಬೇಡಿಕೆಗಳು ಪ್ರಾಮುಖ್ಯ ಪಡೆಯಲ್ಲ ಎಂಬ ಭಾವನೆಗಳು, ನಾಯಕತ್ವದ ತಿಳುವಳಿಕೆ ಹಾಗು ಸಾಮರ್ಥ್ಯವನ್ನು ವಿಸ್ತಾರಗೊಳಿಸುವುದರಲ್ಲಿ ಎದುರಾಗುವ ಸವಾಲುಗಳು ಮುಂತಾದ ಕಾರಣಗಳಿಂದ ಚಳುವಳಿಯ ವಿಸ್ತಾರವು ನಿರೀಕ್ಷೆಯ ಮಟ್ಟದಲ್ಲಿ ಸಾಧ್ಯವಾಗುತ್ತಿಲ್ಲ.

"ತಲುಪದೆ ಇರುವ ಕಾರ್ಮಿಕರನ್ನು ತಲುಪಿ"

ಬಂಡವಾಳಗಾರರು ಹೂಡುವ ತೀವ್ರ ಪ್ರತಿ-ರೋಧದ ಜತೆಗೆ ಮೇಲಿನ ಸಂಘಟನೆಯ ಅಂತರ್ಗತವಾದ ಸವಾಲುಗಳು ಹಾಗೂ ತೀವ್ರವಾಗಿ ಬದಲಾಗುತ್ತಿರುವ ಉದ್ಯೋಗದ ಸ್ವರೂಪಗಳು, ನಗರ ಹಾಗು ಗ್ರಾಮೀಣ ಪ್ರದೇಶಗಳಲ್ಲಿ ಸಂಘಟಿತರಾಗದೇ ಇರುವ ಕಾರ್ಮಿಕರನ್ನು ಸಂಘಟನೆ ಮಾಡಲು ಮತ್ತಷ್ಟು ಹೊಸ ಪ್ರಯೋಗಗಳು ಅಗತ್ಯವಿದೆ.

ಕಾರ್ಮಿಕ ಮಾಲಿಕ ಸಂಬಂಧವಿಲ್ಲದೆ ದೈಹಿಕ ದುಡಿಮೆಯಲ್ಲಿ ತೊಡಗಿರುವ ಕಾರ್ಮಿಕರು, ಹಂಗಾಮಿ ಸ್ವರೂಪದಲ್ಲಿ ದಿನಗೂಲಿ ಅಥವಾ ಕಾಲ ನಿಯಮಿತ ಬಹುರೂಪಿ ಕೂಲಿ ಶ್ರಮದಲ್ಲಿ ತೊಡಗುವ ಕಾರ್ಮಿಕರು, ಕಿರು ಬಂಡವಾಳ ಹೂಡಿಕೆ ಮಾಡಿ ತಮ್ಮ ದೈಹಿಕ ಶ್ರಮದ ಮೂಲಕ ಆದಾಯ ಗಳಿಸುವ ಶ್ರಮಿಕ ಜನರನ್ನು ವಾಸಸ್ಥಳಗಳ ಆಧಾರದಲ್ಲಿ ಸಾಮಾನ್ಯ ಕಾರ್ಮಿಕ ಸಂಘಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಂಘಟಿಸಲು ಯೋಜನೆಗಳನ್ನು ರೂಪಿಸಬೇಕು. ಈ ವಾಸಸ್ಥಳ ಆಧಾರಿತ ಸಂಘಗಳನ್ನು ತಾಲೂಕು ಹಾಗು ಜಿಲ್ಲಾ ಮಟ್ಟದಲ್ಲಿ ಕ್ರೋಢಿಕರಿಸಲು ಪ್ರಯತ್ನ ಮಾಡಬೇಕು.

ಈ ಪ್ರಯತ್ನವು ಪ್ರಮುಖವಾಗಿ ದುಡಿಮೆಗಾರರು ಯಾವುದೇ ಕೆಲಸದಲ್ಲಿ ತೊಡಗಿದ್ದರೂ ಚಳುವಳಿಯ ಜತೆಗೆ ನಿರಂತರ ಸಂಪರ್ಕವನ್ನು ದೃಢೀಕರಿಸುತ್ತದೆ. ನಿರಂತರವಾದ ಸಂಘಟನಾ ತಿಳುವಳಿಕೆಯನ್ನು ಹೆಚ್ಚಿಸಲು ಹಾಗು ಸೌಹಾರ್ದ ಬೆಂಬಲವನ್ನು ಬೆಳೆಸಲು ಹಾಗು ಮಾಲಿಕ ವರ್ಗದ ಸವಾಲಿಗೆ ಸಂಘಟಿ-ತ ಕಾರ್ಮಿಕರ ಪ್ರತಿರೋಧವನ್ನು ವ್ಯಾಪಕವಾಗಿ ಬೆಳೆಸಲು ಅಗತ್ಯವಾಗುತ್ತದೆ.

ಇದರಿಂದ ಸಿಐಟಿಯು ಸಂಘಟನೆಯ ಅಖಿಲ ಭಾರತ ಸಮ್ಮೇಳನದ ಕರೆಯಾದ "ತಲುಪದೆ ಇರುವ ಕಾರ್ಮಿಕರನ್ನು ತಲುಪಿ" ಎಂಬ ಘೋಷಣೆಯ ಸಮರ್ಪಕ ಜಾರಿಯೂ ಸಾಧ್ಯವಾಗುತ್ತದೆ. ●

ಹೌದು. ಸುರತ್ಕಲ್ ಪೊಲೀಸ್ ಠಾಣಾಧಿಕಾರಿ ಚೆಲುವ ರಾಜು ಜೋಕಟ್ಟೆಯ ಹೋರಾಟಗಾರರ ಮೇಲೆ ರೌಡಿಶೀಟ್ ತೆರೆದಿದ್ದಾರೆ. ಭೂಗತ ಪಾತಕಿಗಳು, ಕಮ್ಯುನಲ್ ಗೂಂಡಾಗಳು, ಖತರ್ ನಾಕ್ ಕ್ರಿಮಿನಲ್‌ಗಳು, ಅತ್ಯಾಚಾರಿಗಳು, ವೇಶ್ಯಾವಾಟಿಕೆ, ಗ್ಯಾಂಬ್ಲಿಂಗ್ ಮಾಫಿಯಾದಲ್ಲಿ ತೊಡಗಿಕೊಂಡವರ ಮೇಲೆ ತೆರೆಯಬೇಕಾದ ರೌಡಿಶೀಟನ್ನು ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಗೌರವಾನ್ವಿತ ನಾಗರಿಕರು, ಪಂಚಾಯತ್ ಸದಸ್ಯರು, ಶಾಂತಿಯುತ ಹೋರಾಟಗಾರರು ಆದ ಜೋಕ-ಟ್ಟೆಯ ಜನನಾಯಕರ ಮೇಲೆ ಪ್ರಯೋಗಿಸಲಾಗಿದೆ. ಅದರಲ್ಲಿ ಹೋರಾಟ ಸಮಿತಿ ಸಂಚಾಲಕರಾದ ಬಿ.ಎಸ್. ಹುಸೈನ್ ಅವರಿಗೆ ಈಗ ಅರವತ್ತೇಳು ವರ್ಷ. ಪಂಚಾಯತ್ ಸದಸ್ಯ ಅಬೂಬಕ್ಕರ್ ಬಾವ ಅವರಿಗೆ ಐವತ್ತೈದು ವರ್ಷ. ಒಡಿಠಿಟ ವಿರೋಧಿ ಹೋರಾಟ ಹೊರತು ಪಡಿಸಿ ಯಾವ ತಂಟೆ ತಕರಾರು, ಕೋರ್ಟು ಕಚೇರಿ ನೋಡಿದವರಲ್ಲ. ಅಂತಹ ಸಭ್ಯಸ್ಥರ ಮೇಲೆ ರೌಡಿ ಶೀಟ್ ಹಾಕಿ ಪೊಲೀಸ್ ಇಲಾಖೆ ಜನರ ಮುಂದೆ ಬೆತ್ತಲಾಗಿದೆ. ತನ್ನ ಕೋರೆಹಲ್ಲುಗಳನ್ನು ಪ್ರದರ್ಶಿಸಿದೆ.

ಚೆಲುವರಾಜು ಮತ್ತವರ ಇಲಾಖೆಯ ಬ್ರಿಟಿಷ್ ವಸಾಹತು ಮಾದರಿ ಅಂಧಾಕಾನೂನನ್ನು ಯಾವ ಕಾರಣಕ್ಕೂ ಒಪ್ಪದಿರಲು "ಜೋಕಟ್ಟೆ ನಾಗರಿಕ ಹೋರಾಟ ಸಮಿತಿ" ನಿರ್ಧರಿಸಿದೆ.

– ಮುನೀರ್ ಕಾಟಿಪಳ್ಳ

"ಕನ್ನಡ ಆತ್ಮಕತೆಗಳಲ್ಲಿ ದಲಿತ ಸಂವೇದನೆ" ವಾಚನಾಭಿರುಚಿ ಕಮ್ಮಟ

ಆತ್ಮಕಥೆಯ ಕಮ್ಮಟ ನಡೆಸಬಹುದು ಎಂದು ಹೊಳೆದಿರಲಿಲ್ಲ : ಮಾಲಗತ್ತಿ

ವಸಂತರಾಜ ಎನ್.ಕೆ.



"ಸಾಹಿತ್ಯ ವಲಯದಲ್ಲಿ ಕಾವ್ಯ ಕಮ್ಮಟಗಳು ನಡೆದಿವೆ. ಕಥಾ ಕಮ್ಮಟಗಳು ನಡೆದಿವೆ. ಕಾದಂಬರಿ ಕಮ್ಮಟಗಳು ನಡೆದಿವೆ. ನಾಟಕ ಕಮ್ಮಟಗಳು ನಡೆದಿವೆ. ವಿಮರ್ಶಾ ಕಮ್ಮಟಗಳೂ ನಡೆದಿವೆ. ಆದರೆ ಆತ್ಮಕಥೆ–ಯ ಕಮ್ಮಟಗಳು ಈವರೆಗೆ ಎಲ್ಲಿಯೂ ನಡೆದಿಲ್ಲ. ಇದು ಮೊದಲನೆಯದು. ಇದೊಂದು ವಿಶಿಷ್ಟ ಸಾಹಿತ್ಯ ಕಮ್ಮಟ. ನಾನೇ ಎಷ್ಟೋ ಕಮ್ಮಟಗಳನ್ನು ನಡೆಸಿದ್ದೇನೆ. ಆತ್ಮಕಥೆಯ ಕಮ್ಮಟ ನಡೆಸಬಹುದು ಎಂದು ನನಗೆ ಎಂದೂ ಹೊಳೆದಿರಲಿಲ್ಲ."

ಹೀಗೆಂದವರು ಕನ್ನಡದ ಬಹುಚರ್ಚಿತ ಪ್ರಸಿದ್ಧ ಆತ್ಮಕತೆ 'ಗೌರ್ಮೆಂಟ್ ಬ್ರಾಹ್ಮಣ' ಬರೆದ ಡಾ. ಅರವಿಂದ ಮಾಲಗತ್ತಿ ತಮ್ಮ ಉದ್ಘಾಟನಾ ಭಾಷಣದಲ್ಲಿ. ಮಂಗಳೂರಿನಲ್ಲಿ ಅಗಸ್ಟ್ 28–29ರಂದು ನಡೆದ "ಕನ್ನಡ ಅತ್ಮಕತೆಗಳಲ್ಲಿ ದಲಿತ ಸಂವೇದನೆ" ಎರಡು ದಿನಗಳ ಕಮ್ಮಟ ಉದ್ಘಾಟಿಸಿ ಅವರ ಆರಂಭದ ಮಾತುಗಳು ಇವಾಗಿದ್ದವು. ಬಹುಶಃ ಯಾವುದೇ ಸಾಹಿತ್ಯ ಸಂಘಟಕರು ಇದಕ್ಕಿಂತ ದೊಡ್ಡ 'ಸರ್ಟಿಫಿಕೇಟು' ನಿರೀಕ್ಷಿಸಲು ಸಾಧ್ಯವಿಲ್ಲ. ಸಾಹಿತ್ಯ ಸಮುದಾಯ, ಡಿ.ವೈ.ಎಫ್.ಐ., ಕನ್ನಡ, ಪುಸ್ತಕ ಪ್ರಾಧಿಕಾರ ಮತ್ತು ಸೈಂಟ್ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗ ಈ ವಾಚನಾಭಿರುಚಿ ಕಮ್ಮಟವನ್ನು ಜಂಟಿಯಾಗಿ ಹಮ್ಮಿಕೊಂಡಿದ್ದವು.

ಚರ್ಮವಾದ್ಯದ ಧ್ವನಿ ನಾಲ್ಕು ದಿಕ್ಕುಗಳಲ್ಲೂ ಮೊಳಗಲಿ

ಕಮ್ಮಟ ಅಷ್ಟೇ ವಿಶಿಷ್ಟವಾಗಿ ಉದ್ಘಾಟನೆಯಾಗಿದ್ದನ್ನೂ ಮಾಲಗತ್ತಿ ಅವರ ಮಾತುಗಳಲ್ಲೇ ಕೇಳಿ: "ಈ ಕಮ್ಮಟ ಚರ್ಮವಾದ್ಯಗಳ ನುಡಿತದಿಂದ ಆರಂಭವಾಗಿದ್ದು ಔಚಿತ್ಯಪೂರ್ಣವಾಗಿದೆ. ದಲಿತರಿಗೂ ಚರ್ಮಕ್ಕೂ ನಿಕಟವಾದ ಸಂಬಂಧವಿದೆ. ಕಾವ್ಯದ ಸಾಹಿತ್ಯದ ಮೀಮಾಂಸೆ ಆರಂಭವಾಗುವುದೇ ಚರ್ಮದಿಂದ. ಚರ್ಮವಾದ್ಯದ ಧ್ವನಿ ಕೇವಲ ನಾಲ್ಕು ಗೋಡೆಗಳ ನಡುವೆ ಮೊಳಗದೆ, ನಾಲ್ಕು ದಿಕ್ಕುಗಳಲ್ಲೂ ಮೊಳಗಲಿ".

ಕಮ್ಮಟದಲ್ಲಿ 25–30 ಜನ ಇರ್ತಾರೆ ಎಂದು ಬಂದಿದ್ದ ಅವರಿಗೆ ಆಶ್ಚರ್ಯ ಕಾದಿತ್ತು. 200–300 ವಿದ್ಯಾರ್ಥಿಗಳು, ಶಿಕ್ಷಕರು, ಸಾಹಿತ್ಯಾಸಕ್ತರು ಕಿಕ್ಕಿರಿದು ತುಂಬಿದ್ದರು. 'ದಲಿತ', 'ಸಂವೇದನೆ', ಆತ್ಮಕತೆ'ಗಳನ್ನು ನಿರ್ವಚಿಸುತ್ತಾ ಕಮ್ಮಟದ ಆಶಯ ಸಹ ಮಾಲಗತ್ತಿ ಅವರ ಈ ಕೆಳಗಿನ ಮಾತುಗಳಲ್ಲೇ ಅತ್ಯಂತ ಸಮರ್ಥವಾಗಿ ಮೂಡಿ ಬಂದಿದೆ.

"ದಲಿತ ಅನ್ನುವ ಪದ ಯಾವುದೇ ಜನಾಂಗವನ್ನು ಸೂಚಿಸುವಂಥದ್ದು ಅಲ್ಲವೇ ಅಲ್ಲ. ದಲಿತ ಅನ್ನುವುದು ಒಂದು ಆಲೋಚನಾಕ್ರಮ. ನವೋದಯಕ್ಕೆ ಹೇಗೆ ಒಂದು ಚಿಂತನಾಕ್ರಮ ಇದೆಯೋ ಪ್ರಗತಿಪರ ಸಾಹಿತ್ಯಕ್ಕೆ ಹೇಗೆ ಒಂದು ಚಿಂತನಾಕ್ರಮ ಇದೆಯೋ ನವ್ಯಕ್ಕೆ ಹೇಗೆ ಒಂದು ಚಿಂತನಾಕ್ರಮ ಇದೆಯೋ ಹಾಗೆಯೇ ದಲಿತವೂ ಕೂಡ ಒಂದು ಆಲೋಚನಾಕ್ರಮವನ್ನು ಪ್ರತಿನಿಧಿಸುತ್ತದೆ ವಿನಃ ಯಾವುದೇ ಜಾತಿಯನ್ನು ಅಲ್ಲ. ದಲಿತ ಅನ್ನುವ ಪದದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರೆಲ್ಲರೂ ಸೇರಿಕೊಳ್ತಾರೆ. ಮಾರ್ಕ್ಸ್'ವಾದಿ ಚಿಂತನೆಯ ಪ್ರಕಾರ ಶೋಷಣೆಗೆ ಒಳಗಾದವರೆಲ್ಲ ದಲಿತರು." "ಸಂವೇದನಾಶೀಲತೆ ಅಂದರೇನು? ಯಾವುದೇ ಸಮಾಜದ ಅನುಭವಕ್ಕೆ ಸ್ಪಂದಿಸಬಲ್ಲ ಸಾಮರ್ಥ್ಯವೇ ಸಂವೇದನೆ. ಅದು ಯಾವುದೇ ಸಮಾಜ ಇರಬಹುದು. ನಮ್ಮ ದೇಶದಲ್ಲಿ ಜಾತಿ, ಮತ, ಪಂಗಡ, ಜನಾಂಗಗಳು, ವರ್ಣ ವ್ಯವಸ್ಥೆ ಹೀಗೆ ಹಲವಾರು 'ಕಂಪಾರ್ಟ್ ಮೆಂಟ್'ಗಳಿವೆ. ಹೀಗಾಗಿ ನಮ್ಮ ದೇಶದಲ್ಲಿ ಸಂವೇದನೆ ಅನ್ನುವ ಪದಕ್ಕೆ ಎಲ್ಲಿಲ್ಲದ ಮಹತ್ವ ಇದೆ. ಸಂವೇದನೆ ಈ ಕಂಪಾರ್ಟ್ಮೆಂಟ್'ಗಳನ್ನು ಒಡೆಯುತ್ತದೆ. ಒಂದರಿಂದ ಇನ್ನೊಂದು 'ಕಂಪಾರ್ಟ್ ಮೆಂಟ್'ಗೆ ಜಿಗಿಯುತ್ತದೆ. ಒಂದು ಜಾತಿಯಿಂದ ಇನ್ನೊಂದಕ್ಕೆ, ಒಂದು ಮತದಿಂದ ಇನ್ನೊಂದಕ್ಕೆ, ಒಂದು ಧರ್ಮದಿಂದ ಇನ್ನೊಂದಕ್ಕೆ ಸ್ಪಂದಿಸುವುದು, ಒಡನಾಡುವುದು, ಬೆರೆಯುವುದು – ಇದು ಸಂವೇದನೆ. ಸಂವೇದನೆ ಸಂಚಲನ ರೂಪದ್ದು. ಅದು ಪರೋಕ್ಷವಾಗಿ ಅನುಭವ ಮತ್ತು ಅಭಿವ್ಯಕ್ತಿಯ ಮೌಲ್ಯಮಾಪನ ಮಾಡುವ ಪ್ರಕ್ರಿಯೆಗೆ ಸಹಾಯಕವಾಗುವ ಮಾಧ್ಯಮ. ನಮ್ಮಲ್ಲಿ ಸಂವೇದನೆಯ ವಿಷಯ ಬಂದಾಗ ಅಲ್ಲಿ ಜಾತಿ, ಮತ, ಪಂಥ, ಕುಲ – ಇವೆಲ್ಲವೂ ಒಳಗೊಳ್ಳುತ್ತವೆ. ಮನುಷ್ಯ ಜಾತಿ ತಾವೆಲ್ಲಾ ಒಂದೇ ಅನ್ನುವ ಭಾವನೆಯನ್ನು ಈ ಸಂವೇದನೆ ಉಂಟುಮಾಡುತ್ತದೆ. ಎಲ್ಲಿ ಸಂವೇದನಾರಹಿತ ಬದುಕು ಇದೆಯೋ ಅಲ್ಲಿ ಅಸಹಿಷ್ಣುತೆಯ ಬದುಕಿದೆ. ಆದ್ದರಿಂದ ಇಂದಿನ ಕಾಲಘಟ್ಟಕ್ಕೆ ಸಂವೇದನೆಯ ಪರಿಭಾಷೆ ಅತ್ಯಂತ ಔಚಿತ್ಯಪೂರ್ಣವಾಗಿದೆ ಮತ್ತು ಸಕಾರಾತ್ಮಕವಾಗಿದೆ."

"ಸ್ವಪ್ರತಿಷ್ಠೆಯನ್ನು ಪ್ರತಿಪಾದಿಸುವುದೇ ಆತ್ಮಕತೆ ಎನ್ನಲಾಗುತ್ತಿತ್ತು ನಾನೆಷ್ಟು ಆದರ್ಶಮಯ ಬದುಕನ್ನು ಕಳೆದೆ? ನನ್ನ ಮನೆತನ ಎಷ್ಟು ಪ್ರತಿಷ್ಠಿತವಾಗಿತ್ತು? ನನ್ನ ಸಾಧನೆಯ ಹಾದಿ ಹೇಗಿತ್ತು? ಇತ್ಯಾದಿಗಳನ್ನು ಹೇಳಿಕೊಳ್ಳುವ ಸ್ವಪ್ರಶಂಸೆಯ ಬರಹಗಳೇ ಆತ್ಮಕಥೆಗಳಾಗಿದ್ದವು. ಆದರೆ ದಲಿತ ಬಂಡಾಯದ ಕಾಲದಲ್ಲಿ ಇದು ಸಂಪೂರ್ಣ ಬದಲಾಯ್ತು. ಆತ್ಮಪ್ರತಿಷ್ಠೆಯ ಹುಡುಕಾಟ ಅಲ್ಲಿತ್ತು. ಸ್ವಪ್ರತಿಷ್ಠೆಯನ್ನು ವಿರೋಧ ಮಾಡುವುದೇ ದಲಿತ ಬಂಡಾಯದ ಮೂಲಸತ್ವವಾಯ್ತು. ಹೀಗಾಗಿ ಆತ್ಮಕಥೆಗಳು ಕೂಡ ಅಧ್ಯಯನ ಯೋಗ್ಯ, ಅಭ್ಯಾಸಯೋಗ್ಯ ಎನ್ನುವ ಆಲೋಚನಾಕ್ರಮ ಜೊತೆಗೂಡಿತು. ದಲಿತ ಆತ್ಮಕಥನಗಳು ಆತ್ಮಕಥನ ಸಾಹಿತ್ಯಕ್ಕೆ ಕೊಟ್ಟ ದೊಡ್ಡ ಕೊಡುಗೆ ಇದು. ಪರಿಕಲ್ಪನೆಯನ್ನು ಒಡೆದು ಕಟ್ಟುವ ಕ್ರಿಯೆ – ಇದು ದಲಿತ ಆತ್ಮಕಥನ ಪರಂಪರೆಯ ವೈಶಿಷ್ಟ್ಯವಾಯ್ತು."

ನನ್ನಪ್ಪನ ಸ್ವಾತಂತ್ರ್ಯ!

ಮರಾಠಿ ಆತ್ಮಕತೆಗಳಿಂದ ಪ್ರೇರಿತವಾಗಿವೆ ಎನ್ನುವ 'ಹತ್ತು ವಿಮರ್ಶೆ ಓದಿ ಹನ್ನೊಂದನೇ ವಿಮರ್ಶೆ ಬರೆಯುವ' ವಿಮರ್ಶಕರನ್ನು ತರಾಟೆಗೆ ತೆಗೆದುಕೊಂಡ ಮಾಲಗತ್ತಿ ಅವರು ಸಂರಚನೆಯಲ್ಲಿ ಕನ್ನಡ ದಲಿತ ಆತ್ಮಕತೆಗಳ ಅನನ್ಯತೆಯನ್ನು ಹೀಗೆ ವಿವರಿಸಿದರು.

"ಮರಾಠಿ ಆತ್ಮಕಥೆಗಳು ಕಾದಂಬರಿಯ ಮಾದರಿಯಲ್ಲಿ ರಚನೆಗೊಂಡಿರುವುದೇ ಹೆಚ್ಚು. ಒಂದು ಭಾಗದಿಂದ ಇನ್ನೊಂದು ಭಾಗ–ಕ್ಕೆ ಬಿಡಿಸಲಾಗದ ಸಂಬಂಧವನ್ನ ಇಟ್ಟು ಬೆಳೆಯುತ್ತಾ ಹೋಗುತ್ತವೆ. ಆದರೆ ಕನ್ನಡದ ಯಾವುದೇ ಆತ್ಮಕತೆಯನ್ನು ತೆಗೆದುಕೊಂಡರೆ, ಯಾವುದೂ ಕೂಡ ಕಾದಂಬರಿಯ ಮಾದರಿಯಲ್ಲಿ ಇಲ್ಲ. ಅವೆಲ್ಲವೂ ಕೂಡ ಘಟನೆ ಮತ್ತು ಅನುಭವಗಳು ಬಿಡಿಬಿಡಿಯಾಗಿ ಸಂಕಲನಗೊಂಡಂತಿವೆ. ಆತ್ಮಚರಿತ್ರೆ ಬೇರೆ, ಆತ್ಮಕತೆ ಬೇರೆ. ನಾನು ಗೌರ್ಮೆಂಟ್ ಬ್ರಾಹ್ಮಣ ಬರೆದು ದಶಕಗಳು ಕಳೆದಿವೆ. ಆತ್ಮಚರಿತ್ರೆಯಲ್ಲಿ ಹುಟ್ಟಿನಿಂದ ಹಿಡಿದು ಕೊನೆಯವರೆಗಿನ ಬದುಕಿನ ವಿವರಗಳು ಇರುತ್ತವೆ. ಆದರೆ ಗೌರ್ಮೆಂಟ್ ಬ್ರಾಹ್ಮಣ ನನ್ನ ಯೌವನದ ಹಂತಕ್ಕೇ ಕೊನೆಗೊಂಡಿದೆ. ಅದು ಅಪೂರ್ಣ. ಆದ್ದರಿಂದ ನಾನದನ್ನು ಆತ್ಮಕತೆ ಎಂದು ಕರೆದೆ. ಅದಕ್ಕಿಂತ ಹಿಂದೆ ಆತ್ಮಕತೆಗಳನ್ನೂ ಆತ್ಮಚರಿತ್ರೆ ಎಂದೇ ಕರೆಯಲಾಗ್ತಿತ್ತು."

ಮಾಲಗತ್ತಿಯವರ ಮಾತುಗಳಲ್ಲದೆ 2 ದಿನಗಳ ಕಮ್ಮಟದ ಇತರ ಗೋಷ್ಠಿಗಳಲ್ಲೂ ಅವರ 'ಗೌರ್ಮೆಂಟ್ ಬ್ರಾಹ್ಮಣ'ದ ಹಲವು ಪ್ರಸಂಗಗಳನ್ನು ನೆನಪಿಸಿಕೊಳ್ಳಲಾಯಿತು. ವಿಶ್ಲೇಷಿಸಲಾಯಿತು. ಅವುಗಳಲ್ಲಿ ಒಂದಂತೂ ಈಗಲೂ ದಲಿತರ ಸ್ವಾತಂತ್ರ್ಯದ ದುಸ್ಥಿತಿಯ, ಅದನ್ನು ನಿರೂಪಿಸುವ ದಲಿತ ಆತ್ಮಕತೆಗಳ ಮಹತ್ವದ ಸಮರ್ಥ ರೂಪಕವಾಗಿ ಕಮ್ಮಟದಲ್ಲಿ ಪಾಲುಗೊಂಡವರನ್ನು ಬಹಳ ಕಾಲ ಕಾಡುವ ಶಕ್ತಿಯನ್ನು ಹೊಂದಿತ್ತು. ಅದನ್ನೂ ಮಾಲಗತ್ತಿಯವರ ಮಾತುಕತೆಗಳಲ್ಲೇ ಕೇಳುವುದು ಸೂಕ್ತ:

"ಸ್ವಾತಂತ್ರ್ಯದ ವಿಷಯವಾಗಿ ನಮ್ಮ ದೇಶದ ನಾಯಕರು ಒಬ್ಬೊಬ್ಬರು ಒಂದೊಂದು ಕಲ್ಪನೆ ಇಟ್ಟು–ಕೊಂಡಿದ್ದರು. ನನ್ನಪ್ಪ, ಭಾರತಕ್ಕೆ ಸ್ವಾತಂತ್ರ್ಯ ಬಂದರೆ ಬಾವಿಗಳಿಗೆ ಸಲೀಸಾಗಿ ಹೋಗಿ ನೀರು ಸೇದಿಕೊಂಡು ಕುಡಿಯಬಹುದು ಅಂದುಕೊಂಡಿದ್ದ! ಕೊನೆಗೂ ಸ್ವಾತಂತ್ರ್ಯ ಬಂದಾಗ ಇಂದಿನಿಂದ ಊರಿನ ಎಲ್ಲಾ ಬಾವಿಗಳ ನೀರು ಸೇದಲು ತಾನು ಸ್ವತಂತ್ರ ಎಂದು ನನ್ನಪ್ಪ ಭಾವಿಸಿದ. ನೀರು ಸೇದುವಾಗ ಯಾರೂ ತಮ್ಮನ್ನು ತಡೆಯಲಾರರು ಅಂದುಕೊಂಡಿದ್ದ. ಹಾಗೆಯೇ ಸ್ವಾತಂತ್ರ್ಯ ಘೋಷಣೆಯಾದ ದಿನ ಊರಿನ ಬಹುತೇಕ ಬಾವಿಕಟ್ಟೆಗಳಿಗೆ ಹೋಗಿ ನೀರು ಮೊಗಮೊಗೆದು ಸೇದಿದ್ದ, ಅಲ್ಲೇ ಚೆಲ್ಲಿದ್ದ. ಅವನ ಸ್ವಾತಂತ್ರದ ಖುಷಿಗೆ ಮಿತಿಯಿರಲಿಲ್ಲ. ತನಗೆ ಸ್ವಾತಂತ್ರ್ಯ ದೊರೆತಿದೆ! ತಾನು ಯಾವ ಬಾವಿಯನ್ನಾದರೂ ಮುಟ್ಟಬಹುದು! ಎಲ್ಲಿಂದಲಾದರೂ ನೀರು ಪಡೆಯಬಹುದು!! ಅನ್ನೋದು ಅವನ ಸಂಭ್ರಮದ ಕಾರಣವಾಗಿತ್ತು. ಆದರೆ ಆ ಸ್ವಾತಂತ್ರ್ಯ ಒಂದೇ ದಿನಕ್ಕೆ ಮುಗಿದುಹೋಯ್ತು. ಮಾರನೇ ದಿನ, "ಬರಲಿ ಅವನು ಹೊಲೆಯ ನೀರು ಸೇದಲು, ಕಾಲು ಮುರಿಯುತ್ತೇವೆ" ಎಂದು ಊರಿನ ಸವರ್ಣೀಯರು ಬಡಿಗೆ ಹಿಡಿದು ಕಾದು ಕೂತಿದ್ದರು. ಇದು ಇಂಡಿ–ಯಾಕ್ಕೆ ಸಿಕ್ಕಿದ ಸ್ವಾತಂತ್ರ, ಇದು ದಲಿತರಿಗೆ ಸಿಕ್ಕಿದ ಸ್ವಾತಂತ್ರ, ಶೋಷಿತರಿಗೆ ದೊರಕಿದ ಸ್ವಾತಂತ್ರ್ಯ."

"ನನ್ನ ಮಾಜಿ ಪ್ರೇಯಸಿ', 'ಬೆದೆಗೆ ಬಿದ್ದ ಎಮ್ಮೆ ಮತ್ತು ಓಡಿ ಬಂದ ಕೋಣ', 'ಹೆಣದ ದುಡ್ಡು ಮತ್ತು ಮದುವೆಯ ಊಟ', 'ನಾಳಿನ ಕಸದ ಪಾಳಿ: ಮಾಲಕತ್ತಿ' – 'ಗೌರ್ಮೆಂಟ್ ಬ್ರಾಹ್ಮಣ'ದ ಈ ಮನಕಲಕುವ ಪ್ರಸಂಗಗಳು ಕಮ್ಮಟದ ಉದ್ದಕ್ಕೂ ಪದೇ ಪದೇ ಮಾರ್ದನಿಗೊಂಡವು. 'ಗೌರ್ಮೆಂಟ್ ಬ್ರಾಹ್ಮಣ' ಅಲ್ಲದೆ, ಸಿದ್ಧಲಿಂಗಯ್ಯ ಅವರ 'ಊರು–ಕೇರಿ', ದು. ಸರಸ್ವತಿ ಅವರ 'ಈಗೇನ್ಮಾಡೀರಿ', ವಿಜಯ ಸಿಗರನಹಳ್ಳಿ ಅವರ 'ಬೂದಿಯಾಗದ ಕೆ–ಂಡ' – ಈ ದಲಿತ ಆತ್ಮಕತೆಗಳು ಸಹ ಕಮ್ಮಟದ ಉದ್ದಕ್ಕೂ ಮಾರ್ದನಿಗೊಂಡವು. ಗೋಷ್ಠಿಗಳ ವಿಶ್ಲೇಷಣೆಗಳಲ್ಲೂ, ಮೊದಲ ದಿನ ಸಂಜೆ ಗಣೇಶ್ ಉಡುಪಿ ಮತ್ತು ತಂಡ ನಡೆಸಿಕೊಟ್ಟ ರಂಗ ಪ್ರಯೋಗದಂತೆ ಇದ್ದ 'ಆತ್ಮಕತೆ ವಾಚನ'ದಲ್ಲೂ, ಚರ್ಚೆ ಸಂವಾದಗಳಲ್ಲೂ. ಈ ಆತ್ಮಕತೆಗಳ ಆಯ್ದ ಭಾಗಗಳನ್ನು ವಾಚನಾಭಿರುಚಿ ಕಮ್ಮಟದಲ್ಲಿ ಓದಿಗಾಗಿ ಆಯ್ದು ಕಮ್ಮಟದಲ್ಲಿ ಭಾಗವಹಿಸಿದವರಿಗೆ ಕೊಡಲಾಗಿತ್ತು.

ವ್ಯಾಪಕ ಸಂವಾದ

ಕಮ್ಮಟದ ಭಾಗವಾಗಿ 4 ಸಂವಾದಗಳು ನಡೆದವು. ಸಂವಾದ–1 ರಲ್ಲಿ ಡಾ. ನಟರಾಜ ಹುಳಿಯಾರ್ 'ಆತ್ಮಕತೆಗಳು: ಸ್ವ, ಸಮಾಜ, ಸಂಸ್ಕೃತಿ' ಬಗ್ಗೆ ಮಾತನಾಡಿದರು. ಅವರು ಆತ್ಮಕತೆಗಳ ಮನೋವೈಜ್ಞಾನಿಕ, ತಾತ್ವಿಕ, ಸಾಹಿತ್ಯಕ ಆಯಾಮಗಳ ಅನಾವರಣ ಮಾಡುತ್ತಾ, ಜಗತ್ತಿನ ಹಲವು ಪ್ರಸಿದ್ಧ ಆತ್ಮಚರಿತ್ರೆ/ಆತ್ಮಕತೆಗಳ ಉದಾಹರಣೆಗಳೊಂದಿಗೆ ಅವುಗಳ ಸಂಕೀರ್ಣ ವೈವಿಧ್ಯಮಯ ಲೋಕದ ಪರಿಚಯ ನೀಡಿದರು. ಸಂವಾದ–2 ರಲ್ಲಿ "ದಲಿತ ಆತ್ಮಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ"ದ ಬಗ್ಗೆ ಡಾ. ಅನುಸೂಯಾ ಕಾಂಬಳೆ ಮಾತನಾಡುತ್ತ ಪುರುಷ ಮತ್ತು ಮಹಿಳೆಯರ ಆತ್ಮಕತೆಗಳಲ್ಲಿ ಮಹಿಳೆಯರನ್ನು ಪ್ರತಿನಿಧಿಸಿದ ಬಗೆಗಳಲ್ಲಿ ಇರುವ ವ್ಯತ್ಯಾಸಗಳ ಬಗ್ಗೆ ವಿಶ್ಲೇಷಿಸಿದರು. ಬಿ.ಎಂ. ರೋಹಿಣಿ ಮತ್ತು ಜ್ಯೋತಿ ಚೇಳ್ಯಾರು ಈ ಸಂವಾದವನ್ನು ತಮ್ಮ ಮಾತುಗಳಿಂದ ವಿಸ್ತರಿಸಿದರು.

ಸಂವಾದ–3 "ದಲಿತ ಆತ್ಮಕತೆಗಳಲ್ಲಿ ಪ್ರಭುತ್ವ ಮತ್ತು ಪರ್ಯಾಯದ ಒಳನೋಟ"ಗಳ ಬಗ್ಗೆ ಇತ್ತು. ಡಾ. ಬಿ.ಎಂ.ಪುಟ್ಟಯ್ಯ 'ಗೌರ್ಮೆಂಟ್ ಬ್ರಾಹ್ಮಣ' 'ಊರುಕೇರಿ' ಮತ್ತು 'ಈಗೇನ್ಮಾಡೀರಿ' ಗಳನ್ನು ನಿರ್ದಿಷ್ಟವಾಗಿ ತೆಗೆದುಕೊಂಡು ಇವುಗಳಲ್ಲಿ ಪ್ರಭುತ್ವ ಮತ್ತು ಪರ್ಯಾಯದ ಧೋರಣೆಯಲ್ಲಿ ಇರುವ ಮೂರು ಮಾದರಿಗಳನ್ನು ನಿರೂಪಿಸಿದರು. ಇವುಗಳಲ್ಲಿ ಸಾಮಾನ್ಯವಾಗಿರುವ – ಹಸಿವು, ಅಪಮಾನ, ಅನ್ಯಾಯಗಳ ಚಿತ್ರಣ; ಮಾಡದ ಅಪರಾಧಕ್ಕಾಗಿ ಶಿಕ್ಷೆ, ಊಳಿಗಮಾನ್ಯ ಪ್ರಭುತ್ವದ ಊಹೆಗೂ ಸಿಗಲಾರದ ಕ್ರೌರ್ಯದ ಅನಾವರಣದ ಬಗ್ಗೆ ಹೇಳುತ್ತಾ, ಪ್ರಭುತ್ವದ ಗ್ರಹಿಕೆ ಹಾಗೂ ಪರ್ಯಾಯ ಸೂಚನೆಯಲ್ಲಿರುವ ವ್ಯತ್ಯಾಸಗಳನ್ನು ಮಂಡಿಸಿದರು. ಡಾ. ಕಿರಣ್ ಗಾಜನೂರು, ಹರ್ಷಕುಮಾರ್ ಕುಗ್ವೆ ತಮ್ಮ ಮಾತುಗಳಿಂದ ಸಂವಾದವನ್ನು ವಿಸ್ತರಿಸಿದರು. 'ದಲಿತ ಆತ್ಮಕತೆಗಳಲ್ಲಿ ರಾಷ್ಟ್ರದ ಕಲ್ಪನೆ' ಬಗ್ಗೆ ಪ್ರೊ. ಉದಯ ಬಾರ್ಕೂರು ಸಂವಾದವನ್ನು ಆರಂಭಿಸಿದರು. ಸಾಹಿತ್ಯ ಇತಿಹಾಸ ಕಟ್ಟುವ ಒಂದು ಆಕರವಾಗಿದೆ. ಅದರಲ್ಲಿ ಆತ್ಮಕತೆಗಳ, ಅದರಲ್ಲೂ ದಲಿತ ಆತ್ಮಕತೆಗಳ ಪಾತ್ರದ ಬಗ್ಗೆ ಹಾಗೂ ಅವುಗಳಲ್ಲಿ ರಾಷ್ಟ್ರದ ಕಲ್ಪನೆ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದರು. ಡಾ. ವಾಸುದೇವ ಬೆಳ್ಳೆ ಮತ್ತು ಡಾ. ಲತಾ ಈ ಸಂವಾದವನ್ನು ತಮ್ಮ ಮಾತುಗಳಿಂದ ವಿಸ್ತರಿಸಿದರು.

ಕಮ್ಮಟದ ನಿರ್ದೇಶಕರಾಗಿದ್ದ ಡಾ. ವಿಠ್ಠಲ ಭಂಡಾರಿ ಪ್ರಾಸ್ತಾವಿಕ ಮಾತುಗಳನ್ನು ಆಡಿದ್ದಲ್ಲದೆ ಪ್ರತಿ ಗೋಷ್ಠಿಯ ಕೊನೆಗೆ ಕಮ್ಮಟದಲ್ಲಿ ಪಾಲುಗೊಂಡವರೊಡನೆ ಸಂವಾದವನ್ನು ನಡೆಸಿದರು. ಅನ್ನ–ಅಕ್ಷರಗಳಿಗಾಗಿ ದಲಿತರು ಪಡುವ ಪರಿಪಾಟಲು, ನಿಜವಾದ ಕರ್ನಾಟಕದ ಅದರಲ್ಲೂ ಅಂಚಿನಲ್ಲಿರುವವರ ಸ್ಥಿತಿ, ಪ್ರಾಚೀನ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಆತ್ಮಕತೆಗಳ ಅಸ್ತಿತ್ವ, ಪಾಶ್ಚಿಮಾತ್ಯ ಭಾರತೀಯ ಆತ್ಮಕತೆಗಳ ಪರಿಕಲ್ಪನೆಗಳಲ್ಲಿ ವ್ಯತ್ಯಾಸ, ರಾಷ್ಟ್ರದ ಕಲ್ಪನೆಗೆ ಕೊಟ್ಟ ಶಾಕ್, ದಲಿತ ಮತ್ತು ಇತರ ಆತ್ಮಕತೆಗಳ ಗುಣಾತ್ಮಕ ವ್ಯತ್ಯಾಸಗಳು, ಭಾರತದ ಬಹುರೂಪಿ ಅಸ್ಮಿತೆಗೆ ಹಿಡಿದ ಕನ್ನಡಿ – ಇತ್ಯಾದಿಗಳ ಬಗ್ಗೆ ಆತ್ಮಕತೆಗಳ ಸಂದರ್ಭದಲ್ಲಿ ಸಂವಾದ ನಡೆಯಿತು. ●

JANASHAKTHI KANNADA VARA PATRIKE SEPT 25, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಜೆಎನ್‌ಯು ಚುನಾವಣೆಗಳಲ್ಲಿ ಎಡಶಕ್ತಿಗಳಿಗೆ ಭಾರೀ ಗೆಲವು ದಿಲ್ಲಿ ವಿವಿಯಲ್ಲೂ ಎಬಿವಿಪಿಗೆ ಗಮನಾರ್ಹ ಹಿನ್ನಡೆ

ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳಾದ ಎಸ್‌ಎಫ್‌ಐ ಮತ್ತು ಎಐಎಸ್‌ಎ ನ 'ಐಕ್ಯ ಎಡ' ಮೈತ್ರಿಕೂಟ ಸಪ್ಟಂಬರ್ 9ರಂದು ನಡೆದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾರೀ ಗೆಲುವು ಸಾಧಿಸಿದೆ. ಅದು ಎಲ್ಲ ನಾಲ್ಕು ಪದಾಧಿಕಾರಿಗಳ ಸ್ಥಾನಗಳನ್ನು ಗೆದ್ದುಕೊಂಡಿರುವುದಲ್ಲದೆ, ವಿವಿಯ ವಿವಿಧ ವಿಭಾಗಗಳಲ್ಲಿ ಈ ಎಡಕೂಟದ ಅಭ್ಯರ್ಥಿಗಳು ಜಯಗಳಿಸಿದ್ದಾರೆ. 'ರಾಷ್ಟ್ರೀಯವಾದ'ದ ಹೆಸರಿನಲ್ಲಿ ಪ್ರಚಾರ ನಡೆಸಿದ, ಸಂಘ ಪರಿವಾರದ ವಿದ್ಯಾರ್ಥಿ ಸಂಘಟನೆ ಎಬಿವಿಪಿಗೆ 31 ಪ್ರತಿನಿಧಿ ಸ್ಥಾನಗಳಲ್ಲಿ ಒಂದು ಮಾತ್ರ ಸಿಕ್ಕಿದೆ.

ಅಧ್ಯಕ್ಷರಾಗಿ ಎಐಎಸ್‌ಎ ನ ಮೊಹಿತ್ ಕುಮಾರ್ ಪಾಂಡೆ ತಮ್ಮ ಹತ್ತಿರದ ಪ್ರತಿಸ್ಪರ್ಧಿಯನ್ನು 409 ಮತಗಳ ಅಂತರದಿಂದ ಗೆದ್ದಿದ್ದಾರೆ. ಮೊಹಿತ್‌ಗೆ 1954 ಮತಗಳು ಸಿಕ್ಕಿದ್ದರೆ, ಬಿಎಪಿಎಸ್‌ಎ(ಬಿರ್ಸ ಅಂಬೇಡ್ಕರ್ ಪುಲೆ ವಿದ್ಯಾರ್ಥಿ ಸಂಘ) ಯ ಅಭ್ಯರ್ಥಿಗೆ 1545 ಮತಗಳು ಸಿಕ್ಕಿವೆ. 1048 ಮತ ಪಡೆದ ಎಬಿವಿಪಿಯ ಅಭ್ಯರ್ಥಿ ಮೂರನೇ ಸ್ಥಾನದಲ್ಲಿದ್ದರು.

ಪ್ರಧಾನ ಕಾರ್ಯದರ್ಶಿಯಾಗಿ ಎಸ್‌ಎಫ್‌ಐ ನ ಶತರೂಪಾ ಚಕ್ರವರ್ತಿ 2424 ಮತಗಳನ್ನು ಪಡೆದು ಹತ್ತಿರದ ಎಬಿವಿಪಿ ಪ್ರತಿಸ್ಪರ್ಧಿಯನ್ನು 1094 ರ ಭಾರೀ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಎಬಿವಿಪಿ ಅಭ್ಯರ್ಥಿಗೆ ಸಿಕ್ಕ ಮತಗಳು 1330. ಬಿಎಪಿಎಸ್‌ಎ ಅಭ್ಯರ್ಥಿ 856 ಮತ ಪಡೆದು ಮೂರನೇ ಸ್ಥಾನದಲ್ಲಿದ್ದಾರೆ.

ಉಪಾಧ್ಯಕ್ಷರಾಗಿ ಎಸ್‌ಎಫ್‌ಐ ನ ಅಮಲ್ ಪಿ ಪಿ 2464 ಮತಗಳನ್ನು ಪಡೆದು 1307 ಮತಗಳ ಭಾರೀ ಅಂತರದಿಂದ ಆಯ್ಕೆಯಾಗಿದ್ದಾರೆ. ಸಮೀಪದ ಎಬಿವಿಪಿ ಪ್ರತಿಸ್ಪರ್ಧಿಗೆ ದೊರೆತ ಮತಗಳು 1157. ಇಲ್ಲಿಯೂ ಬಿಎಪಿಎಸ್‌ಎ ಅಭ್ಯರ್ಥಿ 796 ಮತಗಳನ್ನು ಪಡೆದು ಮೂರನೇ ಸ್ಥಾನದಲ್ಲಿದ್ದಾರೆ.

ಜೊತೆ ಕಾರ್ಯದರ್ಶಿಯಾಗಿ ಎಐಎಸ್‌ಎ ನ ತಬ್ರೇಝ್ ಹಸನ್ 362 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಅವರಿಗೆ 1670 ಮತಗಳು ಸಿಕ್ಕಿದ್ದರೆ, ಹತ್ತಿರ ಡಿಎಸ್‌ಎಫ್ ಪ್ರತಿಸ್ಪರ್ಧಿಗೆ 1234 ಮತಗಳು ಸಿಕ್ಕಿವೆ. ಕಳೆದ ಚುನಾವಣೆಗಳಲ್ಲಿ ಈ ಹುದ್ದೆಯನ್ನು ಪಡೆದಿದ್ದ ಎಬಿವಿಪಿಯ ಈ ಬಾರಿಯ ಅಭ್ಯರ್ಥಿ 968 ಮತಗಳನ್ನು ಪಡೆದು ಮೂರನೇ ಸ್ಥಾನಕ್ಕೆ ಇಳಿದಿದ್ದಾರೆ. ಬಿಎಪಿಎಸ್‌ಎ ಅಭ್ಯರ್ಥಿ 608 ಮತಗಳನ್ನು ಪಡೆದಿದ್ದಾರೆ.

ವಿಭಾಗಾ ಪ್ರತಿನಿಧಿ ಸ್ಥಾನಗಳಲ್ಲಿ ಜೆನ್‌ಯುನ ಮೂರು ದೊಡ್ಡ ವಿಭಾಗಗಳಾದ ಸಾಮಾಜಿಕ ವಿಜ್ಞಾನಗಳು, ಭಾಷೆಗಳು ಮತ್ತು ಅಂತರ್‍ರಾಷ್ಟ್ರೀಯ ಅಧ್ಯಯನ ವಿಭಾಗಗಳಲ್ಲಿ 15ರಲ್ಲಿ 14ರಲ್ಲಿ ಎಡ ಮೈತ್ರಿಕೂಟದ ಅಭ್ಯರ್ಥಿಗಳು ಗೆದ್ದಿದ್ದಾರೆ. ಕಲಾ ಮತ್ತು ಸೌಂದರ್ಯ ಶಾಸ್ತ್ರ ಮತ್ತು ಅರೆಕಾಲಿಕ ಕೋರ್ಸ್‌ಗಳ ವಿಭಾಗದಲ್ಲಿಯೂ ಎಡ ಐಕ್ಯತೆಯ ಅಭ್ಯರ್ಥಿಗಳು ಗೆದ್ದಿದ್ದಾರೆ. ವಿಜ್ಞಾನ ವಿಭಾಗಗಳು ಮತ್ತು ಕಾನೂನು ಮತ್ತು ಆಡಳಿತ ಅಧ್ಯಯನಗಳ ವಿಭಾಗದಲ್ಲಿ ಸ್ವತಂತ್ರ ಅಭ್ಯರ್ಥಿಗಳು ಗೆದಿದ್ದಾರೆ. ಸಂಸ್ಕೃತ ವಿಭಾಗದಲ್ಲಿ ಮಾತ್ರವೇ ಎಬಿವಿಪಿಗೆ ಒಂದು ಸ್ಥಾನ ದೊರೆತಿದೆ.

ಈ ಮೂಲಕ ವಿಚಾರ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ಜೆಎನ್‌ಯುವನ್ನು ಬೆಂಬಲಿಸಿದ ಶಕ್ತಿಗಳು ಗೆದ್ದಿವೆ, ಈ ಹೋರಾಟದ ವೇಳೆಯಲ್ಲಿ ಜೆಎನ್‌ಯು ಮುಚ್ಚಬೇಕೆಂಬ ಬಲಪಂಥೀಯರ ಪ್ರಚಾರದ ಪರವಾಗಿ ನಿಂತವರು ಭಾರೀ ಮುಖಭಂಗ ಅನುಭವಿಸಿದ್ದಾರೆ ಎಂದು ಎಸ್‌ಎಫ್‌ಐ ಹೇಳಿದೆ.

ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆ ನಡೆದ ವಿಜಯೋತ್ಸವದಲ್ಲಿ ಅಪಾರ ಸಂಖ್ಯೆಯ ಜೆಎನ್‌ಯು ವಿದ್ಯಾರ್ಥಿಗಳು ಭಾಗವಹಿಸಿದರು. ಮಧ್ಯರಾತ್ರಿಯ ವರೆಗೂ ನಡೆದ ಸಭೆಯುನ್ನುದ್ದೇಶಿಸಿ ಹೊಸದಾಗಿ ಆಯ್ಕೆಯಾದ ಜೆಎನ್‌ಯು ವಿದ್ಯಾರ್ಥಿ ಸಂಘದ ಮುಖಂಡರು ಮಾತನಾಡಿ, ಶಿಕ್ಷಣವನ್ನು ವ್ಯಾಪಾರವಾಗಿಸುವ, ಕೋಮುಗ್ರಸ್ತಗೊಳಿಸುವ ಆಳುವ ವರ್ಗದ ಪ್ರಯತ್ನಗಳನ್ನು ದೃಢವಾಗಿ ವಿರೋಧಿಸಿದ್ದಕ್ಕಾಗಿ ಜೆಎನ್‌ಯು ವಿದ್ಯಾರ್ಥಿಗಳಿಗೆ ಕೃತಜ್ಞತೆ ಸಲ್ಲಿಸಿದರು.



ಇದೇ ವೇಳೆಯಲ್ಲಿ ದಿಲ್ಲಿ ವಿಶ್ವದ್ಯಾಲಯ ವಿದ್ಯಾರ್ಥಿ ಸಂಘಕ್ಕೂ ಚುನಾವಣೆಗಳು ನಡೆದಿದ್ದು ಅಲ್ಲಿಯೂ ಎಬಿವಿಪಿ ಹಿನ್ನಡೆ ಎದುರಿಸಿದೆ. 2015ರ ಮತ್ತು 2014 ರ ಚುನಾವಣೆಗಳಲ್ಲಿ ಎಲ್ಲ ನಾಲ್ಕು ಸ್ಥಾನಗಳಲ್ಲಿ ಗೆದ್ದಿದ್ದ ಅದು ಈ ಬಾರಿ ಅದು ಒಂದು ಸ್ಥಾನವನ್ನು ಕಳಕೊಂಡಿದೆ, ಜೊತೆ ಕಾರ್ಯದರ್ಶಿ ಹುದ್ದೆಯನ್ನು ಎನ್‌ಎಸ್‌ಯುಐ ಪಡೆದಿದೆ. ಅದರ ಮತಪಾಲು ಕೂಡ ಕಡಿಮೆಯಾಗಿದೆ ಎಂದು ವರದಿಯಾಗಿದೆ, ಮೊದಲ ಬಾರಿಗೆ ಎಡಪಂಥೀಯ ಎಐಎಸ್‌ಎ ಇಲ್ಲಿ 20ಶೇ.ದಷ್ಟು ಮತಗಳಿಸಿದೆ ಎಂದು ವರದಿಯಾಗಿದೆ.

ಈ ಚುನಾವಣೆಗಳಲ್ಲಿ ದಿಲ್ಲಿ ವಿಶ್ವವಿದ್ಯಾಲಯದ 36ಶೇ. ವಿದ್ಯಾರ್ಥಿಗಳು ಮಾತ್ರ ಭಾಗವಹಿಸಿದ್ದಾರೆ. ಇದು ಕಳೆದ ವರ್ಷಕ್ಕಿಂತ 7ಶೇ.ದಷ್ಟು ಕಡಿಮೆ.

ಆದರೆ ಜೆಎನ್‌ಯು ಚುನಾವಣೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಪ್ರಮಾಣ ಮಾತ್ರ ಈ ಬಾರಿ 60ಶೇ.ವನ್ನು ದಾಟಿತು. ಕಳೆದೆರಡು ವರ್ಷಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಈ ಬಾರಿ ಚುನಾವಣೆಗಳಲ್ಲಿ ಭಾಗವಹಿಸಿದ್ದಾರೆ ಎಂಬುದು ಗಮನಾರ್ಹ.

ತಕ್ಕ ಪ್ರತ್ಯುತ್ತರ ಎಂದರೆ ಇದೇ, ಇದು ಜೆಎನ್‌ಯು ವಿದ್ಯಾರ್ಥಿಗಳಿಂದ ಬಂದಿದೆ, ಲಾಲ್ ಸಲಾಮ್

–ಸೀತಾರಾಮ್ ಯೆಚೂರಿ

ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣೆಗಳ ಫಲಿತಾಂಶಗಳ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರ ಪ್ರತಿಕ್ರಿಯೆ ಹೀಗಿತ್ತು. ಯೆಚೂರಿಯವರು 1977ರಲ್ಲಿ ಇದೇ ಜೆಎನ್‌ಯು ವಿದ್ಯಾರ್ಥಿ ಸಂಘದ ಅ ಧ್ಯಕ್ಷರಾಗಿ ಚುನಾಯಿತರಾಗಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಈ ಫೆಬ್ರುವರಿ ತಿಂಗಳಲ್ಲಷ್ಟೇ ಆರೆಸ್ಸೆಸ್–ಬಿಜೆಪಿ ಜಾಲ ತಮ್ಮೆಲ್ಲ ವಿಚಾರಗಳಿಗೆ ವಿರುದ್ಧವಾದುದರ ಸಂಕೇತವಾಗಿರುವ ಜೆಎನ್‌ಯು ಮೇಲೆ ದಾಳಿಯನ್ನು ಕೇಂದ್ರೀಕರಿಸಲು ನಿರ್ಧರಿಸಿತು. ರಾಜದ್ರೋಹದ ಆಪಾದನೆಯಿಂದ ಹಿಡಿದು, ಕೋರ್ಟ್ ಆವರಣದಲ್ಲಿ ಜನಜಂಗುಳಿಯ ಹಿಂಸಾಚಾರ, ಪ್ರಾಯೋಜಿತ ಪ್ರತಿಭಟನೆಗಳು, ತರಗತಿಯಿಂದ ತೆಗೆದು ಹಾಕಿದ್ದು, ಹುಸಿ ವೀಡಿಯೋಗಳ ತಯಾ–ರಿಯ ವರೆಗೆ ಜೆಎನ್‌ಯು ವಿದ್ಯಾರ್ಥಿಗಳು ಎಂತೆಂತಾ ಘೋರ ಅನುಭವಗಳ ಮೂಲಕ ಹಾದು ಬರಬೇಕಾಯಿತು" ಎಂದು ಅವರು ತಮ್ಮ ಅಭಿನಂದನಾ ಸಂದೇಶದಲ್ಲಿ ನೆನಪಿಸಿಕೊಂಡಿದ್ದಾರೆ.

"ಬಿಜೆಪಿ–ಆರೆಸ್ಸೆಸ್‌ನವರು ಜೆಎನ್‌ಯು ಮೇಲೆ ವಿಶೇಷವಾಗಿ ಗುರಿಯಿಡಲು ಕಾರಣವಿದೆ. ಜೆಎನ್‌ಯು, ನಿಜವಾದ ಅರ್ಥದಲ್ಲಿ ನಾವು ಬದಯಕುತ್ತಿರುವ ಈ ದೇಶದ ಒಂದು ಅಣುರೂಪ. ಭಾರತದ ಎಲ್ಲೆಡೆಗಳ; ವಿವಿಧ ಸಮುದಾಯಗಳ–ಹಿಂದುಳಿದ, ದಮನಿತ ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ– ಜನಗಳನ್ನು ನೀವಿಲ್ಲಿ ಕಾಣುತ್ತೀರಿ, ಮತ್ತು ಮಹಿಳೆಯರು ಎಲ್ಲರನ್ನೂ ಸಮಾನ ಸ್ತರದಲ್ಲಿ ಕಾಣುತ್ತೀರಿ.ಇದು ನಿಜವಾದ ಆಕಾಂಕ್ಷೆಭರಿತ ಭಾರತ–ಒಂದು ಉತ್ತಮ ಸಮಾಜ, ಒಂದು ಹೆಚ್ಚು ಸಮಾನವಾದ ಸಮಾಜ, ಎಲ್ಲರಿಗೂ ಸಮಾನ ಅವಕಾಶಗಳಿರುವ ಸಮಾಜವನ್ನು ನಿರ್ಮಿಸಬೇಕೆಂಬ ಅಕಾಂಕ್ಷೆ ಹೊತ್ತವರು. ಅವರ ಆಕಾಂಕ್ಷೆಯನ್ನು ಜ್ವಲಂತಗೊಳಿಸುವುದು ಪ್ರಗತಿಪರ ಮೌಲ್ಯಗಳು, ಲಿಂಗ, ಜಾತಿ, ಮತಗಳ 'ಭೇದಭಾವ ಎಣಿಸದ, ಆದರೆ ಅವರ ಕನಸುಗಳ ಭಾರತವನ್ನು ಕಟ್ಟ ಬಯಸುವ ಮೌಲ್ಯಗಳು. ಈ ಆಕಾಂಕ್ಷೆಯೇ ಬಿಜೆಪಿ–ಆರೆಸ್ಸೆಸ್‌ನವರನ್ನು ಎದೆಗುಂದಿಸುತ್ತಿರುವುದು" ಎಂದು ಯೆಚೂರಿ ಅಭಿಪ್ರಾಯ ಪಡುತ್ತಾರೆ.

ಮುಂದುವರೆದು ಅವರು "ಜೆಎನ್‌ಯುಎಸ್‌ಯು ನಲ್ಲಿ ನಾವೊಂದು ಮಹತ್ವದ ವಿಜಯ ಗಳಿಸಿದ್ದೇವೆ. ಆದರೆ ಇದು ಒಂದು ಕಾಳಗವಷ್ಟೇ. ಬಿಜೆಪಿ–ಆರೆಸ್ಸೆಸ್‌ನ ವಿರುದ್ಧ, ಅದರ ವಿಷಕಾರೀ ಸಿದ್ಧಾಂತದ ವಿರುದ್ಧ ಯುದ್ಧವನ್ನು ಗೆಲ್ಲಬೇಕಾದರೆ ಇನ್ನೂ ಹಲವು ಇಂತಹ ಕಾಳಗಗಳನ್ನು ಗೆಲ್ಲಬೇಕಾಗಿದೆ. ನಾವು ಈ ಹೋರಾಟಕ್ಕೆ ನಮ್ಮನ್ನು ಮತ್ತೆ ಸಮರ್ಪಿಸಿಕೊಳ್ಳಲು ಈ ಸಂದರ್ಭವನ್ನು ಬಳಸೋಣ" ಎಂದು ಯೆಚುರಿ ಕರೆ ನೀಡಿದ್ದಾರೆ.

"ಎಪ್ರಿಲ್ 1977ರಲ್ಲಿ, ನಾನು ಜೆಎನ್‌ಯುಎಸ್‌ಯು ನ ಅಸಾಧ್ಯವೆನಿಸುವ ಚುನಾವಣೆಯನ್ನು ಗೆದ್ದಾಗ, ನಾವು ಈ ವಿಜಯ–ಕ್ಕೆ ಜೆಎನ್‌ಯು ವಿದ್ಯಾರ್ಥಿಗಳಿಗೆ ಧನ್ಯವಾದ ಹೇಳುವುದಷ್ಟೇ ಅಲ್ಲ, ಎಡಪಂಥದ ಮೇಲೆ ತಮ್ಮ ನಂಬಿಕೆ ಇಟ್ಟುದಕ್ಕೆ ಮತ್ತು ಒಂದು ಉತ್ತಮ ಭಾರತದ ನಿರ್ಮಾಣ ಮಾಡುವ ಅವರ ಹೋರಾಟಕ್ಕೆ ನಾವು ಅವರನ್ನು ನಮಿಸುತ್ತೇವೆ ಎಂದು ಹೇಳಿದ್ದೆ. ಇಂದು ಮತ್ತೆ ನಾವು ಅವರನ್ನು ನಮಿಸುತ್ತೇವೆ. ಲಾಲ್ ಸಲಾಮ್" ಎಂದು ಸೀತಾರಾಮ್ ಯೆಚೂರಿಯವರು ತಮ್ಮ ಶುಭಾಶಯವ ಸಂದೇಶವನ್ನು ಕೊನೆಗೊಳಿಸಿದ್ದಾರೆ.

ಹೆಚ್.ಆರ್. ನವೀನ್‌ಕುಮಾರ್



Source: SWFI, RTWFI, WTWFI, EWFI, CWFI, CWFI, PWFI, PGWFI

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**